ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ13 | ಸಂಚಿಕೆ 33 | ಆಗಸ್ಟ್ 12-18, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಶ್ರೀನಗರ ವಿಮಾನ ನಿಲ್ದಾಣದಲ್ಲಿ ಸ್ಥಾನಬದ್ಧತೆಯಲ್ಲಿ ಸೀತಾರಾಂ ಯೆಚೂರಿ & ಡಿ. ರಾಜ





ಜಮ್ಮು-ಕಾಶ್ಮೀರದ ಮೇಲೆ ಸರ್ವಾಧಿಕಾರದ ಪ್ರಹಾರ

ನಮ್ಮ ಬಿಡುಗಡೆಗಾಗಿ ಬಂಡವಾಳ ಓದಬೇಕು

- ಬರಗೂರು



ಕ್ಯೂಬಾ ಕ್ರಾಂತಿಗೆ 60 ರ ಸಂಭ್ರಮ





ಯಡ್ಡಿ ಏಕಾಧಿಪತ್ಯಕ್ಕೆ ಕೊನೆ ಎಂದು? ಸಂತ್ರಸ್ತರಿಗೆ ಪುನರ್ವಸತಿ ಸಿಗುವುದೆಂದು?

ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಕೊಲೆ

"ಜಮ್ಮು ಮತ್ತು ಕಾಶ್ಮೀರ ರಾಜ್ಯದ ನಾಶವನ್ನು ನಿಲ್ಲಿಸಿ, ಸಂವಿಧಾನದ ಕಲಮು 370ನ್ನು ರಕ್ಷಿಸಿ"

ಸಿಪಿಐ(ಎಂ) ಪೊಲಿಟ್ ಬ್ಯುರೊ ಕರೆ

ಮೋದಿ ಸರಕಾರ ಸಂವಿಧಾನದ ಕಲಮು 370 ರ ವಜಾ ಹಾಗೂ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕಳಚಿ ಹಾಕುವ ಮೂಲಕ ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಒಂದು ಆಘಾತವನ್ನು ಉಂಟುಮಾಡಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗಸ್ಟ್ 5ರಂದು ನೀಡಿದ ಹೇಳಿಕೆ ಖಂಡಿಸಿದೆ.

ಪಾಕಿಸ್ತಾನದಿಂದ ಅತಿಕ್ರಮಣಕೋರರು ಬರುತ್ತಿದ್ದಾಗ ಕಾಶ್ಮೀರದ ಜನತೆ ಅವರನ್ನು ಎದುರಿಸಿ ಭಾರತವನ್ನು ಸೇರಿಕೊಂಡರು. ಭಾರತದ ಪ್ರಭುತ್ವ ಅವರಿಗೆ ವಿಶೇಷ ಸ್ಥಾನಮಾನವನ್ನು ಮತ್ತು ಸ್ವಾಯತ್ತತೆಯನ್ನು ಕೊಡಮಾಡುವ ಒಂದು ಗಂಭೀರ ವಾಗ್ದಾನ ಮಾಡಿತು. ಇದು ಕಲಮು 370ರಲ್ಲಿ ಮೈದಾಳಿದೆ. ಈ ವಾಗ್ದಾನವನ್ನು ಮುರಿಯುವ ಮೂಲಕ ಮೋದಿ ಸರಕಾರ ಜಮ್ಮು ಮತ್ತು ಕಾಶ್ಮೀರದ ಜನತೆಗೆ ವಿಶ್ವಾಸಘಾತ ಮಾಡಿದೆ.

ಭಾರತದ ಐಕ್ಯತೆ ಅದರ ವೈವಿಧ್ಯತೆಯಲ್ಲಿ ಹುದುಗಿದೆ ಎಂಬುದು ಸಾರ್ವತ್ರಿಕವಾಗಿ ಒಪ್ಪುತ್ತಿರುವ ಸಂಗತಿ. ಬಿಜೆಪಿ–ಆರೆಸ್ಸೆಸ್ ಮುಖಂಡರು ಯಾವುದೇ ವೈವಿಧ್ಯತೆಯನ್ನು ಮತ್ತು ಒಕ್ಕೂಟ ತತ್ವವನ್ನು ಸಹಿಸುವುದಿಲ್ಲ. ಅವರು ಜಮ್ಮು ಮತ್ತು ಕಾಶ್ಮೀರವನ್ನು ಒಂದು ಆಕ್ರಮಿತ ಪ್ರದೇಶದಂತೆ ಕಾಣುತ್ತಿದ್ದಾರೆ. ಸಂವಿಧಾನವನ್ನು ತುಳಿದು ಅವರು ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ಪರಿವರ್ತಿಸಿದ್ದಾರೆ. ಇದು ರಾಷ್ಟ್ರೀಯ ಐಕ್ಯತೆಗೆ ಮತ್ತು ಭಾರತವು ರಾಜ್ಯಗಳ ಒಂದು ಒಕ್ಕೂಟ ಎಂಬ ಪರಿಕಲ್ಪನೆಯ ಮೇಲೆ ಒಂದು ಅತ್ಯಂತ ದೊಡ್ಡ ದಾಳಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಈ ಸರ್ವಾಧಿಕಾರಶಾಹಿ ಕ್ರಮಗಳಿಗೆ ಪೂರ್ವಭಾವಿಯಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಸಾವಿರ–ಸಾವಿರ ಸಂಖ್ಯೆಯಲ್ಲಿ ಪಡೆಗಳನ್ನು ತಂದು ನಿಲ್ಲಿಸಲಾಗಿದೆ, ಪ್ರಮುಖ ರಾಜಕೀಯ ಪಕ್ಷಗಳ ಮುಖಂಡರನ್ನು ಸ್ಥಾನಬದ್ಧತೆಯಲ್ಲಿ ಇಡಲಾಗಿದೆ. ಮತ್ತು ಸಾರ್ವಜನಿಕ ಓಡಾಟವನ್ನು ನಿಷೇಧಿಸಲಾಗಿದೆ. ಮೋದಿ ಸರಕಾರ ಜನಗಳ ಒಪ್ಪಿಗೆಯಿಲ್ಲದೆ ತನ್ನ ಫರ್ಮಾನುಗಳನ್ನು ಹೇರುತ್ತಿದೆ ಎಂಬುದನ್ನು ಇದೇ ತೋರಿಸುತ್ತದೆ.

ಭಾರತದ ಇತರ ಜನಗಳೊಂದಿಗೆ ಜಮ್ಮು ಮತ್ತು ಕಾಶ್ಮೀರದ ಜನತೆಯ ಬಂಧಗಳನ್ನು, ಮೂರು ವರ್ಷಗಳ ಹಿಂದೆ ಸರಕಾರ ಆಶ್ವಾಸನೆ ನೀಡಿದಂತೆ ರಾಜಕೀಯ ಸಂವಾದದ ಪ್ರಕ್ರಿಯೆಯ ಮೂಲಕ ಬಲಪಡಿಸಬೇಕಾಗಿತ್ತು. ಅದರ ಬದಲು, ಈಗ ಇಟ್ಟಿರುವ ಏಕಪಕ್ಷೀಯ ಹೆಜ್ಜೆ ಜನಗಳಲ್ಲಿನ ಪರಕೀಯ ಭಾವವನ್ನು ಇನ್ನಷ್ಟು ಆಳಗೊಳಿಸುತ್ತದೆ. ಇದು ಭಾರತದ ಸಮಗ್ರತೆಗೆ ಹಾನಿಕಾರಕ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಮೋದಿ ಸರಕಾರದ ಈ ಕ್ರಮಗಳನ್ನು ಉಗ್ರವಾಗಿ ಟೀಕಿಸಿದೆ.

ಇವು ಕಾನೂನುಬಾಹಿರ ಮತ್ತು ಸಂವಿಧಾನಬಾಹಿರ ಕ್ರಮಗಳು. ಇವು ಕೇವಲ ಜಮ್ಮು ಮತ್ತು ಕಾಶ್ಮೀರಕ್ಕಷ್ಟೇ ಸೀಮಿತವಾದ ವಿಷಯವಲ್ಲ, ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಂವಿಧಾನದ ಮೇಲೆಯೇ ಮಾಡಿರುವ ಒಂದು ದಾಳಿಯಾಗಿದೆ. ಭಾರತದ ಜನರಿಗೆ, ಅವರ ಪ್ರಜಾಪ್ರಭುತ್ವ ಮತ್ತು ಸಂವಿಧಾನಿಕ ಹಕ್ಕುಗಳ ಮೇಲೆ ಇಂತಹ ಸರ್ವಾಧಿಕಾರಶಾಹಿ ದಾಳಿಗಳು ಬರಲಿವೆ ಎಂಬ ಮುನ್ನೆಚ್ಚರಿಕೆ ಬಂದಿದೆ. ಇದು ಜಮ್ಮು ಮತ್ತು ಕಾಶ್ಮೀರದ ಜನಗಳ ಬೆಂಬಲಕ್ಕೆ ನಿಲ್ಲಬೇಕಾದ ಮತ್ತು ಸಂವಿಧಾನ ಹಾಗೂ ಒಕ್ಕೂಟ ತತ್ವದ ಮೇಲಿನ ದಾಳಿಯನ್ನು ಪ್ರ ತಿರೋಧಿಸಲು ಜನಗಳನ್ನು ಅಣಿನೆರೆಸಬೇಕಾದ ಸಮಯ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗಸ್ಟ್ 7ರಂದು ಎಡಪಕ್ಷಗಳು ಕರೆ ನೀಡಿರುವ ಅಖಿಲ ಭಾರತ ಪ್ರತಿಭಟನೆಗಳಲ್ಲಿ ಸೇರಿಕೊಳ್ಳಬೇಕು, "ಜಮ್ಮು ಮತ್ತು ಕಾಶ್ಮೀರ ರಾಜ್ಯದ ನಾಶವನ್ನು ನಿಲ್ಲಿಸಿ, ಸಂವಿಧಾನದ ಕಲಮು 370ನ್ನು ರಕ್ಷಿಸಿ" ಎಂದು ಎಲ್ಲ ಪ್ರಜಾಪ್ರಭುತ್ವವಾದಿ ಮನೋಭಾವದ ಜನಗಳಿಗೆ ಕರೆ ನೀಡಿತು.

ಕಾಶ್ಮೀರದಲ್ಲಿ ಗಂಭೀರ ಪರಿಸ್ಥಿತಿ: ಕೇಂದ್ರ ಸರಕಾರ ಯಾವುದೇ ದುಸ್ಸಾಹಸಕ್ಕೆ ಕೈಹಾಕಬಾರದು –ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಇದಕ್ಕೆ ಮೊದಲು ಅಮರನಾಥ ಯಾತ್ರೆಯನ್ನು ರದ್ದು ಮಾಡುವ ಮತ್ತು ಕಾಶ್ಮೀರ ಕಣಿವೆಯಲ್ಲಿ ಹೆಚ್ಚುವರಿ ಭದ್ರತಾ ಪಡೆಗಳನ್ನು ಕಳಿಸುತ್ತಿದೆ ಎಂಬ ಸುದ್ದಿಯ ಹಿನ್ನೆಲೆಯಲ್ಲಿ ಅಲ್ಲಿ ಯಾವುದೇ ದುಸ್ಸಾಹಸಕ್ಕೆ ಇಳಿಯಬಾರದು ಎಂದು ಮೋದಿ ಸರಕಾರವನ್ನು ಆಗ್ರಹಿಸುವ ಹೇಳಿಕೆಯನ್ನು ಪೊಲಿಟ್‌ಬ್ಯುರೊ ನೀಡಿತ್ತು.

ಜಮ್ಮು ಮತ್ತು ಕಾಶ್ಮೀರದಲ್ಲಿ ಕೇಂದ್ರ ಸರಕಾರ ಕೈಗೊಂಡ ಕ್ರಮಗಳ ಪರಿಣಾಮವಾಗಿ ಒಂದು ಗಂಭೀರ ಪರಿಸ್ಥಿತಿ ಬೆಳೆದಿದೆ. 35,000 ಹೆಚ್ಚುವರಿ ಅರೆಮಿಲಿಟರಿ ಪಡೆಗಳ ತುಕಡಿಗಳನ್ನು ಅಲ್ಲಿಗೆ ಕಳಿಸಿರುವುದು ಯಾವ ಉದ್ದೇಶಕ್ಕಾಗಿ ಎಂಬ ಪ್ರಶ್ನೆಗಳನ್ನು ಎತ್ತಿದೆ.

ಅಮರನಾಥ ಯಾತ್ರೆಯನ್ನು ಮಧ್ಯದಲ್ಲೇ ರದ್ದು ಮಾಡುವ ಅಭೂತಪೂರ್ವ ಕ್ರಮ ಮತ್ತು ತಕ್ಷಣವೇ ಕಣಿವೆಯನ್ನು ಬಿಟ್ಟು ಹೋಗಬೇಕು ಎಂದು ಪ್ರವಾಸಿಗಳಿಗೆ ನಿರ್ದೇಶನಗಳನ್ನು ನೀಡಿರುವುದು ಬಿಗುವಿನ ಪರಿಸ್ಥಿತಿಯನ್ನು, ಜನಗಳ ನಡುವೆ ಆತಂಕಗಳನ್ನು ಮತ್ತಷ್ಟು ಹೆಚ್ಚಿಸಿದೆ.

ಸಂಸತ್ತು ಅಧಿವೇಶನದಲ್ಲಿದ್ದರೂ ಈ ಕ್ರಮಗಳ ಬಗ್ಗೆ ಕೇಂದ್ರ ಸರಕಾರ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ, ರಾಜ್ಯದಲ್ಲಿನ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತಗೊಂಡಿಲ್ಲ.

ಇವೆಲ್ಲಾ ಕಲಮು 35ಎ ಮತ್ತು 370 ನ್ನು ಕುರಿತಂತೆ ಜಮ್ಮು ಮತ್ತು ಕಾಶ್ಮೀರದ ಸಂವಿಧಾನಿಕ ಸ್ಥಾನಮಾನವನ್ನು ತಟ್ಟುವ ಕೆಲವು ತೀವ್ರ ಕ್ರಮಗಳ ಬಗ್ಗೆ ಸರಕಾರ ಯೋಚಿಸುತ್ತಿರಬೇಕು ಎಂಬ ಸಂದೇಹಗಳಿಗೆ ಉತ್ತೇಜನೆ ನೀಡಿವೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಕೈಗೊಳ್ಳಲಾಗುತ್ತಿರುವ ಈ ಕ್ರಮಗಳ ಬಗ್ಗೆ ಪೂರ್ಣ ಸ್ಪಷ್ಟನೆಯನ್ನು ಸರಕಾರ ಕೊಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಹೇಳಿಕೆಯಲ್ಲಿ ಆಗ್ರಹಿಸಿತ್ತು. ದೇಶಕ್ಕೆ ಗಂಭೀರ ದುಷ್ಪರಿಣಾಮವನ್ನುಂಟು ಮಾಡಬಹುದಾದ ಯಾವುದೇ ರಾಜಕೀಯ ದುಸ್ಸಾಹಸದ ಕೆಲಸಕ್ಕೆ ಸರಕಾರ ಕೈಹಾಕಬಾರದು ಎಂದೂ ಅದು ಹೇಳುತ್ತ ರಾಜ್ಯದಲ್ಲಿನ ಎಲ್ಲ ಸಂಬಂಧಪಟ್ಟ ರಾಜಕೀಯ ಶಕ್ತಿಗಳೊಂದಿಗೆ ಸಂವಾದವನ್ನು ಆರಂಭಿಸಲಾಗುವುದು ಎಂಬ ತನ್ನ ಆಶ್ವಾಸನೆಯನ್ನು ಸರಕಾರ ಜಾರಿಗೆ ತರಬೇಕು ಎಂದೂ ಸಿಪಿಐ(ಎಂ) ಪುನರುಚ್ಚರಿಸಿತ್ತು.

ಕಾಶ್ಮೀರಿ ಜನಸಾಮಾನ್ಯರ ದನಿಯನ್ನು ಅಡಗಿಸಿದ ರಹಸ್ಯ ಕಾರ್ಯಾಚರಣೆ– ಎಡಪಕ್ಷಗಳ ದೇಶವ್ಯಾಪಿ ಪ್ರತಿಭಟನೆ

ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಿ ಅದನ್ನು ಕೇಂದ್ರಾಡಳಿತ ಪ್ರದೇಶದ ಮಟ್ಟಕ್ಕೆ ಇಳಿಸಿರುವ ಮೋದಿ ಸರಕಾರದ ಕ್ಷಿಪ್ರಕ್ರಮಗಳ ವಿರುದ್ಧ ಎಡಪಕ್ಷಗಳ ಪ್ರತಿರೋಧ ಮುಂದುವರೆಯುತ್ತಿದೆ. ಆಗಸ್ಟ್ 5 ರಂದುರಾಜ್ಯಸಭೆಯಲ್ಲಿ ಈ ಕುರಿತ ಗೃಹಮಂತ್ರಿಗಳ ಮಂಡನೆಯಾದ ದಿನವೇ ದಿಲ್ಲಿಯ ಜಂತರ್‌ಮಂತರ್‌ನಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಎಡಪಕ್ಷಗಳ ರಾಷ್ಟ್ರೀಯ ಮುಖಂಡರೂ ಭಾಗವಹಿಸಿದರು. ಅಲ್ಲದೆ ವಿದ್ಯಾರ್ಥಿಗಳು, ಅಧ್ಯಾಪಕರು, ಸಂಶೋಧಕರು, ಸಕ್ರಿಯ ಕಾರ್ಯಕರ್ತರು ಇದರಲ್ಲಿ ಭಾಗವಹಿಸಿ ಮೋದಿ ಸರಕಾರದ ಪ್ರಜಾಪ್ರಬುತ್ವ–ವಿರೋಧಿ ವಿಧಾನಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

ಆಗಸ್ಟ್ 7ರಂದು ಎಡಪಕ್ಷಗಳ ಕರೆಯ ಮೇರೆಗೆ ದೇಶಾದ್ಯಂತ ಪ್ರತಿಭಟನೆಗಳು ನಡೆದಿವೆ. ದಿಲ್ಲಿಯಲ್ಲಿ ಎಡಪಕ್ಷಗಳ ಮುಖಂಡರು, ಕಾರ್ಯಕರ್ತರು, ಜತೆಗೆ ವಿದ್ಯಾರ್ಥಿಗಳು ನಾಗರಿಕ ಸಮಾಜದ ಸದಸ್ಯರುಗಳು ಮಂಡಿ ಹೌಸ್‌ನಿಂದ ಸಂಸದ್ ಮಾರ್ಗದ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಹಲವು ಕಾಶ್ಮೀರಿ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದರು. "ಮೂರು ದಿನಗಳಿಂದ ನಾವು ನಿದ್ದೆ ಮಾಡಿಲ್ಲ. ನಮ್ಮ ಕುಟುಂಬದವರನ್ನು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ. ಅವರಿಗೆ ಏನು ಹೇಳಲಾಗುತ್ತಿದೆ, ನಮ್ಮ ರಾಜ್ಯದ ಸಂವಿಧಾನಿಕ ಹಕ್ಕುಗಳು ಮತ್ತು ರಾಜ್ಯದ ಸ್ಥಾನಮಾನವನ್ನು ಅವರೊಂದಿಗೆ ಸಮಾಲೋಚಿಸದೆಯೇ ಬಿಜೆಪಿ ಸರಕಾರ ಕೆಲವೇ ನಿಮಿಷಗಳಲ್ಲಿ ಕಿತ್ತುಕೊಂಡಿದೆ ಎಂಬುದು ಅವರಿಗೆ ತಿಳಿದಿದೆಯೋ ಇಲ್ಲವೋ ಗೊತ್ತಿಲ್ಲ" ಎಂದು ಒಬ್ಬ ವೃತ್ತಿನಿರತ ಕಾಶ್ಮೀರಿ ಯುವಕ ಪತ್ರಕರ್ತರೆದುರು ನೋವು ವ್ಯಕ್ತಪಡಿಸಿದ.

"ಬಿಜೆಪಿ ಇದಕ್ಕೆ ಕಾಶ್ಮೀರದ ಜನತೆಯನ್ನು ದೇಶದ ಇತರರೊಂದಿಗೆ ಜೋಡಿಸುವ ಒಂದು ನಡೆ ಎಂಬ ರೂಪ ಕೊಡಲು ಪ್ರಯತ್ನಿಸುತ್ತಿದೆ. ಸತ್ಯಸಂಗತಿಯೆಂದರೆ, ಈ ನಿರ್ಧಾರರ ಆಳವಾಗಿ ತಟ್ಟುವ ಜನಸಾಮಾನ್ಯರನ್ನು ಸಂಪೂರ್ಣವಾಗಿ ಕತ್ತಲಲ್ಲಿಟ್ಟು, ಇಡೀ ರಾಜ್ಯವನ್ನು ಸಂಪೂರ್ಣವಾಗಿ ಮುಚ್ಚಿ, ಈ ಪ್ರಕ್ರಿಯೆಯನ್ನು ರಹಸ್ಯದಿಮದ ನಡೆಸಿ ಸಾಮಾನ್ಯ ಕಾಶ್ಮೀರಿಗಳ ದನಿಯನ್ನು ಅಡಗಿಸಿದೆ" ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಹೇಳಿದ್ದಾರೆ.

ಸರ್ವಾಧಿಕಾರಶಾಹಿ ಬುಡಮೇಲು ಕುಟಿಲೋಪಾಯ– ಸಿಐಟಿಯು

ಮುಂಗಡ ನೋಟೀಸು ಮತ್ತು ಸಂಸತ್ತಿನಲ್ಲಿ ಮೂರನೇ ಎರಡು ಬಹುಮತ ಬೇಕು ಎಂಬ ಸಂವಿಧಾನದ ತಿದ್ದುಪಡಿಯ ವಿಧಿವಿಧಾನಗಳನ್ನು ನೀತಿಬಾಹಿರವಾಗಿ ಬದಿಗೊತ್ತಿ ಕುಟಿಲೋಪಾಯದಿಂದ ಮೋದಿ ಸರಕಾರ ಜಮ್ಮು ಮತ್ತು ಕಾಶ್ಮೀರದ ಸ್ಥಾನಮಾನ ಕುರಿತಾದ ಸಂವಿಧಾನದ ಕಲಮು 370ನ್ನು ಪರೋಕ್ಷವಾಗಿ ಏಕಪಕ್ಷೀಯವಾಗಿ ರದ್ದು ಮಾಡಿದೆ ಎಂದು ಸಿಐಟಿಯು ಖಂಡಿಸಿದೆ. ಇದು ಇಂತಹುದೆ ಭಾರತೀಯ ಸಂವಿಧಾನವನ್ನು ಬುಡಮೇಲು ಮಾಡುವ ಇನ್ನಷ್ಟು ಅಪ್ರಾಮಾಣಿಕ ಕುಟಿಲೋಪಾಯಗಳಿಗೆ ದಾರಿ ಮಾಡಿಕೊಡುತ್ತದೆ ಎಂದು ಆತಂಕ ವ್ಯಕ್ತಪಡಿಸಿರುವ ಅದು, ಕೇಂದ್ರ ಸರಕಾರದ ಈ ನಡೆ ಸರ್ವಾಧಿಕಾರಶಾಹಿತ್ವ ಮತ್ತು ಫ್ಯಾಸಿಸ್ಟ್ ಮಾದರಿಯದ್ದು ಎಂದಿದೆ. ಸಿಐಟಿಯುನ ಜಮ್ಮು ಮತ್ತು ಕಾಶ್ಮೀರ ರಾಜ್ಯಸಮಿತಿಯ ಅಧ್ಯಕ್ಷರೂ, ಶಾಸಕರೂ ಆಗಿರುವ ಯುಸುಫ್ ತರಿಗಾಮಿಯವರ ಗೃಹಬಂಧನ/ ಬಂಧನವನ್ನೂ ಅದು ಬಲವಾಗಿ ಖಂಡಿಸಿದೆ.

ಶಾಶ್ವತ ಅಗ್ನಿಕುಂಡವಾಗಿಸುವ ಅತ್ಯಂತ ಬೇಜವಾಬ್ದಾರಿ ಕ್ರಮ–ಎಐಕೆಎಸ್

ಇದು ಮೋದಿ ಸರಕರದ ಅತ್ಯಂತ ಬೇಜವಾಬ್ದಾರಿ ಕ್ರಮ, ಹಿಂದಿನ ಒಪ್ಪಂದಗಳ ಮತ್ತು ಸಂವಿಧಾನಿಕ ಆಶ್ವಾಸನೆಗಳ ಉಲ್ಲಂಘನೆ ಕಾಶ್ಮೀರವನ್ನು ಒಂದು ಭಯೋತ್ಪಾದನೆಯ ಶಾಶ್ವತ ಅಗ್ನಿಕುಂಡವಾಗಿ ಮಾಡುತ್ತದೆ, ಈ ಮೂಲಕ ಸಾಮ್ರಾಜ್ಯಶಾಹಿ ಹಸ್ತಕ್ಷೇಪ ಹಾಗೂ ಅಮಾಯಕ ಜನಗಳ ಮೇಲೆ ಹಿಂಸಾಚಾರಕ್ಕೆ ಕಾರಣವಾಗುತ್ತದೆ ಎಂಬ ಭೀತಿಯನ್ನು ಅಖಿಲ ಭಾರತ ಕಿಸಾನ್ ಸಭಾ ವ್ಯಕ್ತಪಡಿಸಿದೆ.

ಆರ್ಥಿಕ ವಿಫಲತೆಗಳಿಂದ ಗಮನ ಬೇರೆಡೆಗೆ ಸೆಳೆಯಲು ನಡೆಸಿರುವ ಪಿತೂರಿ–ಎಐಡಿಡಬ್ಲ್ಯುಎ

ಹಿಂದುತ್ವ ಪಡೆಗಳು ದೇಶದ ಭವಿಷ್ಯದ ಬಗ್ಗೆಯೂ ಯೋಚಿಸದೆ ತಮ್ಮ ವಿಭಜನಕಾರಿ ಅಜೇಂಡಾವನ್ನು ಈಡೇರಿಸಿಕೊಳ್ಳಲು ಕೈಗೊಂಡಿರುವ ಕ್ರಮ ಇದು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಇದನ್ನು ಖಂಡಿಸಿದೆ. ಇದು ಎಲ್ಲ ಕುಂಬಗಳ ಮೇಲೆ ದುಷ್ಪರಿಣಾಮ ಬೀರುವುದು ಮಾತ್ರವಲ್ಲ, ಮಹಿಳೆಯರ ಮೇಲಿನ ಹೊರೆಗಳನ್ನು, ಅತ್ಯಾಚಾರಗಳನ್ನು ಇನ್ನಷ್ಟು ಹೆಚ್ಚಿಸುತ್ತದೆ ಎಂಬ ಆತಂಕವನ್ನು ಅದು ವ್ಯಕ್ತಪಡಿಸಿದೆ.

ಆರ್ಥಿಕ ರಂಗದಲ್ಲಿ ಈ ಸರಕಾರ ಸತತವಾಗಿ ವಿಫಲವಾಗುತ್ತಿರುವ ಹಿನ್ನೆಲೆಯಲ್ಲಿ ಅದರಿಂದ ಜನಗಳ ಗಮನವನ್ನು ಬೇರೆಡೆಗೆ ಸೆಳೆಯುವ ಒಂದು ಪಿತೂರಿಯೂ ಇದರಲ್ಲಿ ಕಾಣುತ್ತದೆ ಎಂದು ಎಐಡಿಡಬ್ಲ್ಯುಎ ಹೇಳಿದೆ.





ಸಂಪಾದಕೀಯ

ಏಕಾಧಿಪತ್ಯಕ್ಕೆ ಕೊನೆ ಎಂದು? ಸಂತ್ರಸ್ತರಿಗೆ ಪುನರ್ವಸತಿ ಸಿಗುವುದೆಂದು?

ಕಳೆದ ಐದಾರು ದಶಕಗಳಲ್ಲಿ ಈ ಪ್ರಮಾಣದ ಮಳೆಯನ್ನು ಯಾರೂ ಕಂಡಿರಲಿಲ್ಲ. 15ಕ್ಕೂ ಹೆಚ್ಚು ಜಿಲ್ಲೆಗಳ ಜನರ ಜೀವನ ಅಸ್ತವ್ಯಸ್ತಗೊಂಡಿದೆ. ರಾಜ್ಯದ ಸುಮಾರು 35 ತಾಲೂಕುಗಳು ಪ್ರವಾಹಕ್ಕೆ ತುತ್ತಾಗಿವೆ. ಸುಮಾರು 250 ಗ್ರಾಮಗಳು ಜಲಾವೃತಗೊಂಡಿವೆ. ಇಲ್ಲಿಯ ವರೆಗಿನ ಮಾಹಿತಿ ಪ್ರಕಾರ ಪ್ರವಾಹದಲ್ಲಿ ಕೊಚ್ಚಿಹೋಗಿ 11 ಮಂದಿ ಮೃತಪಟ್ಟಿದ್ದಾರೆ. ಹಲವು ಕಡೆಗಳಲ್ಲಿ ಕುಡಿಯಲು ನೀರು, ಆಹಾರ, ವಿದ್ಯುತ್ ಪೂರೈಕೆ ಇಲ್ಲದೆ ಸಂಕಷ್ಟಕ್ಕೆ ಸಿಲುಕಿದ ಸಾವಿರಾರು ಮಂದಿ ನೆರವಿಗಾಗಿ ಮೊರೆ ಇಡುತ್ತಿದ್ದಾರೆ.

ಮಹಾರಾಷ್ಟ್ರದ ಅಣೆಕಟ್ಟುಗಳಿಂದ ಹರಿದು ಬರುತ್ತಿರುವ ಭಾರೀ ಪ್ರಮಾಣದ ನೀರಿನಿಂದಾಗಿ ಕೃಷ್ಣಾ ಮತ್ತು ಅದರ ಉಪನದಿಗಳು ಉಕ್ಕಿ ಹರಿಯುತ್ತಿರುವುದರಿಂದ, ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಗುಡ್ಡಗಳು ಕುಸಿದು ಬೀಳುತ್ತಿರುವುದರಿಂದ ಪ್ರಮುಖ ರಸ್ತೆ ಸಂಪರ್ಕ ಕಡಿತಗೊಂಡಿದೆ. ಸಾವಿರಾರು ಮನೆಗಳು ಕುಸಿದು ಬಿದ್ದಿವೆ. ಸುಮಾರು 1 ಲಕ್ಷ ಹೆಕ್ಟೇರ್ ಕೃಷಿ ಭೂಮಿಯಲ್ಲಿ ಬೆಳೆದ ಫಸಲು ಸಂಪೂರ್ಣ ನಾಶವಾಗಿದೆ. ಅಸಂಖ್ಯಾತ ಜಾನುವಾರುಗಳು ಅಸುನೀಗಿವೆ. ಬಸ್ಸುಗಳ ಹಾಗೂ ರೈಲುಗಳ ಸಂಚಾರ ಸ್ಥಗಿತಗೊಳಿಸಲಾಗಿದ್ದು ಪ್ರಯಾಣಿಕರ ಪರದಾಟ ಹೇಳತೀರದಾಗಿದೆ.

ಅತೀವ ಸಂಕಷ್ಟದ ಈ ಸಮಯದಲ್ಲಿ ಎಲ್ಲ ಪ್ರವಾಹ ಪೀಡಿತ ಜನರಿಗೆ ಪರಿಹಾರ, ಸಹಾನುಭೂತಿ ಒದಗಿಸಬೇಕಾದ ರಾಜ್ಯದ ಮುಖ್ಯಮಂತ್ರಿ ನಾಪತ್ತೆಯಾಗಿರುವುದು ಅತ್ಯಂತ ಖೇದದ ವಿಷಯ. "ಎಲ್ಲಿದ್ದೀರಪ್ಪಾ ಯಡಿಯೂರಪ್ಪ" ಎಂದು ಜನ ಕೂಗುತ್ತಿರುವುದು ದೂರದ ದೆಹಲಿಯಲ್ಲಿದ್ದ ಮುಖ್ಯಮಂತ್ರಿ ಯಡಿಯೂರಪ್ಪರವರಿಗೆ ಹೇಗೆ ಕೇಳಬೇಕು?

ರಾಜ್ಯದಲ್ಲಿ ಇರುವುದೇ ಯಡಿಯೂರಪ್ಪನವರ ಏಕಾಧಿಪತ್ಯ. ಅವರಿಗೊಂದು ಸಚಿವ ಸಂಪುಟ ಇಲ್ಲ. ಜಿಲ್ಲೆಗಳ ಉಸ್ತುವಾರಿ ನೋಡಿಕೊಳ್ಳಲು ಮೇಲುಸ್ತುವಾರಿ ಸಚಿವರಿಲ್ಲ. ಶಾಸಕರು ಕೈಕಟ್ಟಿ ಕುಳಿತಿದ್ದಾರೆ. ಸಚಿವರ ನೇಮಕಕ್ಕೆ ಪಕ್ಷದ ವರಿಷ್ಠರ ಅನುಮತಿ ದೊರೆಯಬೇಕು. ಸಚಿವರಾಗಬೇಕಾದವರ ಯಾದಿಯನ್ನು ಪ್ರಧಾನ ಮಂತ್ರಿ ಹಾಗೂ ಪಕ್ಷದ ಅಧ್ಯಕ್ಷರು ಅಂತಿಮಗೊಳಿಸಬೇಕು. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ಮೋದಿ ಹಾಗೂ ಅಮಿತ್ ಶಾ ರವರಿಂದ ಸ್ವಲ್ಪ ತರಾತುರಿಯಲ್ಲೇ ಹಸಿರು ನಿಶಾನಿ ದೊರೆತಿರಬಹುದು. ಆದರೆ ಈಗ ಹಾಗಿಲ್ಲ. ಯಾರನ್ನು ಬೇಕಾದರೂ ನೇಮಿಸಿಕೊಳ್ಳು ಎನ್ನುವ ಸ್ವಾತಂತ್ರ್ಯವನ್ನು ನೀಡಲು ಪಕ್ಷದ ಹೈಕಮಾಂಡ್ ತಯಾರಿಲ್ಲ. ಪ್ರವಾಹ ಪೀಡಿತ ಜನರಿಗೆ ತುರ್ತಾಗಿ ಪುನರ್ವಸತಿ ಒದಗಿಸುವುದು ಅವರ ಆದ್ಯತೆಯಲ್ಲ. ಸಂಪುಟ ವಿಸ್ತರಣೆಗೆ ವಿಳಂಬ ಮಾಡುವುದರಲ್ಲಿ ಅವರ ಲೆಕ್ಕಾಚಾರವೇ ಬೇರೆ ಇದ್ದಂತಿದೆ.

ಕಾಶ್ಮೀರದಲ್ಲಿ ಪಿತೂರಿ ಮಾಡಿ ಮುಗಿಸಿದ್ದಾರೆ. ಆದರೆ ಅಲ್ಲಿ ಎದ್ದೇಳಲಿರುವ ಪ್ರಶ್ನೆಗಳನ್ನು ಹತ್ತಿಕ್ಕಲು ಕುತಂತ್ರಗಳನ್ನು ಹೆಣೆಯುತ್ತಲೇ ಇರಬೇಕಾಗುತ್ತದೆ. ಹೈದ್ರಾಬಾದ್ ಕರ್ನಾಟಕದ 6 ಜಿಲ್ಲೆಗಳಿಗೆ ಆರ್ಟಿಕಲ್ 371 (ಜೆ) ಮೂಲಕ ವಿಶೇಷ ಸ್ಥಾನಮಾನ ನೀಡಲಾಗಿದೆ. ಯಾವುದೇ ಸರ್ಕಾರ ಏಕಪಕ್ಷೀಯವಾಗಿ ಆ ವಿಧಿಯನ್ನು ರದ್ದುಮಾಡಿದರೆ ನಾವು ಸುಮ್ಮನಿರುತ್ತೇವಾ? ಸಂವಿಧಾನಾತ್ಮಕ ಹಕ್ಕನ್ನು ಉಳಿಸಿಕೊಳ್ಳಲು ನಾವು ಹೋರಾಟ ಮಾಡದೆ ಇರುತ್ತೇವಾ? ಹಾಗೇ 370 ನೇ ವಿಧಿಯನ್ನು ರದ್ದುಗೊಳಿಸಿರುವ ಏಕಪಕ್ಷೀಯ ಕ್ರಮವನ್ನು ಕಾಶ್ಮೀರದಲ್ಲಿರುವ ಭಾರತದ ಪ್ರಜೆಗಳು ಒಪ್ಪುತ್ತಾರಾ? ಅದು ಸಾಧ್ಯವಾಗದಿದ್ದರೆ ಅವರು ನಮ್ಮ ಭಾರತ ದೇಶದಿಂದ ದೂರ ಸರಿಯದೆ ಇರುತ್ತಾರಾ? ಇಂತಹ ಅನಾಹುತಕಾರಿ ಕ್ರಮದಿಂದ ಇನ್ನೆಷ್ಟು ಅನಾಹುತಗಳು ಸಂಭವಿಸದೆ ಇರಲಾರವು. ಹಾಗಾಗಿ ಈ ಇಬ್ಬರು ಬಿಜೆಪಿ ವರಿಷ್ಠರಿಗೆ ಬಿಡುವಿಲ್ಲ. ಕರ್ನಾಟಕದ ಜನತೆಯ ಬಗ್ಗೆ, ಇಲ್ಲಿ ಪ್ರವಾಹಕ್ಕೆ ಸಿಕ್ಕಿಕೊಂಡು ಸಾಯುತ್ತಿರುವವರ ಬಗ್ಗೆ ಯೋಚಿಸುವ ವ್ಯವಧಾನ ಅವರಿಗಿಲ್ಲ.

ಜಿಲ್ಲಾ ಉಸ್ತುವಾರಿ ಸಚಿವರು ಇದ್ದಾಗಲೂ ಜನರ ಕೆಲಸಕ್ಕೆ ಅವರು ತೋರುವ ಆಸಕ್ತಿ ಅಷ್ಟಕಷ್ಟೇ. ಮಾನವೀಯತೆ ಕಳಕಳಿಯುಳ್ಳ ಕೆಲವು ಜಿಲ್ಲಾಧಿಕಾರಿಗಳು ಸಚಿವರ ಒತ್ತಡಕ್ಕೆ ಕಾಯದೆ ತಾವೇ ಸ್ವತಃ ಮುಂದಾಗಿ ಜನರಿಗೆ ಪರಿಹಾರ ಒದಗಿಸುತ್ತಿರುವುದುಂಟು. ಆದರೆ ಸರ್ಕಾರದಿಂದ ಅಗತ್ಯ ನೆರವನ್ನು ಸಕಾಲಿಕವಾಗಿ ಪಡೆಯಲು, ಸಂತ್ರಸ್ತರ ಸ್ಥಳಾಂತರ, ಗಂಜಿ ಕೇಂದ್ರಗಳ ಆರಂಭ, ಆಹಾರ, ವಸ್ತ್ರ, ಔಷಧಿ ಪೂರೈಕೆ, ತಾತ್ಕಾಲಿಕ ಮನೆಗಳ ನಿರ್ಮಾಣ, ಕೊಚ್ಚಿಹೋದ ಬೆಳೆ, ಜಾನುವಾರುಗಳ ಸಮೀಕ್ಷೆ, ತಕ್ಷಣದ ಪರಿಹಾರ ಇತ್ಯಾದಿ ತುರ್ತಾಗಿ ನಡೆಯಬೇಕಾದ ಕೆಲಸಗಳ ನಿರ್ವಹಣೆಯನ್ನು ನೋಡಿಕೊಳ್ಳಲು ಮೇಲ್ವಿಚಾರಕ ಸಚಿವರು ಅಗತ್ಯ. ಯಡಿಯೂರಪ್ಪನವರ ಏಕಾಧಿಪತ್ಯ ದಿಂದ ಇದು ಸಾಧ್ಯವಾಗದು. •

ಅತಿವೃಷ್ಠಿ ಹಾಗೂ ನೆರೆ ಹಾವಳಿ ಪರಿಹಾರವಾಗಿ ಕೇಂದ್ರ ಸರಕಾರ ತಕ್ಷಣ 1000 ಕೋಟಿ ರೂ ಬಿಡುಗಡೆ ಮಾಡಲು – ಸಿಪಿಐ(ಎಂ) ಒತ್ತಾಯ

08 ಜುಲೈ 2019 ರ ಪತ್ರಿಕಾ ಹೇಳಿಕೆ

ಕರ್ನಾಟಕದ ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿ ಸುರಿಯುತ್ತಿರುವ ಭಾರೀ ಮಳೆ ಹಾಗೂ ಕೃಷ್ಣ ನದಿಯ ನೆರೆ ಹಾವಳಿಯಿಂದ ಉತ್ತರ ಕರ್ನಾಟಕದ ಜಿಲ್ಲೆಗಳು ಸೇರಿ ಇದುವರೆಗೆ ರಾಜ್ಯದ 15 ಜಿಲ್ಲೆಗಳಲ್ಲಿ ಗಂಭೀರ ಆತಂಕದ ಪರಿಸ್ಥಿತಿ ಉಂಟಾಗಿದೆ. ಸುಮಾರು 36 ತಾಲೂಕುಗಳ 240 ಕ್ಕೂ ಅಧಿಕ ಗ್ರಾಮಗಳು ಜಲಾವೃತವಾಗಿವೆ.

ಪ್ರಾಥಮಿಕ ಮಾಹಿತಿಯಂತೆ ಲಕ್ಷಾಂತರ ಜನತೆ ಸಂಕಷ್ಟಕ್ಕೀಡಾಗಿದ್ದಾರೆ. ನದಿ ಪಾತ್ರಗಳಲ್ಲಿನ ಮತ್ತು ಇತರೆಡೆಯ 2.50 ಲಕ್ಷಕ್ಕೂ ಅಧಿಕ ಎಕರೆ ಪ್ರದೇಶದ ಬೆಳೆಯು ಹಾನಿಯಾಗಿದೆ. ನಿರಾಶ್ರಿತರ ಸಂಖ್ಯೆಯು ಬೆಳೆಯುತ್ತಲೇ ಇದೆ. ಇದುವರೆಗೆ ಸುಮಾರು 11 ಕ್ಕೂ ಹೆಚ್ಚು ನಾಗರೀಕರು ಸಾವೀಗೀಡಾಗಿದ್ದಾರೆ. ನೂರಾರು ಜಾನುವಾರುಗಳು ಪ್ರವಾಹಕ್ಕೆ ಸಿಲುಕಿ ಕಾಣೆಯಾಗಿವೆ.

ಲಕ್ಷಾಂತರ ನಿರಾಶ್ರಿತರಿಗೆ ಎಲ್ಲೆಡೆ ಗಂಜಿ ಕೇಂದ್ರಗಳನ್ನು ತೆರೆಯಬೇಕಿದೆ. ಸಾವಿರಾರು ವಾಸದ ಮನೆಗಳು, ನೂರಾರು ಸರಕಾರಿ ಕಟ್ಟಡಗಳು, ಸಾರ್ವಜನಿಕ ರಸ್ತೆ, ನೂರಾರು ಸೇತುವೆಗಳು ಹಾನಿಗೀಡಾಗಿವೆ.

ಇನ್ನೂ ಎರಡು ದಿನಗಳ ಕಾಲ ಮಳೆಯ ಆರ್ಭಟ ಮುಂದುವರೆಯಲಿರುವುದರಿಂದ ಪ್ರವಾಹವು ಮತ್ತಷ್ಟು ಹೆಚ್ಚಾಗುವ ಸಂಭವ ವಿರುವುದರಿಂದ ಇನ್ನಷ್ಟು ಹಾನಿ ಸಂಭವಿಸುವ ಸಾಧ್ಯತೆ ಇದೆ.

ಆದ್ದರಿಂದ ತಕ್ಷಣ ಕೇಂದ್ರ ಸರಕಾರ ಕೂಡಲೇ ಒಂದು ಸಾವಿರ ಕೋಟಿ ರೂ.ಗಳ ನೆರವನ್ನು ನೀಡಬೇಕೆಂದು ಸಿಪಿಐಎಂ ಕರ್ನಾಟಕ ರಾಜ್ಯ ಸಮಿತಿ ಪ್ರಧಾನ ಮಂತ್ರಿಗಳನ್ನು ಒತ್ತಾಯಿಸುತ್ತದೆ.

ಪ್ರವಾಹಕ್ಕೆ ಸಿಲುಕಿದ ಸಾವಿರಾರು ಜನತೆ ಮತ್ತು ಜಾನುವಾರುಗಳನ್ನು ರಕ್ಷಿಸಿದ ರಕ್ಷಣ ಸಿಬ್ಬಂದಿ ಮತ್ತು ನಾಗರೀಕರನ್ನು ಸಿಪಿಐ(ಎಂ) ಅಭಿನಂದಿಸಿದೆ. ರಾಜ್ಯದ ಜನತೆ ಹಾನಿಗೀಡಾದ ಕುಟುಂಬಗಳ ರಕ್ಷಣೆಗೆ ಮುಂದಾಗುವಂತೆ ಕರೆ ನೀಡಿದೆ.

ಮುಖ್ಯಮಂತ್ರಿಗಳು ಸಮರ್ಪಕ ಕಾರ್ಯ ನಿರ್ವಹಣೆಗೆ ಕ್ರಮವಹಿಸಲು – ಸಿಪಿಐ(ಎಂ) ಒತ್ತಾಯ

ರಾಜ್ಯ ಸರ್ಕಾರದ ಇದುವರೆಗಿನ ಪರಿಹಾರದ ಕ್ರಮ ಅಸಮರ್ಪಕವಾಗಿದೆ. ತೆರೆದಿರುವ ಗಂಜಿ ಕೇಂದ್ರಗಳು ಸಾಲದಾಗಿವೆ. ಜಾನುವಾರುಗಳಿಗೆ ಮೇವು ಒದಗಿಸಬೇಕು ಮತ್ತು ನೆರೆ ಹಾವಳಿಗೀಡಾದ ಪ್ರದೇಶದಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಸಂಭವವಿದ್ದು ಅದರ ನಿಯಂತ್ರಣಕ್ಕೆ ಅಗತ್ಯ ಕ್ರಮವಹಿಸಬೇಕು. ಅದೇ ರೀತಿ ರಾಜ್ಯದಲ್ಲಿ ಹಾನಿಯನ್ನು ಅಂದಾಜು ಮಾಡಲು ತುರ್ತು ಕ್ರಮ ವಹಿಸಬೇಕು ಮತ್ತು ಜಿಲ್ಲೆಗಳಿಗೆ ಕೂಡಲೇ ಅಗತ್ಯ ಹಣಕಾಸಿನ ನೆರವನ್ನು ಒದಗಿಸುವಂತೆ ಹಾಗೂ ಪ್ರವಾಹ ನಿರ್ವಹಣೆಯ ಕೆಲಸವನ್ನು ಆಧ್ಯತೆಯ ಮೇರೆಗೆ ನಿರ್ವಹಿಸುವಂತೆ ಅಧಿಕಾರಿ ವರ್ಗದ ಮೇಲೆ ರಾಜ್ಯ ಸರ್ಕಾರ ಒತ್ತಡ ಹಾಕಬೇಕೆಂದು ಸಿಪಿಐ(ಎಂ) ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತದೆ.

ಯು. ಬಸವರಾಜ
ಕಾರ್ಯದರ್ಶಿ



ಕಾಂ. ಸೀತಾರಾಂ ಯೆಚೂರಿ ಸ್ಥಾನ ಬದ್ಧತೆ – ಸಿಪಿಐ(ಎಂ) ಖಂಡನೆ

09 ಜುಲೈ 2019 ರ ಪತ್ರಿಕಾ ಹೇಳಿಕೆ

ಜಮ್ಮು ಕಾಶ್ಮೀರದ ಸಿಪಿಐ(ಎಂ) ಶಾಸಕರಾದ ಯುಸೂಫ್ ತರಿಗಾಮಿ ಮತ್ತಿತರ ಕಾರ್ಯಕರ್ತರ ಯೋಗ ಕ್ಷೇಮ ವಿಚಾರಿಸಲು ಶ್ರೀನಗರಕ್ಕೆ ಭೇಟಿ ನೀಡಿದ ಸಿಪಿಐಎಂ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಸೀತಾರಾಂ ಯೆಚೂರಿಯವರನ್ನು ಅಲ್ಲಿನ ವಿಮಾನ ನಿಲ್ದಾಣದಲ್ಲಿಯೇ ಸ್ಥಾನ ಬದ್ಧತೆಯಲ್ಲಿಡಲಾಗಿದೆ.

ಕೇಂದ್ರ ಸರಕಾರದ ಈ ಸರ್ವಾಧಿಕಾರಿ ನೀತಿಯನ್ನು ಸಿಪಿಐಎಂ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ.

ಈ ಭೇಟಿಯ ಕುರಿತು ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದ್ದರೂ ಯೆಚೂರಿರವರು ಎಲ್ಲೂ ಹೋಗದಂತೆ ದಿಗ್ಬಂಧನ ವಿಧಿಸಿರುವ ಕ್ರಮ ಅತಿರೇಕದಿಂದ ಕೂಡಿದೆ. ತಕ್ಷಣವೇ ಅವರ ದಿಗ್ಬಂಧನ ವಾಪಾಸು ಪಡೆದು ಕಾಶ್ಮೀರದ ಸಂಗಾತಿಗಳನ್ನು ಭೇಟಿ ಮಾಡಲು ಅವಕಾಶ ನೀಡಬೇಕೆಂದು ಸಿಪಿಐಎಂ ಒತ್ತಾಯಿಸುತ್ತದೆ.

ಯು. ಬಸವರಾಜ
ಕಾರ್ಯದರ್ಶಿ

370ನೇ ವಿಧಿಯ ರದ್ದು ವಿರೋಧಿಸಿ ರಾಜ್ಯಾದ್ಯಂತ ಪ್ರತಿಭಟನೆ



ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುತ್ತಿದ್ದ ಸಂವಿಧಾನದ 370ನೇ ವಿಧಿ ಹಾಗೂ ಅದರ ಅಡಿಯಲ್ಲಿರುವ 35ಎ ವಿಧಿಯನ್ನು ಮೋದಿ ಸರ್ಕಾರ ರದ್ದುಪಡಿಸಿರುವುದನ್ನು ಖಂಡಿಸಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಹಾಗೂ ಪ್ರಗತಿಪರ ಸಂಘಟನೆಗಳು ರಾಜ್ಯಾದ್ಯಂತ ವ್ಯಾಪಕವಾದ ಪ್ರತಿಭಟನೆ ನಡೆಸಿದರು.

ಬೆಂಗಳೂರು:

ಅದೇ ದಿನ ಅಂದರೆ ಆಗಸ್ಟ್ 5ರಂದು ಸಂಜೆ ಬೆಂಗಳೂರು ಪುರಭವನದ ಮುಂಭಾಗದಲ್ಲಿ ವಿವಿಧ ಸಂಘಟನೆಗಳ ನೂರಾರು ಕಾರ್ಯಕರ್ತರು, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ನ್ಯಾಯವಾದಿಗಳು ಪ್ರತಿಭಟನಾ ಧರಣಿ ನಡೆಸಿ ಕೇಂದ್ರ ಸರ್ಕಾರದ ಏಕಪಕ್ಷೀಯ ಸರ್ವಾಧಿಕಾರಿ ಧೋರಣೆಯನ್ನು ಖಂಡಿಸಿದರು. ಸಿಪಿಐ(ಎಂ) ಮುಖಂಡರಾದ ನಿತ್ಯಾನಂದಸ್ವಾಮಿ, ಎಸ್.ವರಲಕ್ಷ್ಮಿ, ಕೆ.ಎನ್. ಉಮೇಶ, ಮೀನಾಕ್ಷಿ ಸುಂದರಂ, ಅಲ್ಲದೆ ಕೆ.ಎಸ್. ವಿಮಲ, ಬಸವರಾಜ ಪೂಜಾರ್, ಮುನೀರ್ ಕಾಟಿಪಳ್ಳ, ಕೆ.ಎಸ್.ಲಕ್ಷ್ಮಿ ಮೊದಲಾದವರು ಭಾಗವಹಿಸಿದ್ದರು. ಆಗಸ್ಟ್ 7ರಂದು ಎಡಪಕ್ಷಗಳ ಕರೆಯ ಮೇರೆಗೆ ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸಿಪಿಐ ಮತ್ತು ಸಿಪಿಎಂನಿಂದ ಪ್ರತಿಭಟನೆ ಮಾಡಿ ಮೋದಿ ಸರ್ಕಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಾಗಿದೆ.

ಉಡುಪಿ:

ಚುನಾಯಿತ ಸರಕಾರವಿಲ್ಲದೆ, ರಾಜ್ಯಪಾಲರ ಆಡಳಿತ ಇರುವ ಸಂದರ್ಭದಲ್ಲಿ ಸೈನ್ಯವನ್ನು ನಿಯೋಜಿಸಿ, ರಾಜಕೀಯ ನಾಯಕರನ್ನು ಗೃಹ ಬಂಧನದಲ್ಲಿ ಇರಿಸಿ, ಎಲ್ಲ ಬಗೆಯ ಪ್ರಜಾಪ್ರಭುತ್ವಾತ್ಮಕ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶವನ್ನು ನಿರಾಕರಿಸಿ, ಏಕಾಏಕಿ ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಭಾರತ ಸಂವಿಧಾನದ 370ನೇ ವಿಧಿಯನ್ನು ಕೇಂದ್ರ ಸರಕಾರ ರದ್ದುಗೊಳಿಸುವ ಮೂಲಕ ಸರ್ವಾಧಿಕಾರಿ ಧೋರಣೆ ಅನುಸರಿಸಿದೆ ಎಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಟೀಕಿಸಿ ಪ್ರತಿಭಟಿಸಿದೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳ ನೇತೃತ್ವದಲ್ಲಿ ಆಗಸ್ಟ್ 7 ರಂದು ಉಡುಪಿ ಅಜ್ಜರಕಾಡು ಹುತಾತ್ಮ ಸ್ಮಾರಕದ ಬಳಿ ಪ್ರತಿಭಟನೆ ನಡೆಸಲಾಯಿತು.

ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಸುರೇಶ್ ಕಲ್ಲಾಗರ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಜಿಲ್ಲಾ ಸಮಿತಿ ಮುಖಂಡರಾದ ಎಚ್. ನರಸಿಂಹ, ಶಶಿಧರ ಗೊಲ್ಲ, ವೆಂಕಟೇಶ್ ಕೋಣಿ, ಕವಿರಾಜ್, ಉಮೇಶ್ ಕುಂದರ್, ನಳಿನಿ, ಕೆ. ಲಕ್ಷ್ಮಣ್, ಡಿವೈಎಫ್ಐನ ಅಕ್ಷಯ್ ವಡೇರ ಹೋಬಳಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕೋಲಾರ:

ಕೇಂದ್ರ ಸರಕಾರವು ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕೊಡುವ ಸಂವಿಧಾನದ 370ನೇ ವಿಧಿಯನ್ನು ರದ್ದು ಮಾಡುವ ಮೂಲಕ ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಆಘಾತವನ್ನು ಉಂಟು ಮಾಡಿದೆ ಎಂದು ಸಿಪಿಐ(ಎಂ) ಕೋಲಾರ ಜಿಲ್ಲಾ ಸಮಿತಿಯಿಂದ ಬಸ್ ನಿಲ್ದಾಣದ ವೃತ್ತದಲ್ಲಿ ರಸ್ತೆ ತಡೆ ನಡೆಸುವ ಮೂಲಕ ಪ್ರತಿಭಟನೆ ನಡೆಸಲಾಯಿತು.

ಕೇಂದ್ರ ಸರಕಾರ ಸಂಸತ್ತಿನಲ್ಲಿ ಚರ್ಚಿಸದೇ ಏಕಾಏಕಿ ಆದೇಶವನ್ನು ಮಾಡುವ ಮೂಲಕ ದೇಶದ ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಉಂಟು ಮಾಡಿದ್ದಾರೆ. ಭಾರತದ ಐಕ್ಯತೆಯೂ ವೈವಿಧ್ಯತೆಯಿಂದ ಕೂಡಿದ್ದು, ಬಿಜೆಪಿ ಮತ್ತು ಆರ್.ಎಸ್.ಎಸ್.ನ ಮುಖಂಡರು ಯಾವುದೇ ವೈವಿಧ್ಯತೆಯನ್ನು ಮತ್ತು ಒಕ್ಕೂಟ ತತ್ವವನ್ನು ಒಪ್ಪುವುದಿಲ್ಲ. ಜಮ್ಮು ಮತ್ತು ಕಾಶ್ಮೀರವನ್ನು ಒಂದು ಆಕ್ರಮಿತ ಪ್ರದೇಶದಂತೆ ಕಾಣುತ್ತಿದ್ದು ಸಂವಿಧಾನವನ್ನು ತುಳಿದು ರಾಷ್ಟ್ರೀಯ ಐಕ್ಯತೆ ಮತ್ತು ಒಂದು ಒಕ್ಕೂಟ ಪರಿಕಲ್ಪನೆಯ ಮೇಲೆ ದಾಳಿ ಮಾಡಿದ್ದಾರೆ ಎಂದರು.

ಭಾರತದ ಜನಗಳೊಂದಿಗೆ ಜಮ್ಮು ಮತ್ತು ಕಾಶ್ಮೀರ ಜನತೆ ಉತ್ತಮ ಸಂಬಂಧ ಹೊಂದಿದ್ದು, ಹಿಂದೆ ಸರಕಾರ ಆಶ್ವಾಸನೆ ನೀಡಿದಂತೆ ರಾಜಕೀಯ ಸಂವಾದದ ಪ್ರಕ್ರಿಯೆಯ ಮೂಲಕ ಬಲಪಡಿಸಬೇಕಾಗಿತ್ತು. ಅದರ ಬದಲು ಈಗ ಏಕಪಕ್ಷೀಯವಾಗಿ ರದ್ದು ಮಾಡಿದ್ದು ಅಲ್ಲಿನ ಜನರಿಗೆ ದ್ರೋಹ ಬಗೆದಿದ್ದಾರೆ ಎಂದರು.

ಈ ಕುರಿತು ಒಂದು ಸಾವಿರ ಕರಪತ್ರಗಳನ್ನು ನೆರೆದಿದ್ದ ಸಾರ್ವಜನಿಕರಿಗೆ ವಿತರಿಸಲಾಯಿತು. ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಪಿ.ಶ್ರೀನಿವಾಸ್, ಜಿಲ್ಲಾ ಮುಖಂಡರಾದ ಗಾಂಧಿನಗರ ನಾರಾಯಣಸ್ವಾಮಿ, ವಿ.ಗೀತಾ, ಟಿ. ಎಂ. ವೆಂಕಟೇಶ್, ಎ.ಆರ್ ಬಾಬು, ಮುಖಂಡರಾದ ತಂಗರಾಜ್, ಪಾತಕೋಟೆ ನವೀನ್ ಕುಮಾರ್, ಮುನಿರಾಜಮ್ಮ, ಶ್ರೀರಾಮ್, ಈಶ್ವರಮ್ಮ, ಗಂಗಮ್ಮ, ಸುಶೀಲಾ, ವಾಸುದೇವರೆಡ್ಡಿ, ವಿಜಯಕುಮಾರಿ ಪಿ.ವಿ ರಮಣ್ ಮುಂತಾದವರು ಇದ್ದರು.

ಮಂಡ್ಯ:

ಭಾರತ ಸಂವಿಧಾನದ ಆರ್ಟಿಕಲ್ 370 ಮತ್ತು 35 ಎ, ರದ್ದುಪಡಿಸಿ, ಜಮ್ಮು ಕಾಶ್ಮೀರವನ್ನು ಇಬ್ಭಾಗಿಸಿ, ವಿಶೇಷ ಸ್ಥಾನಮಾನ ಕಿತ್ತುಕೊಂಡು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ತೀರ್ಮಾನ ಅಘಾತಕಾರಿ,ಪ್ರಜಾಪ್ರಭುತ್ವ ವಿರೋಧಿ ಮಾತ್ರವಲ್ಲ, ದೇಶದ ಐಕ್ಯತೆ, ಒಕ್ಕೂಟ ತತ್ವದ ಮೇಲಿನ ಬರ್ಬರ ಧಾಳಿ ಎಂದು ಸಿಪಿಐಎಂ ಮಂಡ್ಯ ಜಿಲ್ಲಾ ಸಮಿತಿ ಬಲವಾಗಿ ಖಂಡಿಸುತ್ತದೆ. ಕಾಶ್ಮೀರಿ ಜನತೆಯ ಅಭಿಪ್ರಾಯ ಕೇಳದೇ, ಯಾವುದೇ ಚರ್ಚೆ ನಡೆಸದೇ ಏಕಾಏಕಿ ತೆಗೆದುಕೊಂಡಿರುವ ತೀರ್ಮಾನ ಸ್ಪಷ್ಟ ಅಧಿಕಾರ ದುರ್ಬಳಕೆ ಹಾಗೂ ಬಹುಮತದ ಸ್ವೇಚ್ಛಾಚಾರ ಎಂದು ಸಿಪಿಐಎಂ ಮಂಡ್ಯ ಜಿಲ್ಲಾ ಸಮಿತಿ ಕಟುವಾಗಿ ಟೀಕಿಸಿದೆ. ಅದುದರಿಂದ ಈ ತಕ್ಷಣವೇ ಕೇಂದ್ರ ಸರ್ಕಾರ ತನ್ನ ತೀರ್ಮಾನವನ್ನು ಹಿಂಪಡೆಯಬೇಕು.ಜಮ್ಮು ಮತ್ತು ಕಾಶ್ಮೀರಕ್ಕೆ ಮೊದಲಿನಂತೆ ವಿಶೇಷ ಸ್ಥಾನಮಾನ ಕಲ್ಪಿಸಬೇಕು ಎಂದು ಸಿಪಿಐಎಂ ಮಂಡ್ಯ ಜಿಲ್ಲಾ ಸಮಿತಿ ಆಗ್ರಹಿಸಿದೆ.ಈ ಪ್ರತಿಭಟನೆ ನೇತೃತ್ವವನ್ನು ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಎಂ.ಪುಟ್ಟಮಾದು, ಜಿಲ್ಲಾ ಸಮಿತಿ ಸದಸ್ಯರುಗಳಾದ ಟಿ.ಯಶವಂತ, ಸಿ.ಕುಮಾರಿ, ಟಿಎಲ್ ಕೃಷ್ಣೇಗೌಡ, ಭರತ್ ರಾಜ್ ಎನ್ ಎಲ್, ಶೋಭ, ಸುಶೀಲಾ, ಬಸವರಾಜ್, ಹನುಮೇಶ್ ಬಿ. ವಹಿಸಿದ್ದರು.

➔

ಹಗರಿ ಬೊಮ್ಮನಹಳ್ಳಿ



ಕಲಬುರಗಿ



ಏಜೆನ್ಸಿದಾರರ ಮತ್ತು ಚಂದಾದಾರರ ಗಮನಕ್ಕೆ

ಏಜೆನ್ಸಿದಾರರಿಂದ ದೊಡ್ಡ ಮೊತ್ತದ ಪತ್ರಿಕೆಯ ಹಣ ಬಾಕಿಯಿದ್ದು ಪತ್ರಿಕೆಯನ್ನು ಹೊರ ತರುವುದು ಅಸಾಧ್ಯವಾಗಿದೆ. ಹೆಚ್ಚಿನ ಏಜೆನ್ಸಿ ಬಾಕಿ ಹಣವನ್ನು ಉಳಿಸಿಕೊಂಡಿರುವವರು ತಕ್ಷಣವೇ ಬಾಕಿಯನ್ನು ಪಾವತಿ ಮಾಡದಿದ್ದರೆ ಪತ್ರಿಕೆಯನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಮ್ಮಿಂದ ಬರಬೇಕಾದ ಬಾಕಿ ಹಣವನ್ನು ಕೂಡಲೇ ಕಳುಹಿಸಬೇಕೆಂದು ಕೋರಲಾಗಿದೆ.

ಅನೇಕ ನಮ್ಮ ವಾರ್ಷಿಕ ಚಂದಾದಾರರ ಚಂದಾ ಅವಧಿ ಮುಗಿದಿದ್ದು ಅವರು ಕೂಡಲೇ ವಾರ್ಷಿಕ ಚಂದಾ ಪಾವತಿ ಮಾಡಿ ಚಂದಾಗಳನ್ನು ನವೀಕರಿಸಬೇಕೆಂದು ಕೋರುತ್ತೇವೆ.

–ಸಂಪಾದಕರು









➔ ಬಳ್ಳಾರಿ:

ಜಮ್ಮು ಮತ್ತು ಕಾಶ್ಮೀರದ 370ನೇ ವಿಧಿ ರದ್ದು ವಿರೋಧಿಸಿ ಸಿಪಿಐ ಮತ್ತು ಸಿಪಿಐ(ಎಂ) ಜಂಟಿಯಾಗಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಆಗಸ್ಟ್ 7ರಂದು ಬುಧವಾರ ಪ್ರತಿಭಟನೆ ನಡೆಸಿದವು. ಮೋದಿ ಸರ್ಕಾರ ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಿ ಜಮ್ಮು ಮತ್ತು ಕಾಶ್ಮೀರದ ಜನತೆಗೆ ದ್ರೋಹ ಮಾಡಿದೆ ಎಂದು ಕಿಡಿಕಾರಿದ ಪ್ರತಿಭಟನಾಕಾರರು ಸರಕಾರ ತನ್ನ ಸರ್ವಾಧಿಕಾರಿ ಕ್ರಮವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು. ಮುಖಂಡರಾದ ವಿ.ಎಸ್. ಶಿವಶಂಕರ್.ಜೆ. ಚಂದ್ರಕುಮಾರಿ, ಕೆ. ನಾಗಭೂಷಣ ರಾವ್, ಶೇಖರ್ ಬಾಬು, ಕಟ್ಟೆ ಬಸಪ್ಪ, ಪಾಂಡು, ವಿಜಯ ಕುಮಾರ್ ಇದ್ದರು.

ಹೊಸಪೇಟೆ:

ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದುಗೊಳಿಸಿರುವ ಕೇಂದ್ರ ಸರ್ಕಾರದ ತೀರ್ಮಾನವನ್ನು ವಿರೋಧಿಸಿ ಸಿಪಿಎಂ ಕಾರ್ಯಕರ್ತರು ಬುಧವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು. ನಗರದ ಶ್ರಮಿಕ ಭವನದ ಎದುರು ಸೇರಿದ ಕಾರ್ಯಕರ್ತರು ಕೇಂದ್ರ ಸರ್ಕಾರ, ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ವಿರುದ್ಧ ಘೋಷಣೆ ಕೂಗಿದರು.

ಬಳಿಕ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಭಾಸ್ಕರ ರೆಡ್ಡಿ ಕೇಂದ್ರ ಸರ್ಕಾರದ ಈ ತೀರ್ಮಾನದಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ಮತ್ತಷ್ಟು ಅಸ್ಥಿರತೆ ಉಂಟಾಗಲಿದೆ. ಕಾರ್ಪೊರೇಟ್ ಕಂಪನಿಗಳಿಗೆ ಅಲ್ಲಿ ಲೂಟಿ ಮಾಡಲು ಅವಕಾಶ ದೊರೆಯಲಿದೆ ಎಂದು ಟೀಕಿಸಿದರು. ಮೋದಿ ಸರ್ಕಾರ ಸರ್ವಾಧಿಕಾರದ ದಾರಿ ತುಳಿಯುತ್ತಿದೆ ಎಂಬುವುದು ಇದರಿಂದ ಸಾಬೀತಾಗಿದೆ ಎಂದರು.

ಜಂಬಯ್ಯ ನಾಯಕ್, ಕರುಣಾ ನಿಧಿ, ಯಲ್ಲಾಲಿಂಗ, ನಾಗರತ್ನಮ್ಮ, ಎಂ.ಗೋಪಾಲ, ಶಿವಕುಮಾರ, ಯಲ್ಲಮ್ಮ ಇನ್ನಿತರರಿದ್ದರು.

ಹಗರಿಬೊಮ್ಮನಹಳ್ಳಿ :

ಕೇಂದ್ರ ಸರ್ಕಾರ ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಶೇಷ ಸ್ಥಾನಮಾನ ರದ್ದುಪಡಿಸಿ ಸಂವಿಧಾನಕ್ಕೆ ಅಪಚಾರ ಎಸಗಿದೆ ಎಂದು ಸಾಮೂಹಿಕ ಸಂಘಟನೆಗಳ ವೇದಿಕೆಯ ಸಂಚಾಲಕ ಎಸ್. ಜಗನ್ನಾಥ್ ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿನ ತಹಶೀಲ್ದಾರರ ಕಚೇರಿ ಎದುರು ನಡೆದ ಧರಣಿ ನೇತೃತ್ವವಹಿಸಿ ಅವರು ಮಾತನಾಡುತ್ತಿದ್ದರು. ಅನಂತರ ಶಿರಸ್ತೇದಾರ ಎಚ್.ಎಮ್. ಶ್ವೇತಾ ಅವರಿಗೆ ಪ್ರತಿಭಟನಾ ಮನವಿಯನ್ನು ಸಲ್ಲಿಸಲಾಯಿತು. ವಿವಿಧ ಸಂಘಟನೆಗಳ ಮುಖಂರ ರಾದ ಸರ್ದಾರ್ ಹುಲಿಗೆಮ್ಮ, ಪಿ.ಚಾಂದಬೀ,ಕೆ.ಅಂಜಿನಮ್ಮ, ಸಿ.ಹನುಮಂತಪ್ಪ, ಕೆ.ಸುರೇಶ್, ಕೆ,ರಮೇಶ್, ಗಾಳೆಪ್ಪ ಇದ್ದರು.

ಸಿರುಗುಪ್ಪ:

ಕಾಶ್ಮೀರಕ್ಕೆ ನೀಡಿದ ವಿಶೇಷ ಸ್ಥಾನಮಾನ ಮತ್ತು ಸ್ವಾಯತ್ತತೆಯನ್ನು ರದ್ದುಗೊಳಿಸುವ ಮೂಲಕ ಕೇಂದ್ರ ಸರ್ಕಾರ ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ದೊಡ್ಡ ಹೊಡೆತ ನೀಡಿದೆ ಎಂದು ಸಿಪಿಐ(ಎಂ) ಮುಖಂಡ ಮಾರುತಿ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಗಾಂಧಿ ವೃತ್ತದಲ್ಲಿ ಪಕ್ಷದ ತಾಲೂಕು ಸಮಿತಿ ವತಿಯಿಂದ ಆಯೋಜಿಸಲಾದ ಪ್ರತಿಭಟನೆಯ ನಂತರ ತಹಶಿಲ್ದಾರ್ ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸಲಾಯಿತು. ಸಮಿತಿಯ ತಾಲೂಕು ಕಾರ್ಯದರ್ಶಿ ಎಚ್ ತಿಪ್ಪಯ್ಯ ಹಾಗೂ ಕೆ ನೀಲಪ್ಪ ಮೊದಲಾದವರು ನೇತೃತ್ವ ವಹಿಸಿದರು.

ಇದರಂತೆ ಬಾಗೇಪಲ್ಲಿ, ಕಲ್ಬುರ್ಗಿ, ಗಂಗವತಿ, ರಾಯಚೂರು, ಸಿಂಧನೂರು, ದೇವದುರ್ಗ ಮೊದಲಾದ ಕೇಂದ್ರಗಳಲ್ಲಿ ಪ್ರತಿಭಟನೆ ನಡೆದಿರುವುದು ವರದಿಯಾಗಿದೆ. ಹೋರಾಟ ದೇಶವ್ಯಾಪಿಯಾಗಿ ಮುಂದುವರೆಯಲಿದೆ. ■

ಋಣಮುಕ್ತ ಜಾರಿಗೆ ತರುವಂತೆ ಮೋದಿ ಸರ್ಕಾರಕ್ಕೆ ಆಗ್ರಹ

ಎಲ್ಲಾ ಕೃಷಿ ಉತ್ಪನ್ನಗಳಿಗೆ ಸ್ವಾಮಿನಾಥನ್ ಶಿಫಾರಸ್ಸಿನಂತೆ ಉತ್ಪಾದನಾ ವೆಚ್ಚಕ್ಕೆ ಶೇಕಡಾ50 ರಷ್ಟು ಲಾಭಾಂಶ ಇರುವ ಕನಿಷ್ಠ ಬೆಂಬಲ ಬೆಲೆ ಖಾತರಿಗೆ ಹಾಗೂ ರೈತ ಹಾಗೂ ಕೃಷಿ ಕೂಲಿಕಾರರು, ಗ್ರಾಮೀಣ ಕುಶಲ ಕರ್ಮಿಗಳನ್ನು ಋಣಮುಕ್ತಗೊಳಿಸಲು ರಾಷ್ಟ್ರೀಯ ಋಣ ಮುಕ್ತಿ ಆಯೋಗ ಕ್ಕೆ ಶಾಸನ ಬಲ ಒದಗಿಸಲು ,ಈಗಾಗಲೇ ನೂರತೊಬ್ಬತ್ತುಕ್ಕು ಹೆಚ್ಚು ರೈತಾಪಿ ಸಂಘಟನೆಗಳು ಕಳೆದ ವರ್ಷ ನವೆಂಬರ್ ನಲ್ಲಿ ಲಕ್ಷಾಂತರ ರೈತರ ಪಾದಯಾತ್ರೆ ಮೂಲಕ ಸಂಸತ್ ಚಲೋ ನಡೆಸಿ ನೀಡಿರುವ ಮಸೂದೆಗಳನ್ನು ಅಂಗೀಕರಿಸಲು ವಿಶೇಷ ಸಂಸತ್ ಅಧಿವೇಶನ ನಡೆಸಬೇಕೆಂದು ಅಖಿಲ ಭಾರತ ಕರೆ ಮೇರೆಗೆ ಮಂಡ್ಯ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸಿ ರಾಷ್ಟ್ರಪತಿಗಳಿಗೆ ಬೇಡಿಕೆ ಪತ್ರ ಕೊಡಲಾಯಿತು.ಪ್ರತಿಭಟನೆ ನೇತೃತ್ವವನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಜಿಲ್ಲಾಧ್ಯಕ್ಷ ಎಂ.ಪುಟ್ಟಮಾದು, ಜಿಲ್ಲಾ ಕಾರ್ಯದರ್ಶಿ ಬಿ.ಹನುಮೇಶ್, ಜಿಲ್ಲಾ ಉಪಾಧ್ಯಕ್ಷ ಸುರೇಂದ್ರ, ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಮುಖಂಡರಾದ ಟಿ.ಯಶವಂತ, ಟಿಎಲ್ ಕೃಷ್ಣೇಗೌಡ ಎನ್.ಎಲ್. ಭರತ್ ರಾಜ್, ಲಿಂಗರಾಜಮೂರ್ತಿ, ನೀರಾ ರೈತ ಮುಖಂಡ ಸಿದ್ದೇಗೌಡ ವಹಿಸಿದ್ದರು. ■



ಕುಂದಾಪುರದಲ್ಲಿ ಡಿವೈಎಫ್‌ಐ ತಾಲೂಕು ಸಮ್ಮೇಳನ

ನಿರುದ್ಯೋಗದ ವಿರುದ್ಧ, ಸ್ಥಳೀಯ ಉದ್ಯೋಗದ ಸೃಷ್ಟಿಗಾಗಿ ಹಾಗೂ ಸೌಹಾರ್ದ ಸುಂದರ ಸಮಾಜದ ನಿರ್ಮಾಣಕ್ಕಾಗಿ ಎಂಬ ಘೋಷವಾಕ್ಯಗಳನ್ನಿಟ್ಟುಕೊಂಡು ಕುಂದಾಪುರದಲ್ಲಿ ಆಗಸ್ಟ್ 4ರಂದು ಡಿವೈಎಫ್‌ಐ 14ನೇ ತಾಲೂಕು ಸಮ್ಮೇಳನ ನಡೆಸಲಾಯಿತು.

ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ಸಂತೋಷ್ ಕುಮಾರ್ ಬಜಾಲ್ ಸಮ್ಮೇಳನವನ್ನು ಉದ್ಘಾಟಿಸಿದರು. ಡಿವೈಎಫ್‌ಐ ಕುಂದಾಪುರ ತಾಲೂಕು ಉಪಾಧ್ಯಕ್ಷ ಸುರೇಶ್ ಕಲ್ಲಾಗರ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರಾಂತ ಕೃಷಿ ಕೂಲಿಕಾರರ ಸಂಘದ ವೆಂಕಟೇಶ್ ಕೋಣಿ, ಜನವಾದಿ ಮಹಿಳಾ ಸಂಘಟನೆಯ ನಾಗರತ್ನ ನಾಡ, ಯುವ ಸಾಹಿತಿ ಸಚಿನ್ ಅಂಕೋಲಾ, ತಾಲೂಕು ಆಟೋರಿಕ್ಷಾ ಮತ್ತು ವಾಹನ ಚಾಲಕರ ಸಂಘದ ರಾಜು ದೇವಾಡಿಗ, ಡಿವೈಎಫ್‌ಐ ಮಾಜಿ ಮುಖಂಡ ಎಚ್. ನರಸಿಂಹ ಉಪಸ್ಥಿತರಿದ್ದರು.

ಸಮ್ಮೇಳನದಲ್ಲಿ 23 ಸದಸ್ಯರನ್ನೊಳಗೊಂಡ ನೂತನ ತಾಲೂಕು ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ರಾಜೇಶ್ ವಡೇರ ಹೋಬಳಿ, ಕಾರ್ಯದರ್ಶಿಯಾಗಿ ಗಣೇಶ್ ದಾಸ್ ಆಯ್ಕೆಯಾಗಿರುತ್ತಾರೆ. ರವಿ ವಿ.ಎಂ. ವಂದಿಸಿದರು. ■

ಅತಿಥಿ ಅಂಕಣ

ಪ್ರೊ. ಟಿ.ಆರ್. ಚಂದ್ರಶೇಖರ್

ಅರ್ಥಶಾಸ್ತ್ರಜ್ಞರ ಪ್ರಕಾರ 2024ರಲ್ಲಿ ನಮ್ಮ ಜಿಡಿಪಿಯು ಐದು ಟ್ರಿಲಿಯನ್ ಡಾಲರ್ ಆಗಬೇಕಾದರೆ ಆಂತರಿಕ ಉಳಿತಾಯದ ಪ್ರಮಾಣ ವಾರ್ಷಿಕ ಜಿಡಿಪಿಯ ಶೇ. 40 ರಷ್ಟಾಗಬೇಕು. ಅದು 2013–14ರಲ್ಲಿ ಜಿಡಿಪಿಯ ಶೇ. 31.4 ರಷ್ಟಿದ್ದುದು 2016–17ರಲ್ಲಿ ಶೇ. 29.6ಕ್ಕಿಳಿದಿದೆ. ಉಳಿತಾಯದ ಪ್ರಮಾಣದಲ್ಲಿ ಏರಿಕೆಯಾಗಬೇಕಾದರೆ ಸಮಾಜದ ಕೆಳಸ್ತರದಲ್ಲಿರುವ ಜನರ ವರಮಾನದ ಮಟ್ಟ ಉತ್ತಮವಾಗಬೇಕು. ಸಮಾಜದ ಕೆಳಸ್ತರದ ಶೇ 90 ರಷ್ಟು ಜನರ ಬದುಕನ್ನು, ಅವರ ವರಮಾನದ ಮಟ್ಟವನ್ನು, ಅವರ ದುಡಿಮೆಯ ಸಾಮರ್ಥ್ಯವನ್ನು ಉತ್ತಮಪಡಿಸದೆ ಭಾರತದ ಆರ್ಥಿಕತೆಯನ್ನು ಐದು ಟ್ರಿಲಿಯನ್ ಡಾಲರ್ ದೇಶವನ್ನಾಗಿ ಮಾಡುವುದು ಅಸಾಧ್ಯ.

ಐದು ಟ್ರಿಲಿಯನ್ ಡಾಲರ್ ಸುಭಿಕ್ಷ: ಜನರ ಬದುಕಿನ ದುರ್ಭಿಕ್ಷ

ಇತ್ತೀಚಿಗೆ ನಮ್ಮ ಪ್ರಧಾನಮಂತ್ರಿಗಳು, ಅವರ ಮಂತ್ರಿಮಂಡಳದ ಸದಸ್ಯರು 2024–25 ರಲ್ಲಿ ಭಾರತದ ಜಿಡಿಪಿ ಐದು ಟ್ರಿಲಿಯನ್ ಡಾಲರುಗಳಷ್ಟಾಗಬೇಕೆಂಬ ಮಂತ್ರವನ್ನು ಜಪಿಸುತ್ತಿದ್ದಾರೆ. ಐದು ಟ್ರಿಲಿಯನ್ ಡಾಲರ್ ಜಿಡಿಪಿ ಎನ್ನುವಲ್ಲಿ ವರಮಾನವೇ ಅಭಿವೃದ್ಧಿಯಾಗಿದೆ. ಇಲ್ಲಿ ವರಮಾನದ ಏರಿಕೆಯೇ ಅಭಿವೃದ್ಧಿಯನ್ನು ಮಾಪನ ಮಾಡುವ ಮಾನದಂಡ. ಐದು ಟ್ರಿಲಿಯನ್ ಡಾಲರ್ ಎನ್ನುವುದು ರೂ. 70ರ ಪ್ರತಿ ಡಾಲರ್ ಬೆಲೆಯಲ್ಲಿ ರೂ. 350,00,000 ಕೋಟಿ ಅಥವಾ ರೂ. 350 ಲಕ್ಷ ಕೋಟಿಯಷ್ಟಾಗುತ್ತದೆ. ಇದು ಕೇಳುವುದಕ್ಕೆ ಮತ್ತು ಹೇಳುವುದಕ್ಕೆ ತುಂಬಾ ಆಪ್ಯಾಯಮಾನವಾಗಿದೆ. ಜಗತ್ತಿನಲ್ಲಿ ಭಾರತವನ್ನು ಶ್ರೀಮಂತ ರಾಷ್ಟ್ರವನ್ನಾಗಿ ಮಾಡುವ ಮಹತ್ವಾಕಾಂಕ್ಷೆ ಗುರಿ ಇದಾಗಿದೆ. ಹೀಗೆ ಗುರಿಯನ್ನಿಟುಕೊಳ್ಳುವುದರಲ್ಲಿ ತಪ್ಪೇನಿಲ್ಲ. ಒಂದು ಅಂದಾಜಿನ ಪ್ರಕಾರ 2024ರಲ್ಲಿ ನಮ್ಮ ಜಿಡಿಪಿಯು ಐದು ಟ್ರಿಲಿಯನ್ ಡಾಲರಷ್ಟಾಗಬೇಕಾದರೆ 2019–20 ರಿಂದ ನಿಜ–ಜಿಡಿಪಿಯ ವಾರ್ಷಿಕ ಬೆಳವಣಿಗೆ ಶೇ. 9 ರಷ್ಟಿರಬೇಕು. ನಮ್ಮ ಆರ್ಥಿಕತೆಯು ಕಳೆದ ಐದು ವರ್ಷಗಳಲ್ಲಿ ವಾರ್ಷಿಕ ಶೇ. 7.1 ರ ಪ್ರಮಾಣದಲ್ಲಿ ಬೆಳೆಯುತ್ತಿದೆ. ಇದರ ಬೆಳವಣಿಗೆ ಪ್ರಮಾಣ 2017–18ರಲ್ಲಿ ಶೇ. 6.8 ರಷ್ಟಾಗಿದೆ. ಅದಕ್ಕೆ ಶೇ. 9ರ ಹತ್ತಿರ ಹೋಗುವುದು ಸಾಧ್ಯವಾಗಿಲ್ಲ. ಮೇಲಾಗಿ ಹಣಕಾಸು ಮಂತ್ರಾಲಯದ ಹಿಂದಿನ ಆರ್ಥಿಕ ಸಲಹೆಗಾರ ಅರವಿಂದ ಸುಬ್ರಮಣಿಯನ್ ಪ್ರಕಾರ ಶೇ. 7.1 ಜಿಡಿಪಿ ಬೆಳವಣಿಗೆ ಎಂಬ ಸರ್ಕಾರದ ವರದಿ ಉತ್ಪ್ರೇಕ್ಷೆಯಿಂದ ಕೂಡಿದೆ ಎಂದೂ, ವಾಸ್ತವವಾಗಿ ಅದು 2011–12 ರಿಂದ ವಾರ್ಷಿಕ ಕೇವಲ ಶೇ. 4.5 ರ ಪ್ರಮಾಣದಲ್ಲಿ ಬೆಳೆಯುತ್ತಿದೆ ಎನ್ನುತ್ತಿದಾರೆ. ಈ ಹಿನ್ನೆಲೆಯಲ್ಲಿ ಐದು ಟ್ರಿಲಿಯನ್ ಡಾಲರ್ ಜಿಡಿಪಿ ಎಂಬುದು ಅತ್ಯಂತ ಮಹತ್ವಾಕಾಂಕ್ಷೆಯ ಅವಾಸ್ತವಿಕ ಗುರಿಯಾಗಿದೆ ಎಂದು ಹೇಳಬೇಕಾಗುತ್ತದೆ.

ನಮ್ಮ ಆರ್ಥಿಕತೆಯ ಜಿಡಿಪಿಯು ರೂ.350 ಲಕ್ಷ ಕೋಟಿಯಾದರೆ ಭಾರತ ಶ್ರೀಮಂತ ರಾಷ್ಟ್ರವಾಗಿ ಬಿಡುತ್ತದೆಯೇ? ಇದು ಪ್ರಶ್ನೆ. ವರಮಾನವೇ ಬದುಕಿನ ಅಂತಿಮ ಗಂತವ್ಯವೇ? ಅನೇಕ ಅಧ್ಯಯನಗಳು ಅನುಮಾನಕ್ಕೆಡೆಯಿಲ್ಲದಂತೆ ತೋರಿಸುತ್ತಿರುವುದು ವರಮಾನ ಏರಿಕೆಯಾಗಿ ಬಿಟ್ಟರೆ ಆರ್ಥಿಕತೆಯಲ್ಲಿ ಬಡತನ, ಹಸಿವು, ದುಸ್ಥಿತಿ, ನಿರುದ್ಯೋಗ ದೂರವಾಗುವುದಿಲ್ಲ. ನೊಬೆಲ್ ಪ್ರಶಸ್ತಿ ವಿಜೇತ ಜೋಸೆಫ್ ಸ್ಟಿಗ್‌ಲಿಟ್ಜ್ ಮತ್ತೆಮತ್ತೆ ತನ್ನ ಕೃತಿಗಳಲ್ಲಿ ಟ್ರಿಕಲ್ ಡೌನ್ ಅರ್ಥಶಾಸ್ತ್ರವು ಎಲ್ಲೆಲ್ಲಿಯೂ ಯಶಸ್ವಿಯಾಗಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಮತ್ತೊಬ್ಬ ನೊಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯ ಸೇನ್ ಕಳೆದ ಎರಡು–ಮೂರು ದಶಕಗಳಿಂದ 'ಅಭಿವೃದ್ಧಿಯು ಜನರ ಬದುಕಿನ ಸಮೃದ್ಧತೆಯನ್ನು ವಿಸ್ತೃತಗೊಳಿಸುವ ಪ್ರಕ್ರಿಯೆಯೇ ವಿನಾ ಅದು ಆರ್ಥಿಕ ಸಮೃದ್ಧತೆಯನ್ನು ವಿಸ್ತೃತಗೊಳಿಸುವ ಪ್ರಕ್ರಿಯೆಯಲ್ಲ' ಎಂಬುದನ್ನು ಪ್ರತಿಪಾದಿಸುತ್ತಾ ಬಂದಿದ್ದಾರೆ. ಯುಎನ್‌ಡಿಪಿ ನೇತೃತ್ವದಲ್ಲಿ ಮೊದಲ ಮಾನವ ಅಭಿವೃದ್ಧಿ ವರದಿಯನ್ನು ರೂಪಿಸಿದ್ದ ಮೆಹಬೂಬ್ ಉಲ್ ಹಕ್ ಅವರು 1990ರಲ್ಲಿಯೇ 'ವರಮಾನವೇ ಬದುಕಿನ ಒಟ್ಟು ಮೊತ್ತವಲ್ಲ' ಎಂದು ಹೇಳಿದ್ದಾರೆ.

ಪ್ರಧಾನಮಂತ್ರಿ ಹೇಳುತ್ತಿರುವ ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಯು ಒಂದು ಅಖಂಡ ಸೂಚಿ. ಇಡೀ ದೇಶದ ಸಂಪತ್ತಿನ ಸೂಚಿ ಇದಾಗಿದೆ. ಮಾರ್ಥ ನುಸುಬೌಮ್ 2000ದಲ್ಲಿ ಎಚ್ಚರಿಸಿರುವಂತೆ ಅಭಿವೃದ್ಧಿಯ ಮೌಲ್ಯಮಾಪನದಲ್ಲಿ ರಾಷ್ಟ್ರದ ಸಂಪತ್ತಿಗಿಂತ ಪ್ರತಿಯೊಬ್ಬ ಪ್ರಜೆಯ ಜೀವನಮಟ್ಟವನ್ನು ಪ್ರತ್ಯೇಕವಾಗಿ ಮಾಪನ ಮಾಡುವುದು ಅಗತ್ಯ ಎಂಬುದು ನಮಗೆ ಮುಖ್ಯವಾಗಬೇಕು. ಬಹು–ಆಯಾಮಗಳ(ಮಲ್ಟಿಡೈಮೆನ್ಷನಲ್) ಅಸಮಾನತೆಗಳಿಂದ ಕೂಡಿರುವ [ವರ್ಣ(ಜಾತಿ), ವರ್ಗ, ಲಿಂಗ] ನಮ್ಮ ಸಮಾಜದಲ್ಲಿ ಅಖಂಡತೆಗಿಂತ ಬಿಡಿ ಬಿಡಿ ಜನರ ಬದುಕಿನ ಸ್ಥಿತಿಗತಿಯ ಮೌಲ್ಯಮಾಪನವು ಅಭಿವೃದ್ಧಿಯ ಮಾನದಂಡವಾಗಬೇಕು. ಜಿಡಿಪಿಯ ಅಂಕಿಅಂಶಗಳು ಆರ್ಥಿಕತೆಯಲ್ಲಿನ ವರಮಾನದ ವಿತರಣೆಯ ಬಗ್ಗೆ ಏನನ್ನೂ ಹೇಳುವುದಿಲ್ಲ. ನಮ್ಮ ಸಮಾಜವನ್ನು ಕಾಡುತ್ತಿರುವ ಅತಿ ದೊಡ್ಡ ಪೀಡೆ ಅಸಮಾನತೆ. ಇದರ ಬಗ್ಗೆ ಅದು ಚಕಾರವೆತ್ತುವುದಿಲ್ಲ. ಜಿಡಿಪಿ ಮಾಹಿತಿಯಲ್ಲಿ ಸಮಾಜದ ಯಾವ ವರ್ಗಕ್ಕೆ ಹೆಚ್ಚು ಮತ್ತು ಯಾವ ವರ್ಗಕ್ಕೆ ಕಡಿಮೆ ಅದರ ಪಾಲು ದೊರೆಯುತ್ತದೆ ಎಂಬುದರ ವಿವರ ಇರುವುದಿಲ್ಲ. ಇದು ಬಹಳ ಮುಖ್ಯ. ಏಕೆಂದರೆ ಜಿಡಿಪಿ ಅಖಂಡವಿದ್ದರೆ ನಮ್ಮ ಸಮಾಜ ಅಖಂಡವಾದುದೇನಲ್ಲ.

ಆರ್ಥಿಕತೆಯಲ್ಲಿನ ಮಹಿಳೆಯರ ದುಡಿಮೆಯನ್ನು ಅದು ಒಳಗೊಳ್ಳುವುದಿಲ್ಲ. ಅನೌಪಚಾರಿಕ ವಲಯದ ಎಲ್ಲ ಚಟುವಟಿಕೆಗಳು ಇದರಲ್ಲಿ ಸೇರುವುದಿಲ್ಲ. ಉದಾಹರಣೆಗೆ ಶಾಲೆಯಲ್ಲಿ ಪಾಠ ಮಾಡುವ ಶಿಕ್ಷಕಿಯೊಬ್ಬರ ವರಮಾನ ಮತ್ತು ಅವರು ಖಾಸಗಿ ಪಾಠಮಾಡಿ ಗಳಿಸುವ ವರಮಾನ ಜಿಡಿಪಿ ಮಾಪನದಲ್ಲಿ ಸೇರುತ್ತವೆ. ಶಿಕ್ಷಕಿಯೊಬ್ಬರು ಮಕ್ಕಳಿಗೆ ಉಚಿತವಾಗಿ ಪಾಠ ಹೇಳಿ ಅವರು ಒಳ್ಳೆಯ ಅಂಕ ಗಳಿಸಿಕೊಳ್ಳುವಂತೆ ಮಾಡಿದರೆ ಅದು ಜಿಡಿಪಿಯ ಮಾಪನದಲ್ಲಿ ಸೇರುವುದಿಲ್ಲ. ಮಹಿಳೆಯರ ಮನೆವಾರ್ತೆ ದುಡಿಮೆಯು ಅದರಲ್ಲಿ ಸೇರುವುದಿಲ್ಲ.

ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಗೆ ಸಂಬಂಧಿಸಿದಂತೆ ಕೇಳಿಕೊಳ್ಳಬೇಕಾದ ಪ್ರಶ್ನೆ: ಅದು ಸಮಾಜದಲ್ಲಿ ಯಾವ ವರ್ಗದ ಪಾಲಾಗುತ್ತದೆ ಎಂಬುದಾಗಿದೆ. ಇತ್ತೀಚಿಗೆ ಆಕ್ಸ್‌ಫಾಮ್ ಸಂಸ್ಥೆಯು ಪ್ರಕಟಿಸಿರುವ ವರದಿಯು ಭಾರತದ 2017–18ರ ಜಿಡಿಪಿಯಲ್ಲಿ ಶೇ.77.4 ರಷ್ಟು ಸಿಂಹಪಾಲು ಸಮಾಜದ ಉನ್ನತ ಸ್ತರದಲ್ಲಿರುವ ಶೇ. 10 ರಷ್ಟು ಜನರ ಪಾಲಾಗಿದೆ ಎಂಬ ಅಸಮಾನತೆಯ ಕ್ರೂರ ಚಿತ್ರವನ್ನು ತೆರೆದಿಟ್ಟಿದೆ. ಅಂದರೆ 2024ರಲ್ಲಿನ ಐದು ಟ್ರಿಲಿಯನ್ ಡಾಲರ್ ಜಿಡಿಪಿಯಲ್ಲಿ 3.85 ಟ್ರಿಲಿಯನ್ ಡಾಲರ್ ದೇಶದ ಶೇ. 10 ರಷ್ಟು ಜನರ ಪಾಲಾದರೆ ಉಳಿದ ಶೇ. 90 ರಷ್ಟು ಜನರು ಕೇವಲ 1.15 ಟ್ರಿಲಿಯನ್ ಡಾಲರ್ ಪಡೆಯಬೇಕಾಗುತ್ತದೆ. ಉನ್ನತಸ್ತರದ ಜನರ ತಲಾ ವರಮಾನವು ಲಕ್ಷ ಲಕ್ಷಗಟ್ಟಲೆಯಾದರೆ ತಳಸ್ತರದ ಜನತೆಯ ತಲಾ ವರಮಾನವು ಸಾವಿರಗಳಲ್ಲಿರುತ್ತದೆ. ಜಿಡಿಪಿಯಲ್ಲಿ ಎಷ್ಟು ಏರಿಕೆಯಾಗುತ್ತದೆ ಎನ್ನುವುದು ಅಭಿವೃದ್ಧಿಯ ದೃಷ್ಟಿಯಿಂದ ಮುಖ್ಯ, ನಿಜ. ಅದಕ್ಕಿಂತ ನಮಗೆ ಅತಿ ಮುಖ್ಯವಾಗಬೇಕಾದುದು ಏರಿಕೆಯಾದ ಜಿಡಿಪಿಯಲ್ಲಿ ಸಮಾಜದ ಕೆಳಸ್ತರದ ಜನರಿಗೆ ಹೆಚ್ಚು ಹೆಚ್ಚು ದೊರೆಯುವಂತೆ ಮಾಡುವುದು ಹೇಗೆ ಎಂಬುದಾಗಿದೆ. ಯಾವುದನ್ನು ನಾವು 'ವಿತರಣಾ ನ್ಯಾಯ' ಎಂದು ಕರೆಯುತ್ತಿದ್ದೇವೇಯೋ ಅದು ಇಂದು ಆನುಷಂಗಿಕವಾಗಿ ಬಿಟ್ಟಿದೆ. ಇಂದು ನಾವು 'ಉತ್ಪಾದನೆ ಮೊದಲು; ವಿತರಣೆ ನಂತರ' ಎನ್ನುವ ಭಾರತದಲ್ಲಿ ಬದುಕುತ್ತಿದ್ದೇವೆ. ಹೀಗೆ ಕೇವಲ ವರಮಾನದ ಏರಿಕೆಯನ್ನು ವ್ಯಸನದಂತೆ ಹಚ್ಚಿಕೊಂಡರೆ, ಸಾಮಾಜಿಕ(ಜಾತಿ) ಅಸಮಾನತೆಯಿಂದ ಬಸವಳಿದ ನಮ್ಮ ಸಮಾಜದಲ್ಲಿನ ಪ.ಜಾ, ಪ.ಪಂ. ಹಿಂದುಳಿದ ವರ್ಗ, ದಿನಗೂಲಿ ದುಡಿಮೆಗಾರರಿಗೆ 'ನ್ಯಾಯ' ದೊರಯುವುದು ಸಾಧ್ಯವಿಲ್ಲ. ಈ ವರ್ಗ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 70 ರಿಂದ ಶೇ. 80 ರಷ್ಟಿದೆ. ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಯಲ್ಲಿ ವಿತರಣಾ ನ್ಯಾಯಕ್ಕೆ ಮನ್ನಣೆಯಿಲ್ಲದಿದ್ದರೆ ತಳವರ್ಗದ ಜನಸ್ತೋಮ 'ಸಮೃದ್ಧತೆಯಿಂದ' ವಂಚಿತವಾಗಿ ಬಿಡುತ್ತದೆ.



ಅರ್ಥಶಾಸ್ತ್ರಜ್ಞರ ಪ್ರಕಾರ 2024ರಲ್ಲಿ ನಮ್ಮ ಜಿಡಿಪಿಯು ಐದು ಟ್ರಿಲಿಯನ್ ಡಾಲರ್ ಆಗಬೇಕಾದರೆ ಆಂತರಿಕ ಉಳಿತಾಯದ ಪ್ರಮಾಣ ವಾರ್ಷಿಕ ಜಿಡಿಪಿಯ ಶೇ. 40 ರಷ್ಟಾಗಬೇಕು. ಅದು 2013–14ರಲ್ಲಿ ಜಿಡಿಪಿಯ ಶೇ. 31.4 ರಷ್ಟಿದ್ದುದು 2016–17ರಲ್ಲಿ ಶೇ. 29.6ಕ್ಕಿಳಿದಿದೆ. ಉಳಿತಾಯದ ಪ್ರಮಾಣದಲ್ಲಿ ಏರಿಕೆಯಾಗಬೇಕಾದರೆ ಸಮಾಜದ ಕೆಳಸ್ತರದಲ್ಲಿರುವ ಜನರ ವರಮಾನದ ಮಟ್ಟ ಉತ್ತಮವಾಗಬೇಕು. ಸಮಾಜದ ಕೆಳಸ್ತರದ ಶೇ 90 ರಷ್ಟು ಜನರ ಬದುಕನ್ನು, ಅವರ ವರಮಾನದ ಮಟ್ಟವನ್ನು, ಅವರ ದುಡಿಮೆಯ ಸಾಮರ್ಥ್ಯವನ್ನು ಉತ್ತಮಪಡಿಸದೆ ಭಾರತದ ಆರ್ಥಿಕತೆಯನ್ನು ಐದು ಟ್ರಿಲಿಯನ್ ಡಾಲರ್ ದೇಶವನ್ನಾಗಿ ಮಾಡುವುದು ಅಸಾಧ್ಯ. ಇಲ್ಲದಿದ್ದರೆ ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಯು 'ಶೇ. 10 ರಷ್ಟು ಜನರಿಂದ, ಶೇ.10 ರಷ್ಟು ಜನರಿಗೋಸ್ಕರ ಮತ್ತು ಶೇ 10 ರಷ್ಟು ಜನರಿಗಾಗಿ' ಎನ್ನುವಂತಾಗುತ್ತದೆ. ಇದು ದೇಶದ ಪ್ರಜಾತಂತ್ರಕ್ಕೆ ಅಪಾಯಕಾರಿಯಾಗುವ ಸಂಭವವಿದೆ.

ಸರ್ಕಾರವು ಇಂದು ಜಿಡಿಪಿಯ ಬಗ್ಗೆ, ವರಮಾನದ ಬಗ್ಗೆ, ಉತ್ಪಾದನೆಯ ಬಗ್ಗೆ, ಬಂಡವಾಳದ ಬಗ್ಗೆ ಮಾತ್ರ ಮಾತನಾಡುತ್ತಿದೆ. ಇವೆಲ್ಲ ಅಭಿವೃದ್ಧಿಯ ದೃಷ್ಟಿಯಿಂದ ಅಪೇಕ್ಷಣೆಯ. ಇವುಗಳಷ್ಟೇ ಅಥವಾ ಇವುಗಳೊಂದಿಗೆ ಪೂರಕವಾದ ಸಂಬಂಧವಿರಿಸಿಕೊಂಡಿರುವ ಅಕ್ಷರ, ಆರೋಗ್ಯ, ಆಹಾರ, ಭದ್ರತೆ, ಮಹಿಳೆಯರ ಸ್ಥಿತಿಗತಿ, ಮಕ್ಕಳ ಸಂಗೋಪನೆ ಮುಂತಾದವೂ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತವೆ. ಬಡತನ–ಹಸಿವು ಮಾನವ ಹಕ್ಕುಗಳ ಉಲ್ಲಂಘನೆಯ ಅಪ್ಪಟ ಉದಾಹರಣೆಗಳು. ಈ ಸಂಗತಿಗಳ ಬಗ್ಗೆಯೂ ಸರ್ಕಾರ ಸ್ಪಂದಿಸಬೇಕು. ಸರ್ಕಾರವು ಉಳ್ಳವರ ಪರ ವಕಾಲತ್ತು ವಹಿಸುತ್ತದೆ ಎಂಬ ಭಾವನೆ ಜನರಲ್ಲಿ ಉಂಟಾಗಬಾರದು. ಬಡತನ, ಹಸಿವು, ಅಸಮಾನತೆ, ಲಿಂಗ ತಾರತಮ್ಯಗಳು ಮುಂತಾದವು ಜನರ ಸ್ವಾತಂತ್ರ್ಯವನ್ನು ಸೀಮಿತಗೊಳಿಸುವ ಪೀಡೆಗಳು.

ಅಭಿವೃದ್ಧಿಯ ನಾಲ್ಕು ಚಾಲಕ ಯಂತ್ರಗಳ ಬಗ್ಗೆ ಇಂದು ಚರ್ಚೆಯಾಗುತ್ತಿದೆ. ತಜ್ಞರ ಪ್ರಕಾರ ಈ ನಾಲ್ಕು ಯಂತ್ರಗಳು ಭಾರತದಲ್ಲಿ ಇಂದು ಮಂದಗತಿಯಲ್ಲಿ ಕೆಲಸ ಮಾಡುತ್ತಿವೆ. ರಫ್ತು ವ್ಯಾಪಾರವು 2014–15 ರಿಂದ ತೀವ್ರ ಕುಸಿಯುತ್ತಾ ನಡೆದಿದೆ. ಸಾರ್ವಜನಿಕ ವೆಚ್ಚವು 2013–14ರಲ್ಲಿ ಜಿಡಿಪಿಯ ಶೇ. 14.64 ರಷ್ಟಿದ್ದುದು 2019–20ರಲ್ಲಿ ಶೇ. 13.19ಕ್ಕಿಳಿದಿದೆ. ಸಾರ್ವಜನಿಕ ವೆಚ್ಚದಲ್ಲಿ ಬಂಡವಾಳ ವೆಚ್ಚದ ಪ್ರಮಾಣ 2013–14ರಲ್ಲಿ ಶೇ.2.01 ರಷ್ಟಿದ್ದುದು 2019–20ರಲ್ಲಿ ಇದು ಶೇ.1.6ಕ್ಕಿಳಿದಿದೆ. ಜನರ ಅನುಭೋಗವು ದುಸ್ಥಿತಿಯಲ್ಲಿದೆ. ಬಂಡವಾಳ ಹೂಡಿಕೆಯು ಅನಿಶ್ಚಿತ ಸ್ಥಿತಿಯಲ್ಲಿದೆ. ಅಭಿವೃದ್ಧಿಯ ನಾಲ್ಕೂ ಚಾಲಕ ಯಂತ್ರಗಳು ನಿಸ್ತೇಜವಾಗಿರುವ ಸ್ಥಿತಿಯಲ್ಲಿ ಐದು ಟ್ರಿಲಿಯನ್ ಡಾಲರ್ ಜಿಡಿಪಿ ಗುರಿಯು ಅವಾಸ್ತವಿಕವಾಗಿ ಕಾಣುತ್ತದೆ. ಅರವಿಂದ ಸುಬ್ರಮಣಿಯನ್ 2014–15ರಲ್ಲಿ ಹೇಳಿದ ಎರಡಂಕಿ ಜಿಡಿಪಿಯ ಸಾಧನೆಯಿರಲಿ ಇಂದು ಜಿಡಿಪಿ ಬೆಳವಣಿಗೆಯ ಕುಸಿತವನ್ನು ತಡೆಯುವುದು ಕಷ್ಟಸಾಧ್ಯವಾಗಿದೆ. ಎಲ್ಲಿಯವರೆಗೆ ಸಾರ್ವಜನಿಕ ಬೇಡಿಕೆಯನ್ನು, ಜನರ ಅನುಭೋಗದ ಮಟ್ಟವನ್ನು ಉತ್ತಮಪಡಿಸುವುದಿಲ್ಲವೋ ಅಲ್ಲಿಯವರೆಗೆ ಜಿಡಿಪಿಯ ಬೆಳವಣಿಗೆಯನ್ನು ಉನ್ನತಮಟ್ಟಕ್ಕೊಯ್ಯುವುದು ಸಾಧ್ಯವಿಲ್ಲ. ಜನರ ಕೈಯಲ್ಲಿ ಕೆಲಸವಿಲ್ಲ, ಬೊಕ್ಕಸದಲ್ಲಿ ಕಾಸಿಲ್ಲ, ಕೃಷಿಯು ಮಳೆಮಾರುತ ಕೊರತೆಯಿಂದ ಸಂಕಷ್ಟಕ್ಕೆ ಸಿಲುಕಿದೆ, ಅನೌಪಚಾರಿಕ ವಲಯದ ಸ್ಥಿತಿಗತಿಯು ಇನ್ನಿಲ್ಲದಂತೆ(ಅಮಾನ್ಯೀಕರಣ + ಜಿಎಸ್‌ಟಿಗಳಿಂದಾಗಿ) ಮೂರಾಬಟ್ಟೆಯಾಗಿದೆ. ಸರ್ಕಾರವು ತೆರಿಗೆ ಸಂಗ್ರಹದ ಬಗ್ಗೆ ಎಷ್ಟು ಕಾಳಜಿ ವಹಿಸುತ್ತಿದೆಯೋ(ಜಿಎಸ್‌ಟಿ) ಅದೇ ಕಾಳಜಿಯನ್ನು ಸಾಮಾಜಿಕ ರಚನೆಯ ಕೆಳಸ್ತರದಲ್ಲಿರುವವರ ಕೊಳ್ಳುವ ಶಕ್ತಿಯನ್ನು ಬಲಪಡಿಸುವುದರ ಬಗ್ಗೆ ತೋರುತ್ತಿಲ್ಲ. ಜನರ ಕೊಳ್ಳುವಶಕ್ತಿ ಮತ್ತು ಅದರಿಂದ ಹುಟ್ಟುವ ಸಾರ್ವಜನಿಕ ಬೇಡಿಕೆಗಳನ್ನು ದಷ್ಟಪುಷ್ಟ ಮಾಡದೆ ಬರೀ ಜಿಡಿಪಿ ಬಗ್ಗೆ ಮಾತನಾಡುವುದು ನಿರರ್ಥಕ ಚಟುವಟಿಕೆ ಮಾತ್ರವಾಗುತ್ತದೆ.

ಜಿಡಿಪಿಯಲ್ಲಿ ಏರಿಕೆಯಾಗಬೇಕು ಎಂಬುದರ ಭಿನ್ನಾಭಿಪ್ರಾಯ ಸಾಧ್ಯವಿಲ್ಲ. ಅದಿಲ್ಲದೆ ಜನರ ಬದುಕು ಉತ್ತಮವಾಗುವುದು ಸಾಧ್ಯವಿಲ್ಲ. ಆದರೆ ಅದೇ ಅಭಿವೃದ್ಧಿಯಲ್ಲ. ಅದು ಅಭಿವೃದ್ಧಿಯ ಸಾಧನ. ಮಹಿಳೆಯರನ್ನು ಸೇರಿಸಿಕೊಂಡು ಜನರ ಬದುಕು ಮತ್ತು ಅವರ ಜೀವನೋಪಾಯ ಅಭಿವೃದ್ಧಿಯ ಮೂಲ ದ್ರವ್ಯ. ನಮಗೆ ಟ್ರಿಲಿಯನ್ ಡಾಲರ್ ಆರ್ಥಿಕತೆ ಬೇಕು. ಆದರೆ ಇದರಲ್ಲಿ ಸಮಾಜದಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಪಾಲು ದೊರೆಯುತ್ತದೆ ಎಂಬುದೂ ಅಭಿವೃದ್ಧಿಯ ನಿರ್ಣಾಯಕ ಒರೆಗಲ್ಲಾಗಬೇಕು. ಇಂದು ಜಗತ್ತಿನಾದ್ಯಾಂತ ಇರುವ ಪ್ರಶ್ನೆ: ಜನರ ಅನುಭೋಗವನ್ನು ಉತ್ತಮಪಡಿಸುವುದು ಹೇಗೆ ಎನ್ನುವುದಾಗಿದೆ. ಇದರಿಂದ ತಾನೆ ಉದ್ದಿಮೆಗಳ ಸರಕು–ಸೇವೆಗಳಿಗೆ ಬೇಡಿಕೆ ಬರಬೇಕು! ಯಾವುದನ್ನು ಜಾನ್ ಮನಿಯಾರ್ಡ್ ಕೀನ್ಸ್ 1930ರ ದಶಕದ ಜಾಗತಿಕ ಬಿಕ್ಕಿನ ಸಂದರ್ಭದಲ್ಲಿ 'ಸಮಗ್ರ ಬೇಡಿಕೆ' ಬಗ್ಗೆ ಮಾತನಾಡಿದ್ದನೋ ಅದು ಇಂದು ನಮ್ಮ ಸಮಾಜದ ಸಂದರ್ಭದಲ್ಲಿ ನೆಲ ಕಚ್ಚಿದೆ. ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ 2019–2020ರ ಬಜೆಟ್ಟನ್ನು ಪರಿಶೀಲಿಸಿದಾಗ ಅದು 'ವರಮಾನ ವ್ಯಸನ'ಕ್ಕೆ ಒಳಗಾಗಿ ಜನರ ಬದುಕನ್ನು ಆನುಷಂಗಿಕ ಮಾಡಿಬಿಟ್ಟಿದೆ ಎಂದು ಹೇಳದೆ ವಿಧಿಯಿಲ್ಲ. ●



ರಾಜ್ಯಗಳ ಹಕ್ಕುಗಳ ಮೇಲೆ ಎಲ್ಲೆಡೆಗಳಿಂದಲೂ ಪ್ರಹಾರ



ಸಂಸತ್ತಿನ ಮೊದಲ ಅಧಿವೇಶನದಲ್ಲಿ ಮಂಡಿಸಿದುಲ್ಲ ಶಾಸನಗಳು ಮತ್ತು ಧೋರಣೆಗಳಲ್ಲಿ ಮೂಡಿ ಬುವ ಒಂದು ನಮೂನೆಯೆಂದರೆ ವಿವಿಧ ರಂಗಗಳಲ್ಲಿ ನಿರ್ಧಾರ ಮಾಡುವ ಮತ್ತು ಸಂಪನ್ಮೂಲಗಳನ್ನು ಕೊಡುವ ಅಧಿಕಾರವನ್ನು ಕ್ರಮೇಣ ಕೇಂದ್ರೀಕರಿಸುತ್ತಿರುವುದು, ಈ ಮೂಲಕ ಒಕ್ಕೂಟ ತತ್ವವನ್ನು ಅತಿಕ್ರಮಿಸುವುದು., ಇದು ಬಿಜೆಪಿ–ಆರೆಸ್ಸೆಸ್ ಕೂಟದ ಅಜೆಂಡಾವಾಗಿರುವ ಒಂದು ಸರ್ವಾಧಿಕಾರಶಾಹಿ ಮತ್ತು ಕೇಂದ್ರೀಕೃತ ಪ್ರಭುತ್ವ ರಚನೆಯನ್ನು ಬೆಳೆಸುವ ಧಾವಂತದ ಒಂದು ಭಾಗವಾಗಿದೆ.

ಪ್ರಕಾಶ ಕಾರಟ್

ಸಂಸತ್ತಿನ ಮೊದಲ ಅಧಿವೇಶನದಲ್ಲಿ ಮಂಡಿಸಿದ ಶಾಸನಗಳ ಮಹಾಪೂರದ ಒಂದು ಗಮನಾರ್ಹ ಸಂಗತಿಯೆಂದರೆ ಅವನ್ನು ಯಾವುದೇ ಶಾಸನಾತ್ಮಕ ಪರೀಕ್ಷಣೆಯಿಲ್ಲದೆ ತರಾತುರಿಯಲ್ಲಿ ಪಾಸು ಮಾಡಿಕೊಂಡ ರೀತಿ. ಮಸೂದೆಗಳ ಕೂಲಂಕಷ ಪರೀಕ್ಷಣೆ ಮತ್ತು ಪರಿಶೀಲನೆಗೆ ಅವನ್ನು ಸ್ಥಾಯೀ ಸಮಿತಿಗಳಿಗೆ ಅಥವ ಆಯ್ಕೆ ಸಮಿತಿಗಳಿಗೆ ಕಳಿಸಲಿಲ್ಲ. ಲೋಕಸಭೆಯಲ್ಲಿ ತನ್ನ ದೊಡ್ಡ ಬಹುಮತ ಮತ್ತು ರಾಜ್ಯಸಭೆಯಲ್ಲಿ ಕೈಚಳಕದಿಂದ ನಿರ್ಮಿಸಿಕೊಂಡ ಬಹುಮತವನ್ನು ಬಳಸಿಕೊಂಡ ಇವುಗಳಲ್ಲಿ ಯಾವ ಮಸೂದೆಯೂ ಸರಿಯಾದ ಪರೀಕ್ಷಣೆಗೆ ಒಳಗಾಗಲೇ ಇಲ್ಲ.

ಇದು ಈಗಷ್ಟೇ ಮುಕ್ತಾಯಗೊಂಡಿರುವ ಸಂಸತ್ ಅಧಿವೇಶನ ಅಂಗೀಕರಿಸಿದ ಮಸೂದೆಗಳ ಒಂದು ಸಾಮಾನ್ಯ ಎಳೆಯಾಗಿದ್ದರೆ, ಅದರಲ್ಲಿ ಇನ್ನೊಂದು ಸಾಮಾನ್ಯ ಲಕ್ಷಣವೂ ಕಂಡು ಬಂತು. ಅದು ಕೂಡ ಅಷ್ಟೇ ಆತಂಕಕಾರಿ. ವಿಭಿನ್ನ ವಿಷಯಗಳ ಮೇಲಿನ ಈ ಮಸೂದೆಗಳೆಲ್ಲದರಲ್ಲೂ ಇರುವ ಸಾಮಾನ್ಯ ಎಳೆಯೆಂದರೆ ರಾಜ್ಯಗಳ ಹಕ್ಕುಗಳಲ್ಲಿ ಅತಿಕ್ರಮಣ ಮತ್ತು ಒಕ್ಕೂಟ ನೀತಿಯನ್ನು ಶಿಥಿಲಗೊಳಿಸಿರುವುದು.

ಉದಾಹರಣೆಗೆ, ಕಾನೂನುಬಾಹಿರ ಚಟುವಟಿಕೆಗಳ(ತಡೆ) ತಿದ್ದುಪಡಿ ಮಸೂದೆ ರಾಷ್ಟ್ರೀಯ ತನಿಖಾ ಏಜೆನ್ಸಿ(ಎನ್‌ಐಎ)ಆಸ್ತಿಗಳನ್ನು ವಶಪಡಿಸಿಕೊಳ್ಳಲು ಮತ್ತು ಮುಟ್ಟುಗೋಲು ಹಾಕಿಕೊಳ್ಳಲು ರಾಜ್ಯದ ಪೋಲೀಸ್ ಮುಖ್ಯಸ್ಥರ ಪೂರ್ವಾನುಮತಿ ಪಡೆಯಬೇಕು ಎಂಬುದನ್ನು ತೆಗೆದು ಹಾಕಿದೆ.

ಮೋಟಾರು ವಾಹನಗಳ (ತಿದ್ದುಪಡಿ) ಕಾಯ್ದೆಯಲ್ಲಿ ರಸ್ತೆ ಸಾರಿಗೆ ವಾಹನಗಳ ಪರವಾನಿಗೆ ಮತ್ತು ನೋಂದಣಿಯನ್ನು ರಾಜ್ಯದ ಅಧಿಕಾರ ವ್ಯಾಪ್ತಿಯಿಂದ ತೆಗೆಯಲಾಗಿದೆ. ಇದಕ್ಕಾಗಿ ರಚಿಸಿರುವ ರಾಷ್ಟ್ರೀಯ ಪ್ರಾಧಿಕಾರ ಈ ಕೆಲಸವನ್ನು ಹೊರಗಿನ ಏಜೆನ್ಸಿಗಳಿಗೆ ಒಪ್ಪಿಸುತ್ತದೆ; ರಾಜ್ಯ ರಸ್ತೆ ಸಾರಿಗೆ ಕಾರ್ಪೊರೇಷನ್‌ಗಳ ಮೇಲೆ ಪ್ರತಿಕೂಲ ಪರಿಣಾಮ ಬೀಳುತ್ತದೆ. ಏಕೆಂದರೆ ರೂಟ್‌ಗಳನ್ನು ಹರಾಜು ಹಾಕಲಾಗುತ್ತದೆ ಮತ್ತು ಖಾಸಗಿ ಕಂಪನಿಗಳು ಹರಾಜು ಕೂಗಲು, ಅವನ್ನು ವಹಿಸಿಕೊಳ್ಳಲು ಅವಕಾಶ ಕೊಡಲಾಗುತ್ತದೆ.

ರಾಷ್ಟ್ರೀಯ ವೈದ್ಯಕೀಯ ಆಯೋಗ ಮಸೂದೆ ಪಾಸಾಗಿದ್ದು, ಆಯೋಗದಲ್ಲಿ ರಾಜ್ಯಗಳ ಪ್ರಾತಿನಿಧ್ಯವನ್ನು ತೀವ್ರವಾಗಿ ಕಡಿತಗೊಳಿಸಲಾಗಿದೆ. ಈ ಹಿಂದಿನ ಭಾರತದ ವೈದ್ಯಕೀಯ ಮಂಡಳಿಯಲ್ಲಿ ರಾಜ್ಯಗಳ ಪ್ರತಿನಿಧಿಗಳ ಬಹುಮತವಿತ್ತು, ಆದರೆ ಈ ಹೊಸ ಆಯೋಗದಲ್ಲಿ ಕೇವಲ ಆರು ರಾಜ್ಯ ಪ್ರತಿನಿಧಿಗಳಿರುತ್ತಾರೆ. ನಾಲ್ಕು ವರ್ಷಗಳಿಗೊಮ್ಮೆ ಇವರನ್ನು ಆವರ್ತಿಸಲಾಗುತ್ತದೆ. ಅಂದರೆ ಒಂದು ರಾಜ್ಯಕ್ಕೆ ಪ್ರತಿನಿಧಿತ್ವ 12 ವರ್ಷಗಳಿಗೊಮ್ಮೆ ಮಾತ್ರ ಸಿಗುತ್ತದೆ.

ಮಾಹಿತಿ ಹಕ್ಕು(ತಿದ್ದುಪಡಿ) ಮಸೂದೆಯಲ್ಲಿ ಕೇಂದ್ರ ಮಟ್ಟದಲ್ಲಿ ಮಾತ್ರವಲ್ಲ, ರಾಜ್ಯಗಳ ಮಟ್ಟದಲ್ಲೂ ಮುಖ್ಯ ಮತ್ತು ಇತರ ಮಾಹಿತಿ ಆಯುಕ್ತರುಗಳ ಸೇವಾವಧಿ, ಸಂಬಳಗಳು, ಭತ್ಯೆಗಳು ಮತ್ತಿತರ ಸೇವಾ ಷರತ್ತುಗಳನ್ನು ವಿಧಿಸುವ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ಕೊಡಲಾಗಿದೆ. ಇದು ರಾಜ್ಯಗಳ ಹಕ್ಕುಗಳ ಉಲ್ಲಂಘನೆಯಾಗಿದೆ.

ಬಳಕೆದಾರ ರಕ್ಷಣೆ ಮಸೂದೆ ಒಂದು ಕೇಂದ್ರೀಯ ಬಳಕೆದಾರ ರಕ್ಷಣೆ ಪ್ರಾಧಿಕಾರವನ್ನು ರಚಿಸುತ್ತದೆ. ಇದು ಬಳಕೆದಾರರ ಹಕ್ಕುಗಳು, ಜಾರಿ ಮತ್ತು ದಂಡಗಳನ್ನು ನಿರ್ಧರಿಸುವ ಸರ್ವೋಚ್ಚ ಸಂಸ್ಥೆಯಾಗುತ್ತದೆ. ಈ ಶಾಸನದಿಂದಾಗಿ ರಾಜ್ಯಗಳಿಗೆ ಯಾವ ಹಕ್ಕುಗಳೂ ಇರುವುದಿಲ್ಲ, ಆದರೆ ರಾಜ್ಯ ಬಳಕೆದಾರ ರಕ್ಷಣಾ ಸಂಸ್ಥೆಗಳ ವೆಚ್ಚಗಳನ್ನು ಭರಿಸುವ ಹಣಕಾಸು ಹೊರೆಯನ್ನು ಹಾಕಲಾಗಿದೆ.

ಸಂವಿಧಾನದ ಸಮವರ್ತಿ ಪಟ್ಟಿಯಲ್ಲಿ ಇರುವ ಎಲ್ಲ ವಿಷಯಗಳಲ್ಲೂ ಕೇಂದ್ರೀಯ ನಿಯಂತ್ರಣ ಸಂಸ್ಥೆಗಳನ್ನು, ಅಥವ ಪ್ರಾಧಿಕಾರಗಳನ್ನು ರಚಿಸಿ ರಾಜ್ಯಗಳ ಹಕ್ಕುಗಳನ್ನು ಮೊಟಕುಗೊಳಿಸಲಾಗಿದೆ, ಇಲ್ಲವೇ ನಿರಾಕರಿಸಲಾಗಿದೆ. ಆ ಸಂಸ್ಥೆಗಳು, ಪ್ರಾಧಿಕಾರಗಳು ಹೇಳಿದಂತೆ ರಾಜ್ಯಗಳ ಸಂಬಂಧಪಟ್ಟ ಸಂಸ್ಥೆಗಳು ಕೇಳಬೇಕು.

ಈ ಕೇಂದ್ರೀಕರಣದ ಪ್ರವೃತ್ತಿಯನ್ನು ಕರಡು ರಾಷ್ಟ್ರೀಯ ಶಿಕ್ಷಣ ಧೋರಣೆಯಲ್ಲೂ ಕಾಣಬಹುದು. ಒಂದು ಕೇಂದ್ರೀಕೃತ 'ರಾಷ್ಟ್ರೀಯ ಶಿಕ್ಷಾ ಆಯೋಗ್' ನೇಮಿಸಲಾಗುವುದು, ಪ್ರಧಾನ ಮಂತ್ರಿಗಳು ಅದರ ಅಧ್ಯಕ್ಷರಾಗಿರುತ್ತಾರೆ ಎಂದು ಅದು ಹೇಳುತ್ತದೆ. ಇದು ಶಿಕ್ಷಣದ ವಿವಿಧ ಮಟ್ಟಗಳ ಬಗ್ಗೆ ನಿರ್ಧರಿಸುವ ಸರ್ವೋಚ್ಚ ಸಂಸ್ಥೆಯಾಗಿರುತ್ತದೆ. ಪ್ರಧಾನ ಮಂತ್ರಿಗಳು ಮುಖ್ಯಸ್ಥರಾಗಿರುವ ಇಂತಹ ಒಂದು ಕೇಂದ್ರೀಕೃತ ಸಂಸ್ಥೆಯಲ್ಲಿ ಅಧಿಕಾರದ ಕೇಂದ್ರೀಕರಣ ಶಿಕ್ಷಣ ರಂಗದಲ್ಲಿ ರಾಜ್ಯಗಳ ಹಕ್ಕುಗಳನ್ನು ಅತಿಕ್ರಮಿಸುತ್ತದೆ.

ಈ ಎಲ್ಲ ಶಾಸನಗಳು ಮತ್ತು ಧೋರಣೆಗಳಲ್ಲಿ ಮೂಡಿ ಬರುವ ಒಂದು ನಮೂನೆಯೆಂದರೆ ವಿವಿಧ ರಂಗಗಳಲ್ಲಿ ನಿರ್ಧಾರ ಮಾಡುವ ಮತ್ತು ಸಂಪನ್ಮೂಲಗಳನ್ನು ಕೊಡುವ ಅಧಿಕಾರವನ್ನು ಕ್ರಮೇಣ ಕೇಂದ್ರೀಕರಿಸುತ್ತಿರುವುದು, ಈ ಮೂಲಕ ಒಕ್ಕೂಟ ತತ್ವವನ್ನು ಅತಿಕ್ರಮಿಸುವುದು., ಇದು ಬಿಜೆಪಿ–ಆರೆಸ್ಸೆಸ್ ಕೂಟದ ಅಜೆಂಡಾವಾಗಿರುವ ಒಂದು ಸರ್ವಾಧಿಕಾರಶಾಹಿ ಮತ್ತು ಕೇಂದ್ರೀಕೃತ ಪ್ರಭುತ್ವ ರಚನೆಯನ್ನು ಬೆಳೆಸುವ ಧಾವಂತದ ಒಂದು ಭಾಗವಾಗಿದೆ.

ಬಿಜೆಡಿ, ಟಿಆರ್‌ಎಸ್ ಮತ್ತು ವೈಎಸ್‌ಆರ್‌ಸಿಪಿ ನಂತಹ ಹಲವು ಪ್ರಾದೇಶಿಕ ಪಕ್ಷಗಳು ಸಂಸತ್ತಿನಲ್ಲಿ ವಿವಿಧ ಮಸೂದೆಗಳನ್ನು ಪಾಸು ಮಾಡಿಸಿಕೊಳ್ಳುವ ಈ ಕೇಂದ್ರೀಕರಣದ ಧಾವಂತವನ್ನು ಬೆಂಬಲಿಸಲು ಸಾಲುಗಟ್ಟಿ ನಿಂತಿರುವುದು ಒಂದು ವೈಚಿತ್ರ್ಯವಾಗಿ ಕಾಣ ಬರುತ್ತಿದೆ. ಹೀಗೆ ಮಾಡುವ ಮೂಲಕ ಅವು ತಮ್ಮ ರಾಜ್ಯ–ಆಧಾರಿತ ಕಾರ್ಯಕ್ರಮಗಳ ಬುಡಕ್ಕೇ ಮತ್ತು ರಾಜ್ಯಗಳ ಹಕ್ಕುಗಳ ಆಧಾರ ನೆಲೆಗೇ ಏಟು ಕೊಟ್ಟಿದ್ದಾರೆ.

ಮೋದಿ ಸರಕಾರ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕಳಚಿ ಹಾಕಿದ ರೀತಿ ರಾಜ್ಯಗಳ ಹಕ್ಕುಗಳಿಗೆ ಮತ್ತು ಒಕ್ಕೂಟ ತತ್ವಕ್ಕೆ ಒದಗಿರುವ ಅಪಾಯದ ಒಂದು ಗಂಭೀರ ಮುನ್ನೆಚ್ಚರಿಕೆ. ರಾಜ್ಯಗಳ ಹಕ್ಕುಗಳು ಮತ್ತು ಒಕ್ಕೂಟ ತತ್ವದ ಮೇಲೆ ಹೆಚ್ಚುತ್ತಿರುವ ಆಕ್ರಮಣವನ್ನು ಒಟ್ಟಾಗಿ ಪ್ರತಿರೋಧಿಸಬೇಕಾಗಿದೆ.

ಒಂದು ರಾಷ್ಟ್ರ
ಒಂದು ಚುನಾವಣೆ
ಒಬ್ಬ ಅಭ್ಯರ್ಥಿ



ವ್ಯಂಗ್ಯಚಿತ್ರ ಕೃಪೆ: ದಿ ಹಿಂದು

ಸೀತಾರಾಮ್ ಯೆಚುರಿ ಮತ್ತು ಡಿ.ರಾಜ ಸ್ಥಾನಬದ್ಧತೆ: ಬಿಜೆಪಿ ಸರಕಾರದ ಸರ್ವಾಧಿಕಾರಶಾಹಿಯನ್ನು ಪ್ರತಿಭಟಿಸಲು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ



ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ ಅವರನ್ನು ಆಗಸ್ಟ್ 9ರಂದು ಶ್ರೀನಗರ ವಿಮಾನ ನಿಲ್ದಾಣದಲ್ಲಿ ಸ್ಥಾನಬದ್ಧತೆಯಲ್ಲಿಡಲಾಗಿದೆ. ಇವರು ಅನಾರೋಗ್ಯದಿಂದಿರುವ ಜಮ್ಮು ಮತ್ತು ಕಾಶ್ಮೀರದ ಹಿರಿಯ ಸಿಪಿಐ(ಎಂ) ಮುಖಂಡ ಮತ್ತು ಶಾಸಕ ಮಹಮ್ಮದ್ ತರಿಗಾಮಿಯವರನ್ನು ನೋಡಲು ಮತ್ತು ರಾಜ್ಯದ ಜನಗಳನ್ನು ಭೇಟಿ ಮಾಡಲು ದಿಲ್ಲಿಯಿಂದ ಹೊರಟು ಶ್ರೀನಗರ ತಲುಪಿದ್ದರು. ಅಲ್ಲಿ ಅವರನ್ನು ವಿಮಾನ ನಿಲ್ದಾಣದಿಂದ ಹೊರಗೆ ಹೋಗದಂತೆ ಸ್ಥಾನಬದ್ದತೆಯಲ್ಲಿ ಇಡಲಾಯಿತು. ಇದು ಬಿಜೆಪಿ ಸರಕಾರದ ಸರ್ವಾಧಿಕಾರಶಾಹಿ ಮುಖವನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಬಿಜೆಪಿ ಸರಕಾರದ ಈ ಪ್ರಜಾಪ್ರಭುತ್ವ–ವಿರೋಧಿ ಕ್ರಮವನ್ನು ಪ್ರತಿಭಟಿಸಬೇಕು ಎಂದು ಅದು ಜನತೆಗೆ ಕರೆ ನೀಡಿದೆ.


ಯೆಚುರಿಯವರು ಮತ್ತು ಡಿ. ರಾಜ ಇಬ್ಬರೂ ಈ ಭೇಟಿಯ ಬಗ್ಗೆ ಹಿಂದಿನ ದಿನವೇ ರಾಜ್ಯಪಾಲರಿಗೆ ಪತ್ರ ಬರೆದು ತಿಳಿಸಿದ್ದರು ಎಂಬುದನ್ನು ಇಲ್ಲಿ ಗಮನಿಸಬಹುದು. ಯೆಚುರಿಯವರು ಬರೆದ ಪತ್ರದ ಒಕ್ಕಣಿಕೆ ಹೀಗಿದೆ:

"ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಜಮ್ಮು ಮತ್ತು ಕಾಶ್ಮೀರದಲ್ಲಿ ಒಂದು ಸಕ್ರಿಯ ಘಟಕವನ್ನು ಹೊಂದಿದೆ. ಈಗ ವಿಸರ್ಜನೆಗೊಂಡಿರುವ ರಾಜ್ಯ ವಿಧಾನಸಭೆಯಲ್ಲಿ ಒಬ್ಬ ಸದಸ್ಯರನ್ನು, ಮಹಮ್ಮದ್ ಯುಸುಫ್ ತರಿಗಾಮಿ, ಹೊಂದಿದೆ.

ಒಂದು ರಾಷ್ಟ್ರೀಯ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಮಹಮ್ಮದ್ ಯೂಸುಫ್ ತರಿಗಾಮಿಯವರನ್ನು (ಅವರು ಅನಾರೋಗ್ಯದಿಂದಿದ್ದಾರೆ ಎಂದು ನನಗೆ ಮಾಹಿತಿ ಬಂದಿದೆ) ಮತ್ತು ನನ್ನ ಪಕ್ಷದ ಇತರ ಸದಸ್ಯರನ್ನು ಭೇಟಿ ಮಾಡ ಬಯಸುತ್ತೇನೆ. ಆಗಸ್ಟ್ 9ರ ಬೆಳಿಗ್ಯೆ ಅವರನ್ನು ಭೇಟಿಯಾಗಲು ಶ್ರೀನಗರ ತಲುಪಬೇಕೆಂದಿದ್ದೇನೆ.



ನನ್ನ ಪಕ್ಷದ ಒಬ್ಬ ಮುಖಂಡನಾಗಿ ನನ್ನ ಹೊಣೆಯನ್ನು ನಿಭಾಯಿಸುವಲ್ಲಿ ಆಡಳಿತ ಯಾವ ತೊಡರುಗಳನ್ನೂ ನಿರ್ಮಿಸುವುದಿಲ್ಲ ಎಂದು ಆಶಿಸುತ್ತೇನೆ"





ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಮೇಲೆ ಸರ್ವಾಧಿಕಾರಶಾಹಿ ಪ್ರಹಾರ

ಸಂವಿಧಾನದ ವಿರುದ್ಧ ಮೋದಿ ಸರಕಾರ ಮಾಡಿದ ಈ ಕ್ಷಿಪ್ರಕ್ರಾಂತಿಯ ರೀತಿಯು ಈಗ ದೇಶದಲ್ಲಿ ಪ್ರತಿಷ್ಠಾಪನೆಯಾಗಿರುವ ಸರ್ವಾಧಿಕಾರಶಾಹಿ ಆಳ್ವಿಕೆಯ ಸಂಕೇತವಾಗಿದೆ. 370ನೇ ವಿಧಿಯನ್ನು ಒಂದು ರಾಷ್ಟ್ರಪತಿ ಆದೇಶದ ಮೂಲಕ ಸಂವಿಧಾನದ ಇನ್ನೊಂದು ವಿಧಿಯನ್ನು ಅಂದರೆ 367ನೇ ವಿಧಿಯನ್ನು ಬದಲಾಯಿಸಲು ಬಳಸಲಾಯಿತು. ಅದನ್ನೇ 370ನೇ ವಿಧಿಯ ಸಾರವನ್ನೇ ಹಿಂಪಡೆಯಲು ಬಳಸಲಾಯಿತು. ಈ ಕುತಂತ್ರದ ಮೂಲಕವಾಗಿ, ರಾಷ್ಟ್ರಪತಿ ಶಾಸನದಲ್ಲಿರುವ ರಾಜ್ಯದ ಶಾಸಕಾಂಗದ ಅಧಿಕಾರವನ್ನು ಕಸಿದು, ಅದರ ಮೂಲಕ ಆ ರಾಜ್ಯವನ್ನೇ ಕಳಚಿ ಹಾಕಲಾಗಿದೆ.........

*** ಪ್ರಕಾಶ್ ಕಾರಟ್**

ಅನು: ವಿಶ್ವ

ಬಿಜೆಪಿ ಸರಕಾರದ ಈ ಕ್ರಮಕ್ಕೆ ವಿವಿಧ ಜನವಿಭಾಗಗಳಿಂದ ಬೆಂಬಲ ವ್ಯಕ್ತವಾಗಿದೆ. ಇದು, ಪ್ರತ್ಯೇಕತಾವಾದ ಮತ್ತು ಭಯೋತ್ಪಾದನೆಯನ್ನು ತೊಡೆದುಹಾಕಲು ನಿರ್ಣಾಯಕವಾದ ಮಾರ್ಗವೆಂದು ಕಾಣಲಾಗುತ್ತಿದೆ. ಮೋದಿ ಸರಕಾರ ಪ್ರಚುರಪಡಿಸುತ್ತಿರುವ ಈ ಅಧಿಕೃತ ಕಥನಕ್ಕೆ ಹಲವರು ಮಾರುಹೋಗಿದ್ದಾರೆ. ಆದರೆ ಇದು ಕಪಟ ತರ್ಕಗಳಿಂದ ಕೂಡಿದ ಕಥನ. ಇದರಿಂದ ಜಮ್ಮು ಮತ್ತು ಕಾಶ್ಮೀರ ಮತ್ತು ಇಡಿಯಾಗಿ ದೇಶದ ಮೇಲೆ ದೀರ್ಘಕಾಲದಲ್ಲಾಗುವ ಅಪಾಯಕಾರಿ ಪರಿಣಾಮ ಏನೆಂಬುದು ಜನರ ಮುಂದೆ ಬಂದಿಲ್ಲ.

ಮೋದಿ ಸರಕಾರ ಸಂವಿಧಾನ ಮತ್ತು ಒಕ್ಕೂಟ ತತ್ವದ ಮೇಲೆ ಒಂದು ಮಿಂಚಿನ ದಾಳಿ ನಡೆಸಿದೆ. ಮೋದಿ–ಷಾ ಜೋಡಿಯ ನೇತೃತ್ವದಲ್ಲಿ ಸಂವಿಧಾನದ 370ನೇ ವಿಧಿಯನ್ನು ಸಿಗಿದು ಹಾಕಲಾಗಿದೆ ಮತ್ತು ಅದರಿಂದ ಹೊಮ್ಮುವ ಉಪ ಅಂಶವಾದ 35ಎ ವಿಧಿಯನ್ನು ನಿರರ್ಥಕಗೊಳಿಸಲಾಗಿದೆ. ಅದಾದ ಮೇಲೆ ಮುಂದುವರೆದು ಅವರು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕಳಚಿ ಹಾಕಿ ಅದನ್ನು ಎರಡು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಮಾಡುವ ಮೂಲಕ ಜಮ್ಮು ಮತ್ತು ಕಾಶ್ಮೀರದ ಅಸ್ತಿತ್ವದ ಮೇಲೆಯೇ ಒಂದು ನಗ್ನ ದಾಳಿ ನಡೆಸಿದ್ದಾರೆ.

ಇವನ್ನೆಲ್ಲಾ ತುಂಬಾ ಕಳ್ಳಾಟಿಕೆಯಿಂದ ಹಾಗೂ ಜಮ್ಮು ಮತ್ತು ಕಾಶ್ಮೀರದ ಜನರನ್ನು ಬಂಧಿಯಾಗಿಸಿ ಮತ್ತು ಬಲವಂತದಿಂದ ಮಾಡಲಾಗಿದೆ. ರಾಷ್ಟ್ರಪತಿ ಆದೇಶ, 370ನೇ ವಿಧಿಯನ್ನು ತೆಗೆದುಹಾಕುವ ಮತ್ತು ಜಮ್ಮ ಮತ್ತು ಕಾಶ್ಮೀರ ರಾಜ್ಯವನ್ನು ಕಳಚಿ ಹಾಕುವ ಸಂಬಂಧದ ನಿರ್ಣಯಗಳು ಮತ್ತು ಮಸೂದೆಗಳನ್ನು ಕಪಟೋಪಾಯದಿಂದ ಮಂಡಿಸಿದ ರೀತಿ ಕೂಡ ಸಂವಿಧಾನದ ಮೇಲೆ ಮಾಡಿರುವ ಮೋಸವಾಗಿದೆ.

2019 ಆಗಸ್ಟ್ 6ರವರೆಗೆ ಭಾರತ ಒಕ್ಕೂಟದಲ್ಲಿ 29 ರಾಜ್ಯಗಳಿದ್ದವು. ಸಂಸತ್ತಿನ ಉಭಯ ಸದನಗಳಲ್ಲಿ ಜಮ್ಮು ಮತ್ತು ಕಾಶ್ಮೀರ ಪುನರ್ರಚನೆ ಮಸೂದೆ ಅಂಗೀಕಾರವಾಗುವ ಮೂಲಕ ಅವುಗಳ ಸಂಖ್ಯೆ 28ಕ್ಕೆ ಇಳಿದಿದೆ. ಇದು ಸ್ವತಂತ್ರ ಭಾರತದ ಇತಿಹಾಸದಲ್ಲಿ ಒಂದು ಅಭೂತಪೂರ್ವವಾದ ವಿದ್ಯಮಾನವಾಗಿದೆ. ಹಾಲಿ ರಾಜ್ಯಗಳ ಗಡಿಗಳನ್ನು ಬದಲಾಯಿಸುವ ಅಥವಾ ಹೊಸದನ್ನು ಸೃಷ್ಟಿಸುವುದಕ್ಕೆ ಸಂಬಂಧಿಸಿದ ಸಂವಿಧಾನದ ನಿಯಮವಾದ 3ನೇ ವಿಧೀಯನ್ನು ಬಿಜೆಪಿ ಸರಕಾರ ಉಲ್ಲಂಘಿಸಿದೆ. ರಾಜ್ಯದ ಶಾಸಕಾಂಗದ ಅಭಿಪ್ರಾಯಗಳನ್ನು ಪಡೆಯದೆ ಅದು ಹೀಗೆ ಮಾಡಿದೆ. ರಾಜ್ಯದ ಹಕ್ಕುಗಳು ಮತ್ತು ಒಕ್ಕೂಟ ತತ್ವದ ಮೇಲೆ ಈ ರೀತಿಯ ನಗ್ನ ದಾಳಿ ಹಿಂದೆ ಎಂದೂ ಆಗಿರಲಿಲ್ಲ.



ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 370ನೇ ವಿಧಿಯನ್ನು ಸಂವಿಧಾನ ಸಭೆಯು ಸಂವಿಧಾನದಲ್ಲಿ ಸೇರಿಸಿತ್ತು. ಭಾರತ ಒಕ್ಕೂಟದ ಇತರ ರಾಜ್ಯಗಳಿಗಿಂತ ಭಿನ್ನವಾದ ಸ್ಥಾನಮಾನವನ್ನು ಜಮ್ಮು ಮತ್ತು ಕಾಶ್ಮೀರಕ್ಕೆ ಈ ವಿಧಿ ಒದಗಿಸಿತ್ತು. ಅದರದ್ದೇ ಆದ ಸಂವಿಧಾನ ಹೊಂದಲು ಅವಕಾಶ ಕಲ್ಪಿಸಲಾಗಿತ್ತು. ಜಮ್ಮು ಮತ್ತು ಕಾಶ್ಮೀರಕ್ಕೆ ವ್ಯಾಪಕ ಸ್ವಾಯತ್ತತೆಯನ್ನು ನೀಡಲಾಗಿತ್ತು. ಹಾಗೂ ರಾಜ್ಯ ಶಾಸಕಾಂಗವು ರಚನೆಯಾದ ನಂತರದಲ್ಲಿ, ಸಂಸತ್ತು ರಚಿಸುವ ಕಾನೂನುಗಳ ಪೈಕಿ ಯಾವುದು ರಾಜ್ಯದಲ್ಲಿ ಅನ್ವಯವಾಗಬಹುದು ಎನ್ನುವುದನ್ನು ನಿರ್ಧರಿಸಬಹುದಿತ್ತು.

370ನೇ ವಿಧಿಯ ಹಿನ್ನೆಲೆ

ಸ್ವಾತಂತ್ರ್ಯಪೂರ್ವದ ಜಮ್ಮು ಮತ್ತು ಕಾಶ್ಮೀರ ರಾಜ ಸಂಸ್ಥಾನ ಭಾರತದ ಭಾಗವಾದ ಪ್ರಸಕ್ತ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಮತ್ತು ಕಾಶ್ಮೀರದ ಪಾಕಿಸ್ತಾನ ಆಕ್ರಮಿತ ಭಾಗವನ್ನು ಒಳಗೊಂಡಿತ್ತು. ಅಂದಿನ ಮಹಾರಾಜ ಹರಿಸಿಂಗ್‌ಗೆ ಭಾರತಕ್ಕೆ ಸೇರುವ ಮನಸ್ಸು ಇರಲಿಲ್ಲ. ಜಮ್ಮು ಮತ್ತು ಕಾಶ್ಮೀರವನ್ನು ಒಂದು ಪ್ರತ್ಯೇಕ ಪ್ರಭುತ್ವವನ್ನಾಗಿರಿಸುವುದು ಅವರ ಬಯಕೆಯಾಗಿತ್ತು. ಆದ್ದರಿಂದ 1947 ಆಗಸ್ಟ್ 15ರ ವೇಳೆಗೆ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿರಲಿಲ್ಲ. ಷೇಕ್ ಅಬ್ದುಲ್ಲಾ ನೇತೃತ್ವದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷ ಪಾಳೇಗಾರಿ ಆಳ್ವಿಕೆಯ ವಿರುದ್ಧ ಹೋರಾಡುತ್ತಿತ್ತು. ಇದು ರಾಜರ ಸಂಸ್ಥಾನಗಳಲ್ಲಿ ಪಾಳೇಗಾರಿ–ವಿರೋಧಿ, ಸಾಮ್ರಾಜ್ಯಶಾಹಿ–ವಿರೋಧಿ ಚಳವಳಿಯ ಭಾಗವಾಗಿತ್ತು.

ಮುಖ್ಯವಾಗಿ ವಾಯುವ್ಯ ಪ್ರಾಂತ್ಯದ ಪಠಾಣರನ್ನೊಳಗೊಂಡ ಪಾಕಿಸ್ತಾನದ ದಾಳಿಕೋರರು ಆಕ್ರಮಣ ನಡೆಸಿ ಶ್ರೀನಗರದ ಹೊರವಲಯವನ್ನು ತಲುಪಿದಾಗಷ್ಟೆ ಭಾರತಕ್ಕೆ ಸೇರ್ಪಡೆಯ ಒಡಂಬಡಿಕೆಗೆ ಸಹಿಹಾಕಲು ಮಹಾರಾಜ ಹರಿಸಿಂಗ್ ಒಪ್ಪಿದರು. 1947 ಅಕ್ಟೋಬರ್ 26ರಂದು ಅದಕ್ಕೆ ಸಹಿ ಹಾಕಲಾಯಿತು. ನ್ಯಾಷನಲ್ ಕಾನ್ಫರೆನ್ಸ್ ಜೊತೆಗಿದ್ದ ಕಾಶ್ಮೀರ ಕಣಿವೆಯ ಜನರು ಆಕ್ರಮಣಕಾರರ ವಿರುದ್ಧ ಹೋರಾಡಿದರು. ಭಾರತೀಯ ಸೇನೆಯನ್ನು ವಿಮಾನದ ಮೂಲಕ ಶ್ರೀನಗರಕ್ಕೆ ರವಾನಿಸಲಾಯಿತು. ಈ ಸೈನ್ಯ ಆಕ್ರಮಣಕಾರರನ್ನು ಹಿಮ್ಮೆಟ್ಟಿಸಿತು.


ಈ ಸನ್ನಿವೇಶದಲ್ಲಿ ಸಂವಿಧಾನವನ್ನು ರಚಿಸುತ್ತಿದ್ದ ಸಂವಿಧಾನ ರಚನಾ ಸಭೆಯು ಅದರಲ್ಲಿ 370ನೇ ವಿಧಿಯನ್ನು ಸೇರಿಸಿತು. ಭಾರತೀಯ ಪ್ರಭುತ್ವ ಮತ್ತು ಕಾಶ್ಮೀರಿ ಜನರ ಪ್ರತಿನಿಧಿಗಳ ನಡುವೆ ಆದ ಒಪ್ಪಂದವನ್ನು 370ನೇ ವಿಧಿ ಪ್ರತಿನಿಧಿಸುತ್ತದೆ. ತಮ್ಮ ಅಸ್ಮಿತೆ ಮತ್ತು ಕಶ್ಮೀರಿಯತ್ ಎಂದು ಹೇಳಲಾಗುವ ಅವರದೇ ಆದ ಜೀವನಶೈಲಿಯನ್ನು ಉಳಿಸಿಕೊಳ್ಳುವ ಕಾಶ್ಮೀರಿ ಜನತೆಯ ಆಶೋತ್ತರಗಳನ್ನು ಅದು ಒಳಗೊಂಡಿತ್ತು.

ದೇಶವು ಧರ್ಮಗಳ ಆಧಾರದಲ್ಲಿ ಒಡೆಯುತ್ತಿದ್ದಾಗ ಹಾಗೂ ದ್ವಿರಾಷ್ಟ್ರ ಸಿದ್ಧಾಂತ ಅಸ್ತಿತ್ವದಲ್ಲಿದ್ದಾಗ, ಮುಸ್ಲಿಂ ಬಹುಸಂಖ್ಯಾಕರಾಗಿರುವ ರಾಜ್ಯವೊಂದರ ಜನರು ಜಾತ್ಯತೀತವಾದ ಭಾರತೀಯ ಪ್ರಭುತ್ವಕ್ಕೆ ಬೆಂಬಲ ನೀಡಿದ್ದು ಭಾರತದ ಪ್ರಭುತ್ವಕ್ಕೆ ಮಹತ್ವದ ವಿಚಾರವಾಗಿತ್ತು. ದೇಶ ವಿಭಜನೆಯ ಸಂದರ್ಭ ವಾಯುವ್ಯ ಭಾರತವನ್ನು ದೊಂಬಿಗಳ ಕೆನ್ನಾಲಗೆ ಆವರಿಸಿಕೊಂಡಿದ್ದಾಗ ಕಾಶ್ಮೀರ ಕಣಿವೆಯು ಶಾಂತಿ ಮತ್ತು ಕೋಮು ಸೌಹಾರ್ದದ ಸ್ವರ್ಗವಾಗಿತ್ತು.

370ನೇ ವಿಧಿಯ ನಿಧಾನ ನಾಶ

ಈ ಬದ್ಧತೆಯಿಂದ ಹಿಂದೆ ಸರಿದಿದ್ದೇ ಕಾಶ್ಮೀರ ಸಮಸ್ಯೆಗೆ ಮೂಲ ಕಾರಣವಾಗಿದೆ. 1953ರ ನಂತರ ಸತತವಾಗಿ ಕೇಂದ್ರದಲ್ಲಿನ ಕಾಂಗ್ರೆಸ್ ಸರಕಾರಗಳು 370ನೇ ವಿಧಿಯನ್ವಯ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ಸ್ವಾಯತ್ತತೆಯನ್ನು ದುರ್ಬಲಗೊಳಿಸಲು ಕ್ರಮಗಳನ್ನು ಕೈಗೊಳ್ಳತೊಡಗಿದವು. 1960, 70 ಮತ್ತು 80ರ ದಶಕದಾದ್ಯಂತ ಕೇಂದ್ರೀಕರಣ ಮತ್ತು ಸ್ವಾಯತ್ತತೆಯನ್ನು ನಿರಾಕರಿಸುವ ಪ್ರಕ್ರಿಯೆ ಮುಂದುವರಿಯಿತು. ರಾಜ್ಯಕ್ಕೆ ನೀಡಲಾಗಿದ್ದ ಸ್ವಾಯತ್ತತೆಯ ಬಹುತೇಕ ಅಂಶಗಳನ್ನು ತೆಗೆದು ಹಾಕುವ ಉದ್ದೇಶದಿಂದ 370ನೇ ವಿಧಿಯನ್ನು ಬುಡಮೇಲು ಮಾಡಲಾಯಿತು. 1954ರ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶದ ನಂತರದಲ್ಲಿ 2010ರವರೆಗೆ ಇಂಥ 42 ಆದೇಶಗಳು ಜಾರಿಯಾಗಿವೆ. ಅವುಗಳು 370ನೇ ವಿಧಿಯನ್ನು ಅಳವಡಿಸುವ ವೇಳೆ ನಮೂದಿತವಾಗದ ಕಾನೂನುಗಳ ವಿಚಾರದಲ್ಲಿ ಕೇಂದ್ರದ ಮಧ್ಯಪ್ರವೇಶದ ಅವಕಾಶವನ್ನು ಹೆಚ್ಚಿಸಿದವು.

ಕಾನೂನು ತಜ್ಞ ಎ.ಜಿ. ನೂರಾನಿ ಅವರು ಸಮರ್ಥವಾಗಿ ದಾಖಲೀಕರಿಸಿರುವಂತೆ, ಕೇಂದ್ರೀಕರಣ ಪ್ರಕ್ರಿಯೆ ಮೂಲಕ 370ನೇ ವಿಧಿಯ ಮೂಲ ಆಶಯವನ್ನು ದುರ್ಬಲಗೊಳಿಸಲಾಯಿತು. ಕೇಂದ್ರ



ವ್ಯಂಗ್ಯಚಿತ್ರ: ಇಷ್ತಿಯಾಕ್

ಪಟ್ಟಿಯಲ್ಲಿರುವ 97 ವಿಷಯಗಳ ಪೈಕಿ 94 ವಿಷಯಗಳು ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯವಾಗುತ್ತವೆ.

ಪರಕೀಯಭಾವ ಮತ್ತು ಉಗ್ರವಾದದ ಉದಯ

ರಾಜ್ಯದಲ್ಲಿ ಸ್ವಾಯತ್ತತೆಯ ಕುಸಿತದೊಂದಿಗೆ ಪ್ರಜಾಪ್ರಭುತ್ವದ ನಿರಾಕರಣೆ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ದಮನವು ನಡೆಯತೊಡಗಿತು. ಚುನಾಯಿತ ಸರಕಾರಗಳನ್ನು ಉರುಳಿಸಲಾಯಿತು. ಕೇಂದ್ರ ಸರಕಾರದ ಆಶ್ರಯದಲ್ಲಿ ಪದೇ ಪದೇ ಚುನಾವಣಾ ಅಕ್ರಮಗಳನ್ನು ನಡೆಸಲಾಯಿತು. 1987ರ ಚುನಾವಣೆ ಇದಕ್ಕೊಂದು ಉದಾಹರಣೆ. ಈ ಹಿನ್ನೆಲೆಯಲ್ಲಿ ಪ್ರರಕೀಯ ಭಾವ ಮೊಳೆತು ಅದು ಉಗ್ರವಾದ ಮತ್ತು 'ಆಜಾದಿ' ಘೋಷಣೆಯೊಂದಿಗೆ ಸಶಸ್ತ್ರ ಹೋರಾಟದ ಸೂಚನೆಗಳು ಕಂಡುಬಂದವು. ಕಾಲಾಂತರದಲ್ಲಿ ಹಿಜ್ಬುಲ್ ಮುಜಾಹಿದಿನ್ ಮತ್ತು ನಂತರದ ವರ್ಷಗಳಲ್ಲಿ ಪಾಕಿಸ್ತಾನ ನೆಲೆಯ ಉಗ್ರಪಂಥೀಯ ಜೈಷ್ ಎ ಮೊಹಮದ್ ಮತ್ತು ಲಷ್ಕರ್ ಎ ತೊಯ್ಬಾದಂಥ ಭಯೋತ್ಪಾದಕ

ಪುಟ 12 ನೋಡಿ

‘ಬಂಡವಾಳ’ ಬಿಡುಗಡೆಯ ಸಂಭ್ರಮದ ನಡುವೆ ಭಾರತದಲ್ಲಿ ಎಡಪಂಥದ ಮರುಶೋಧನೆ

ವೇದರಾಜ್ ಎನ್.ಕೆ.

ಈಗ ಎಡಪಂಥ ಹಿಂದೆಂದೂ ಕಾಣದ ಮಟ್ಟಿನಲ್ಲಿ ಅಂಚಿಗೆ ತಳ್ಳಲ್ಪಟ್ಟಿದೆ. ಹೀಗಿರುವಾಗ ನಾವೇಕೆ ‘ದಾಸ್ ಕ್ಯಾಪಿಟಲ್’ನ ಕನ್ನಡ ಅನುವಾದದ ಬಗ್ಗೆ ಸಂಭ್ರಮಿಸುತ್ತಿದ್ದೇವೆ. ಜಗತ್ತಿನ ಭವಿಷ್ಯದ ಕುರಿತಂತೆ ಮಾರ್ಕ್ಸ್‌ವಾದದ ಪ್ರಸ್ತುತತೆ ಕೊನೆಗೊಂಡಿದೆಯೇ, ಅಥವ ಇದರ ಹಿಂದೆ ಕೇವಲ ಸವಿನೆನಪಿಗಿಂತ ಮಿಗಿಲಾದ್ದು ಬೇರೇನಾದರೂ ಇದೆಯೇ? ಅದರಿಂದಾಗಿಯೇ ನಾವು ಈ ಅನುವಾದದ ಬಗ್ಗೆ ಸಂಭ್ರಮ ಪಡುತ್ತಿದ್ದೇವೆಯೇ ಎಂದ ಪ್ರಶ್ನೆಯೊಂದಿಗೆ ಪ್ರೊ. ಪ್ರಭಾತ್ ಪಟ್ನಾಯಕ್ ತನ್ನ ದಿಕ್ಸೂಚಿ ಭಾಷಣವನ್ನು ಆರಂಭಿಸಿದರು. ಮಾರ್ಕ್ಸ್‌ವಾದ ಕೊಡುವ ಬಂಡವಾಳಶಾಹಿಯ ವಿಶ್ಲೇಷಣೆ ಇತರೆಲ್ಲ ವಿಶ್ಲೇಷಣೆಗಳಿಗಿಂತ ಭಿನ್ನವಾದದ್ದು, ಶಕ್ತಿಶಾಲಿಯಾದದ್ದು ಮತ್ತು ಸತ್ಯವಾದದ್ದು. ಆದ್ದರಿಂದ ಬಂಡವಾಳಶಾಹಿಯ ಅಸ್ತಿತ್ವ ಇರುವ ವರೆಗೆ ಅದರ ಮಾರ್ಕ್ಸ್‌ವಾದೀ ವಿಶ್ಲೇಷಣೆ ಪ್ರಸ್ತುತವಾಗಿಯೇ ಇರುತ್ತದೆ ಎಂದ ಅವರು ತನ್ನ ಉಪನ್ಯಾಸದಲ್ಲಿ ಇದನ್ನು ತುಸು ವಿಸ್ತಾರವಾಗಿಯೇ ಪರಿಶೀಲಿಸಿದರು. ಅದರ ಒಂದು ಸಂಕ್ಷಿಪ್ತ ಚಿತ್ರವನ್ನು ಈ ಕೆಳಗಿನಂತೆ ಕೊಡಬಹುದು.

ಎಡಪಂಥೀಯರು ಮಾರ್ಕ್ಸ್‌ರಂತೆ ವ್ಯವಸ್ಥೆಯ ಪರಿಧಿಯ ಹೊರಗೆ ತಮ್ಮ ನಿಲುವನ್ನು ತಗೊಳ್ಳಬೇಕು – ಪ್ರೊ.ಪ್ರಭಾತ್ ಪಟ್ನಾಯಕ್

ಮಾರ್ಕ್ಸ್‌ರವರ ವಿಶ್ಲೇಷಣೆಯನ್ನು ಅದ್ವಿತೀಯಗೊಳಿಸಿರುವ ಅಂಶವೇನು? ಇದರಲ್ಲಿ ಎರಡು ಆಯಾಮಗಳಿವೆ. ಮೊದಲನೆಯದ್ದು ಸುಪರಿಚಿತವಾದದ್ದು. ಇದು ಬಂಡವಾಳಶಾಹೀ ಉತ್ಪಾದನಾ ಪದ್ಧತಿಯಲ್ಲಿ ಮಿಗುತಾಯ ಮೌಲ್ಯದ ಮೂಲದ ಶೋಧನೆ ಕುರಿತಾದ್ದು. ಈ ಪದ್ಧತಿಯಲ್ಲಿ ಮಾರುಕಟ್ಟೆಯಲ್ಲಿ ಒಂದು ರೀತಿಯ ಸಮಾನಾತ್ಮಕತೆ ಕಾಣುತ್ತಿದ್ದರೂ, ವಾಸ್ತವವಾಗಿ ಮಿಗುತಾಯ ಮೌಲ್ಯದ ನಿರ್ಮಾಣ, ಮತ್ತು ಅದನ್ನು ಕಿತ್ತುಕೊಳ್ಳುವ ಕ್ರಿಯೆ ನಡೆಯುವುದು ಉತ್ಪಾದನಾ ವಲಯದಲ್ಲಿ. ಅದು ಹೇಗೆ ನಡೆಯುತ್ತದೆ ಎಂದು ನೋಡುವಾಗ ಎದ್ದ ಹಲವು ಪ್ರಶ್ನೆಗಳನ್ನು ಮಾರ್ಕ್ಸ್ ವಿಶ್ಲೇಷಿಸುತ್ತಾರೆ. ಶ್ರಮಶಕ್ತಿಯೇ ಒಂದು ಸರಕು ಹೇಗಾಯ್ತು ಎಂಬುದನ್ನು ಪರಿಶೀಲಿಸುತ್ತ ಆದಿಮ ಬಂಡವಾಳ ಶೇಖರಣೆಯ ಬಗ್ಗೆ ಹೇಳುತ್ತಾರೆ. ಅದು ಸರಕಾಗಿಯೇ ಏಕೆ ಮುಂದುವರೆದಿದೆ, ಮಿಗುತಾಯ ಮೌಲ್ಯವನ್ನು ಕಿತ್ತುಕೊಳ್ಳುವ ಕ್ರಿಯೆ ಏಕೆ ಮುಂದುವರೆದಿದೆ ಎಂಬುದನ್ನು ವಿಶ್ಲೇಷಿಸುತ್ತ ‘ಮೀಸಲು ಶ್ರಮಿಕ ಸೇನೆ’ಯ ಸಿದ್ಧಾಂತವನ್ನು ಮುಂದಿಡುತ್ತಾರೆ. ಇಡೀ ಶ್ರಮ ಪ್ರಕ್ರಿಯೆ ಮೌಲ್ಯವನ್ನು ನಿರ್ಮಿಸುವ ಪ್ರಕ್ರಿಯೆಯಾಗಿಯೂ ಕಾಣಿಸುತ್ತದೆ, ಪ್ರತಿಯೊಂದು ಸರಕಿಗೆ ಉಪಯೋಗ ಮೌಲ್ಯವಿರುತ್ತದೆ, ಜತೆಗೇ ವಿನಿಮಯ ಮೌಲ್ಯವೂ ಇರುತ್ತದೆ, ಈ ಪ್ರಕ್ರಿಯೆಯಲ್ಲಿನ ಮಿಗುತಾಯವು ಮಿಗುತಾಯ ಮೌಲ್ಯವಾಗಿ ಕಾಣಿಸುತ್ತದೆ, ಉತ್ಪಾದನಾ ಸಾಧನ ಬಂಡವಾಳವಾಗಿ ಕಾಣಿಸುತ್ತದೆ. ಹೀಗೆ ಇಡೀ ಬಂಡವಾಳಶಾಹಿ ಉತ್ಪಾದವಾ ವಿಧಾನವನ್ನು ವಿಶ್ಲೇಷಿಸಲಾಗಿದೆ.



ಇದು ಸುಮಾರಾಗಿ ಎಲ್ಲರಿಗೂ ತಿಳಿದಿರುವ ಆಯಾಮವಾದರೆ, ಇನ್ನೊಂದು ಅಷ್ಟೊಂದು ಪರಿಚಿತವಲ್ಲದ, ಆದರೆ ಮೂಲಭೂತ ಆಯಾಮವಿದೆ. ಅದೆಂದರೆ ಬಂಡವಾಳಶಾಹಿ ಒಂದು ಸ್ವಯಂಸ್ಫೂರ್ತ ಪದ್ಧತಿ ಎಂದು ಮಾರ್ಕ್ಸ್ ಕಾಣುತ್ತಾರೆ. ಅಂದರೆ ಸ್ವಯಂಚಾಲನೆಯ ಪ್ರವೃತ್ತಿಗಳು ಅಡಕಗೊಂಡಿರುವ ಈ ವ್ಯವಸ್ಥೆಯಲ್ಲಿನ ಪ್ರತಿಯೊಬ್ಬ ಪಾತ್ರಧಾರಿಗಳು ಸ್ವಯಮಿಚ್ಛೆಯಿಂದ ವರ್ತಿಸುವಂತೆ ಕಾಣುತ್ತದೆ. ಬಂಡವಾಳಿಗನ ಹತೋಟಿಯಲ್ಲಿ ಉತ್ಪಾದನಾ ಕ್ರಿಯೆ ನಡೆಯುತ್ತದೆ, ಶ್ರಮಿಕ ಉತ್ಪಾದನಾ ಪ್ರಕ್ರಿಯೆಯೊಳಗೆ ಬಂದಾಗ ಅವನ ಅಧೀನ ಕೆಲಸ ಮಾಡುತ್ತಾನೆ ಎಂದು ಕಾಣಿಸುತ್ತದೆ. ಆದರೆ ನಿಜಸಂಗತಿಯೆಂದರೆ, ಎಲ್ಲರೂ ಇಡೀ ಪ್ರಕ್ರಿಯೆಯಲ್ಲಿ ತಮಗೆ ಕೊಟ್ಟ ಪಾತ್ರವನ್ನು ವಹಿಸುತ್ತಿದ್ದಾರಷ್ಟೇ, ಅಂತಹ ಬಲವಂತಕ್ಕೆ ವರು ಒಳಗಾಗಿರುತ್ತಾರೆ, ಏಕೆಂದರೆ ಆ ಪಾತ್ರವನ್ನು ವಹಿಸದಿದ್ದರೆ, ಅವರು ಆ ವ್ಯವಸ್ಥೆಯಿಂದ ಹೊರಗುಳಿಯುತ್ತಾರೆ. ಒಬ್ಬ ಬಂಡವಾಳಿಗ ಕೂಡ ಬಂಡವಾಳದ ಶೇಖರಣೆ ಮಾಡುವುದು ಅದನ್ನು ಆತ ಪ್ರೀತಿಸುತ್ತಾನೆ ಎಂಬ ಕಾರಣಕ್ಕಾಗಿ ಅಲ್ಲ, ಹಾಗೆ ಮಾಡುವ ಬಲವಂತಕ್ಕೆ ಆತ ಒಳಗಾಗಿರುವುದರಿಂದಾಗಿ. ಇಲ್ಲವಾದರೆ ಇನ್ನೊಬ್ಬ ಬಂಡವಾಳಿಗ ಅದನ್ನು ಮಾಡುತ್ತಾನೆ, ತಂತ್ರಜ್ಞಾನ ಬಳಸಿ ಇನ್ನೂ ದೊಡ್ಡ ಬಂಡವಾಳಿಗನಾಗಿ, ಇವನನ್ನು ಸ್ಪರ್ಧೆಯಿಂದ ಹೊರಹಾಕುತ್ತಾನೆ. ಒಟ್ಟಿನಲ್ಲಿ ಇದೊಂದು ನಿರಾಕಾರ ವ್ಯವಸ್ಥೆಯಾಗಿ ಕಾಣಿಸುತ್ತದೆ, ಬಂಡವಾಳಿಗ ಅದರ ಸಾಕಾರ ರೂಪ ಎಂದು ಮಾರ್ಕ್ಸ್ ಹೇಳುತ್ತಾರೆ. ಈ ವ್ಯವಸ್ಥೆಯಲ್ಲಿ ವಿವಿಧ ಸ್ಥಾನಗಳಲ್ಲಿರುವವರು ತಾವಾಗಿಯೇ ವರ್ತಿಸುವಂತೆ ಕಂಡರೂ, ವಾಸ್ತವವಾಗಿ ಅವರು ತಮಗೆ ವಹಿಸುವ ಪಾತ್ರವನ್ನು ನಿಭಾಯಿಸುತ್ತಿರುತ್ತಾರಷ್ಟೇ, ಇಲ್ಲವಾದರೆ ಆ ಸ್ಥಾನವನ್ನು ಕಳಕೊಳ್ಳುತ್ತಾರೆ. ಆದ್ದರಿಂದ ಇದೊಂದು ಸ್ವಯಂ ನಿರ್ವಹಣೆಯ, ಸ್ವಯಂಸ್ಫುರಣೆಯ ವ್ಯವಸ್ಥೆ ಎಂದಿದ್ದಾರೆ ಮಾರ್ಕ್ಸ್.

ಈ ವಿಶ್ಲೇಷಣೆಯ ಮೂಲಕ ಮಾರ್ಕ್ಸ್ ಹಲವು ತೀರ್ಮಾನಗಳಿಗೆ ಬರುತ್ತಾರೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ವೈಯಕ್ತಿಕ ಸ್ವಾತಂತ್ರ್ಯ ಸಮಾಜವಾದೀ ವ್ಯವಸ್ಥೆಯಲ್ಲಿ ಇಲ್ಲ, ಸಮಾಜವಾದಿ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವ ಸಾಧ್ಯವಿಲ್ಲ, ಅದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯ ಎಂಬುದು ವಾಸ್ತವವತೆಯನ್ನು ತಲೆಕೆಳಗಾಗಿ ತೋರಿಸುವ ವಾದಗಳು ಎಂಬುದು ಇಂತಹ ತೀರ್ಮಾನಗಳಲ್ಲಿ ಒಂದು. ಬಂಡವಾಳಶಾಹಿಯಲ್ಲಿ ಬಂಡವಳಿಗನೂ ಸೇರಿದಂತೆ ಪ್ರತಿಯೊಬ್ಬರೂ ತಮಗೆ ಕೊಟ್ಟ ಪಾತ್ರವನ್ನಷ್ಟೇ ವಹಿಸಬಲ್ಲರು ಎನ್ನುವಾಗ ವೈಯಕ್ತಿಕ ಸ್ವಾತಂತ್ರ್ಯ ಎಂಬುದು ಆ ಪಾತ್ರವನ್ನು ವಹಿಸುವಂತೆ ಬಲವಂತ ಮಾಡುವ ವ್ಯವಸ್ಥೆಯನ್ನು ದಾಟಿ ಹೋದಾಗ ಮಾತ್ರವೇ, ಅಂದರೆ ಸಮಾಜವಾದಿ ವ್ಯವಸ್ಥೆಯಲ್ಲಿ ಮಾತ್ರ ಸಾಧ್ಯ. ಅದೇ ರೀತಿಯಲ್ಲಿ ಆರ್ಥಿಕತೆಯೇ ಚಾಲನಾಶಕ್ತಿಯಾಗಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ರಾಜಕೀಯವನ್ನು ಅದೇ ನಿರ್ಧರಿಸುತ್ತದೆ. ಆದರೆ ಸಮಾಜವಾದದಲ್ಲಿ ಹಾಗಲ್ಲ, ರಾಜಕೀಯ, ಅಂದರೆ ಜನಗಳ ರಾಜಕೀಯ ಆಯ್ಕೆಗಳು ಆರ್ಥಿಕವನ್ನು ನಿರ್ಧರಿಸುತ್ತವೆ, ಪ್ರಜಾಪ್ರಭುತ್ವ ಎಂದರೆ ಇದೇ ತಾನೇ? ಆದ್ದರಿಂದ ವಾಸ್ತವವಾಗಿ ನಿಜವಾದ ಪ್ರಜಾಪ್ರಭುತ್ವ ಸಮಾಜವಾದಕ್ಕೆ

ಪುಟ 10 ಕ್ಕೆ

ನಮ್ಮ ಬಿಡುಗಡೆಗಾಗಿ ‘ಬಂಡವಾಳ’ ಓದಬೇಕು: ಬರಗೂರು

ವಸಂತರಾಜ್ ಎನ್.ಕೆ.



‘ದಾಸ್ ಕ್ಯಾಪಿಟಲ್’ನ ಸಂಪುಟ–1ರ ಕನ್ನಡ ಅನುವಾದ ‘ಬಂಡವಾಳ’ದ ಬಿಡುಗಡೆ ಒಂದು ಚಾರಿತ್ರಿಕ ಕ್ಷಣ. ಸಾವಿರಾರು ಪುಸ್ತಕಗಳನ್ನು ಬಿಡುಗಡೆ ಮಾಡಿದ್ದರೂ ‘ಬಂಡವಾಳ’ದ ಬಿಡುಗಡೆ ನನ್ನ ಸಾರ್ವಜನಿಕ ಬದುಕಿನ ಒಂದು ಮಹತ್ವದ ಕ್ಷಣ ಕೂಡಾ. ನನ್ನ ಚಿಂತನೆಗಳನ್ನು ಪುನರ್ನವೀಕರಿಸಿಕೊಳ್ಳುವ ಪುನಶ್ಚೇತನಗೊಳಿಸುವ ಕ್ಷಣ. ಈ ಬಿಡುಗಡೆಗೆ ನನ್ನನ್ನು ಆಯ್ಕೆ ಮಾಡಿದ್ದು ನನಗೆ ಸಂತೋಷ ತಂದಿದೆ’ ಎಂದು ನಾಡೋಜ ಬರಗೂರು ರಾಮಚಂದ್ರಪ್ಪ ಅವರು ಕಿಕ್ಕಿರಿದು ತುಂಬಿದ್ದ ಸಭಾಂಗಣದಲ್ಲಿ ಪುಸ್ತಕ ಬಿಡುಗಡೆ ಮಾಡುತ್ತಾ ಹೇಳಿದರು. ‘ಬಂಡವಾಳ ಇಂದು ಯಾಕೆ ಓದಬೇಕು?’ ಎಂಬ ವಿಚಾರ ಸಂಕಿರಣದ ಗೋಷ್ಠಿಯ ಚರ್ಚೆಯನ್ನು ಮುಂದುವರೆಸುತ್ತಾ ನಮ್ಮ, ಮನುಕುಲದ ಬಿಡುಗಡೆಗಾಗಿ ‘ಬಂಡವಾಳ’ ಮತ್ತು ಇಂತಹ ಮಹತ್ವದ ವೈಚಾರಿಕ ಗ್ರಂಥಗಳನ್ನು ಓದಬೇಕು ಎಂದರು.

‘ಬಂಡವಾಳ’ ಮಾರ್ಕ್ಸ್‌ವಾದಕ್ಕೆ ಮೂಲಭೂತ ಅಡಿಪಾಯ ಹಾಕಿಕೊಟ್ಟ ತಾತ್ವಿಕ ಗ್ರಂಥ. ಶ್ರಮಮೂಲದ ಆರ್ಥಿಕತೆಯ ಚಾರಿತ್ರಿಕವಾದ ರಾಜಕೀಯ ಆರ್ಥಿಕ ವಿಶ್ಲೇಷಣೆಯನ್ನೊಳಗೊಂಡ ಗ್ರಂಥ. ಇಲ್ಲಿನ ಚಿಂತನೆ ಏಕಮುಖಿಯಾದ್ದಲ್ಲ. ಇಲ್ಲಿನ ಪ್ರತಿಯೊಂದು – ಶ್ರಮ ಇರಬಹುದು,, ಸರಕು ಮತ್ತು ಹಣಗಳಿರಬಹುದು– ವೈರುಧ್ಯಗಳಿರುವ ಕನಿಷ್ಠ ಎರಡು ಮುಖಗಳನ್ನು ಹೊಂದಿರುತ್ತದೆ. ‘ಬಂಡವಾಳ’ದಲ್ಲಿ ವೈರುಧ್ಯದ ನೆಲೆಯ ವೈಚಾರಿಕ ಭಿತ್ತಿಯಿದೆ. ಇದು ಪ್ರಧಾನವಾಗಿ ಆರ್ಥಿಕ ವಿಶ್ಲೇಷಣೆಯಾದರೂ ಅದನ್ನು ಸಾಮಾಜಿಕ, ಸಾಂಸ್ಕೃತಿಕ ಭಿತ್ತಿಗೂ ವಿಸ್ತರಿಸುತ್ತದೆ. ಇಲ್ಲಿ ಮನುಷ್ಯ–ಮಣ್ಣು, ಮನುಷ್ಯ–ಯಂತ್ರ, ಕೃಷಿ–ಕೈಗಾರಿಕೆಗಳ ನಡುವಣ ಸಂಬಂಧಗಳ ಸಮರ್ಪಕ ಚಿತ್ರಣವಿದೆ, ಎಂದು ಹೇಳುತ್ತಾ ‘ಬಂಡವಾಳ’ ಗ್ರಂಥದ ವಿಶಿಷ್ಟತೆಗಳ ಕುರಿತು ಬರಗೂರು ಅವರು ವಿವರವಾಗಿ ಮಾತನಾಡಿದರು.

ಮಾರ್ಕ್ಸ್‌ವಾದವನ್ನು ಭಾರತದಲ್ಲಿ ಓದುವಾಗ ಇಲ್ಲಿ ಪ್ರಚಲಿತವಿರುವ ಇತರ ವಿಚಾರಧಾರೆಗಳ ಜತೆ ಮುಖಾಮುಖಿಯಾಗಿಸಿ ಓದಬೇಕು. ಗಾಂಧೀವಾದ, ಲೋಹಿಯಾವಾದ, ಅಂಬೇಡ್ಕರ್‌ವಾದ ಮುಂತಾದ ವಿವಿಧ ವಿಚಾರಧಾರೆ ಅಥವಾ ‘ವಾದ’ಗಳಿಗೂ ಮಾರ್ಕ್ಸ್‌ವಾದಕ್ಕೂ ಒಂದು ವ್ಯತ್ಯಾಸವಿದೆ. ಆ (ಗಾಂಧೀವಾದ ಇತ್ಯಾದಿ) ವಾದಗಳು ನಿಜವಾಗಿಯೂ ಅದರಷ್ಟಕ್ಕೆ ವಾದಗಳಲ್ಲ. ಗಾಂಧೀಜಿಯವರ ಅಗಾಧ ಪ್ರಮಾಣದ ಬರಹಗಳು, ಭಾಷಣಗಳು, ಹೇಳಿಕೆಗಳನ್ನೆಲ್ಲಾ ಕ್ರೋಢಿಕರಿಸಿ ಸಮಗ್ರವಾಗಿ ಅದನ್ನೊಂದು ‘ವಾದ’ವಾಗಿ ನಾವು ಗ್ರಹಿಸುತ್ತೇವೆ. ಇದು ಲೋಹಿಯಾವಾದ, ಅಂಬೇಡ್ಕರ್‌ವಾದ ಗಳ ಮಟ್ಟಿಗೂ ನಿಜ. ಆದರೆ ಮಾರ್ಕ್ಸ್‌ವಾದ ಸ್ವಯಂ–ಸಿದ್ಧವಾದ ಒಂದು ವಾದ. ಆದರೂ ಇವುಗಳ ನಡುವೆ ಪರಸ್ಪರ ಸೈದ್ಧಾಂತಿಕ ಅನುಸಂಧಾನ ಸಾಧ್ಯ ಮತ್ತು ಅಗತ್ಯ, ಎಂದು ಬರಗೂರು ಅವರು ಅಭಿಪ್ರಾಯ ಪಟ್ಟರು.

ಬಂಡವಾಳ ಮತ್ತು ಮಾರ್ಕ್ಸ್‌ವಾದದ ಓದು, ಇಂದಿನ ಜಾಗತೀಕರಣ–ದೇಗುಲೀಕರಣದ ಸಂದರ್ಭದಲ್ಲಿ ಸೈದ್ಧಾಂತಿಕ ರಾಜಕಾರಣದ ಶಕ್ತಿಯಾಗಬಲ್ಲದು. ಬರಿಯ ಚುನಾವಣೆ ಮತ್ತು ಸಂಖ್ಯೆಯ ಆಟಕ್ಕೆ ಸೀಮಿತವಾಗಿರುವ ‘ತಾಂತ್ರಿಕ ಪ್ರಜಾಪ್ರಭುತ್ವ’ವು ‘ತಾತ್ವಿಕ ಪ್ರಜಾಪ್ರಭುತ್ವ’ದ ಮೇಲೆ ದಾಳಿ ಮಾಡುತ್ತಿರುವ ಇಂದಿನ ಸಂದರ್ಭದಲ್ಲಿ ಇದು ಅತಿ ಅಗತ್ಯ. ಸೈದ್ಧಾಂತಿಕ ಮತ್ತು ನೈತಿಕ ಬದ್ಧತೆ ಪ್ರತ್ಯೇಕವಾದದ್ದು ಅಲ್ಲ. ನೈತಿಕತೆ ವೈಯಕ್ತಿಕ ನೆಲೆಯಲ್ಲಿ ಮಾತ್ರವಲ್ಲ, ಸಾರ್ವಜನಿಕ ನೆಲೆಯಲ್ಲಿ ಸಹ ಸಾಧ್ಯವಾಗುವುದು, ಸೈದ್ಧಾಂತಿಕ ರಾಜಕಾರಣ ಮತ್ತು ತಾತ್ವಿಕ ಪ್ರಜಾಪ್ರಭುತ್ವದಿಂದ ಮಾತ್ರ. ಕರ್ನಾಟಕದ ಇತ್ತೀಚಿನ ರಾಜಕೀಯ ಬೆಳವಣಿಗೆಗಳು ‘ತಾಂತ್ರಿಕ ಪ್ರಜಾಪ್ರಭುತ್ವ’ದ ಉದಾಹರಣೆ. ಹಿಂದೆ ಕೇರಳದಲ್ಲಿ ಯುಡಿಎಫ್ ಸರಕಾರ ಕೇವಲ 2 ಸೀಟುಗಳ ಬಹುಮತ ಹೊಂದಿದ್ದರೂ, ಅದನ್ನು ಸಂಖ್ಯೆಯ ಆಟದಿಂದ ಉರುಳಿಸುವುದು ಸಾಧ್ಯವಿದ್ದರೂ ಎಲ್.ಡಿ.ಎಫ್ ಅದನ್ನು ಮಾಡದೆ ವಿರೋಧ ಪಕ್ಷವಾಗಿ ತನ್ನ ಕರ್ತವ್ಯ ನಿರ್ವಹಿಸುತ್ತಾ, ಯುಡಿಎಫ್ 5 ವರ್ಷ ಸರಕಾರ ನಡೆಸಗೊಟ್ಟದ್ದು ‘ತಾತ್ವಿಕ ಪ್ರಜಾಪ್ರಭುತ್ವ’ದ ಉತ್ತಮ ಉದಾಹರಣೆ ಎಂದು ಅವರು ವಿವರಿಸಿದರು.

ಇತರ ವಿವಿಧ ವಿಚಾರಧಾರೆಗಳ ‘ವಾದ’ಗಳ

ಪುಟ 11 ಕ್ಕೆ

'ಬಂಡವಾಳ' ಬಿಡುಗಡೆಯ ಸಂಭ್ರಮದ ನಡುವೆ......

ಪುಟ 9 ರಿಂದ

ಮಾತ್ರ ಹೊಂದಿಕೊಳ್ಳಬಲ್ಲದು, ಬಂಡವಾಳಶಾಹಿ ವ್ಯವಸ್ಥೆಯೊಂದಿಗೆ ಅದು ಹೊಂದಿಕೊಳ್ಳಲಾರದು. ಇದು ಬಂಡವಾಳಶಾಹಿ ಒಂದು ಸ್ವಯಂಸ್ಫುರಣೆಯ, ಸ್ವಯಂಚಾಲನೆಯ ವ್ಯವಸ್ಥೆಯೆಂಬ ಮಾರ್ಕ್ಸ್ ಶೋಧಿಸಿದ ಎರಡನೇ ಆಯಾಮವನ್ನು ಅರಿತಾಗ ಮಾತ್ರ ಸಾಧ್ಯ. ಆದ್ದರಿಂದಲೇ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇತರರು ಕಾಣಲಾಗದ್ದನ್ನು ಕಾಣಲು ಮಾರ್ಕ್ಸ್‌ಗೆ ಸಾಧ್ಯವಾಯಿತು.

ಬಂಡವಾಳಶಾಹಿ ಸುಧಾರಣೆಗೆ ಒಗ್ಗಿಕೊಳ್ಳುವುದಿಲ್ಲ, ಅದನ್ನು 'ಮಾನವೀಯ'ಗೊಳಿಸುವುದು ಸಾಧ್ಯವಿಲ್ಲ ಎಂಬುದು ಈಗಾಗಲೇ ಬಹಳಷ್ಟು ಜನರ ಅರಿವಿಗೆ ಬಂದಿದೆ. ಎರಡನೇ ಮಹಾಯುದ್ಧದ ನಂತರ ಸಮಾಜವಾದೀ ಬಣ ಮೂಡಿ ಬಂದಾಗ, ಮತ್ತು ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲಿ ಕಾರ್ಮಿಕ ಆಂದೋಲನದ ಸವಾಲು ಎದುರಾದಾಗ, ಮೂಲತಃ ಬಂಡವಾಳಶಾಹಿಯನ್ನು ರಕ್ಷಿಸಲೆಂದೇ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಕೀನ್ಸ್ ಪ್ರತಿಪಾದಿಸಿದ ಬಂಡವಾಳಶಾಹಿಯನ್ನು ಪ್ರಭುತ್ವವು ನಿಯಂತ್ರಿಸುವ ನಿಲುವನ್ನು ಅಂಗೀಕರಿಸಿದರೂ ಅದು ಬಹಳ ವರ್ಷ ಸಾಗಲಿಲ್ಲ. ಬಂಡವಾಳಶಾಹಿ ತುಸು ಸುಧಾರಿಸಿಕೊಂಡಂತೆಯೇ ಪ್ರಭುತ್ವ ಹೇರಿದ ನಿಯಂತ್ರಣಗಳನ್ನೆಲ್ಲ ಕಿತ್ತೊಗೆದು ಈಗ ನಾವು ಕಾಣುತ್ತಿರುವ ನವ-ಉದಾರವಾದ ಎದ್ದು ಬಂದಿದೆ. ಇದನ್ನು ಮಾರ್ಕ್ಸ್ ಶೋಧಿಸಿದ ಬಂಡವಾಳಶಾಹಿ ವ್ಯವಸ್ಥೆಯ ಸ್ವಯಂಸ್ಫುರಣೆ ಮತ್ತು ಸ್ವಯಂಚಾಲನೆಯ ಗುಣಲಕ್ಷಣದಿಂದ ಮಾತ್ರವೇ ಅರ್ಥ ಮಾಡಿಕೊಳ್ಳಲು ಸಾಧ್ಯ.

'ಸುಧಾರಣೆ' ಮತ್ತು 'ಕ್ರಾಂತಿ'ಯ ನಡುವಿನ ದ್ವಂದ್ವಾತ್ಮಕ ಸಂಬಂಧವನ್ನೂ ಇದೇ ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯ. ಸ್ವಯಂಚಾಲನೆಯ ಪ್ರವೃತ್ತಿಯ ಬಂಡವಾಳಶಾಹಿ ತನ್ನ ಮೇಲೆ ಯಾವುದೇ ನಿಯಂತ್ರಣವನ್ನು ಸ್ವಲ್ಪ ಕಾಲ ಮಾತ್ರವೇ ಸಹಿಸಿಕೊಳ್ಳಬಲ್ಲದು, ಅಂದರೆ ಸುಧಾರಣೆಗಳಿಗೆ ಒಂದು ಮಟ್ಟದ ವರೆಗೆ ಅದು ಸ್ಪಂದಿಸುತ್ತದೆ, ಆದ್ದರಿಂದ ಸುಧಾರಣೆಗಳ ಒಂದು ಪ್ರಾಮಾಣಿಕ ಅಜೆಂಡಾ ಹೊಂದಿದವರು ಅದನ್ನು ದೃಢವಾಗಿ ಮುಂದುವರೆಸಬೇಕಾದರೆ ಅನಿವಾರ್ಯವಾಗಿಯೇ ಅದನ್ನು ಮೀರಿ ಹೋಗಲೇ ಬೇಕಾಗುತ್ತದೆ, ಅಂದರೆ ಈ ವ್ಯವಸ್ಥೆಯನ್ನು ಕಿತ್ತೆಸೆಯುವ ಕ್ರಾಂತಿ ಅಗತ್ಯವಾಗುತ್ತದೆ. ಫಿಡೆಲ್ ಕಾಸ್ಟ್ರೊರವರ ಅನುಭವ ಇದಕ್ಕೆ ಉದಾಹರಣೆ. ಅವರು ಮತ್ತು ಸಂಗಡಿಗರು ಅಧಿಕಾರಕ್ಕೆ ಬಂದದ್ದು ಪ್ರಗತಿಶೀಲ ರಾಷ್ಟ್ರೀಯ ವಾದಿಗಳಾಗಿ, ಆದರೆ ತಮ್ಮ ದೇಶಬಾಂಧವರಿಗಾಗಿ ಸುಧಾರಣೆಗಳನ್ನು ಪ್ರಾಮಾಣಿಕವಾಗಿ ಮುಂದುವರೆಸುವ ಆವಶ್ಯಕತೆ ಅವರನ್ನು ಕಮ್ಯುನಿಸ್ಟರನ್ನಾಗಿಸಿತು. ಆದರೆ ಇದಕ್ಕೆ ವಿಮರ್ಶಾತ್ಮಕ ಧೋರಣೆ ಮತ್ತು ಮುಕ್ತ ಮನಸ್ಸು ಅಗತ್ಯ.


ಮಾರ್ಕ್ಸ್‌ಗಿಂತ ಮೊದಲಿನ ರಾಜಕೀಯ ಅರ್ಥಶಾಸ್ತ್ರಜ್ಞರು ಹಿಂದಿನ ವ್ಯವಸ್ಥೆಗಳನ್ನು ಅವುಗಳ ಪರಿಧಿಯ ಹೊರಗೆ ವಿಮರ್ಶಿಸಿದರೂ, ಬಂಡವಾಳಶಾಹಿಯನ್ನು ಮಾತ್ರ ಅದರ ಪರಿಧಿಯೊಳಗೇ ನೋಡುತ್ತಿದ್ದರೆ, ಮಾರ್ಕ್ಸ್ ಅದರ ಪರಿಧಿಯಾಚೆ ನಿಂತು ಅದನ್ನು ವಿಮರ್ಶಿಸಿದ ಮೊದಲಿಗರಾದ್ದರಿಂದ ಶಾಸ್ತ್ರೀಯ ರಾಜಕೀಯ ಅರ್ಥಶಾಸ್ತ್ರಜ್ಞರಿಗೆ ಕಾಣದ ಅದರ ಗುಣಧರ್ಮಗಳು ಅವರಿಗೆ ಕಾಣ ಬಂತು. ಇದೇ ಮಾರ್ಕ್ಸ್‌ವಾದೀ ವಿಶ್ಲೇಷಣೆಯನ್ನು ಭಿನ್ನವಾಗಿಸಿರುವ, ಈಗಲೂ ಪ್ರಸ್ತುತವಾಗಿಸಿರುವ ಸಂಗತಿ. ನಿಜ, ಈ ವಿಶ್ಲೇಷಣೆ ಬಂಡವಾಳಶಾಹಿಯಲ್ಲಿ ಆಗಿರುವ ಬೆಳವಣಿಗೆಗಳನ್ನು ವಿಮರ್ಶಾತ್ಮಕವಾಗಿ ಗಮನಕ್ಕೆ ತಗೊಳ್ಳಬೇಕು.

ಎಡಪಂಥದ ಮರುಶೋಧನೆಯ ವಿಷಯದ ಬಗ್ಗೆ ಹೇಳುವುದಾದರೆ ಎಡಪಂಥೀಯರು ಮಾರ್ಕ್ಸ್ ಮಾಡಿದಂತೆ ಈಗಿರುವ ವ್ಯವಸ್ಥೆಯ ಪರಿಧಿಯ ಹೊರಗೆ ತಮ್ಮ ನಿಲುವನ್ನು ತಗೊಳ್ಳಬೇಕಾಗುತ್ತದೆ. ನಾವು ಇತರರಂತೆ ನವ-ಉದಾರವಾದದ ಪರಿಧಿಯೊಳಗೆ ಅಭಿವೃದ್ಧಿಯ ನಿಲುವನ್ನು ತಳೆಯಬಾರದು. ಅದರ ಹೊರಗೆ ಭವಿಷ್ಯದ ಬಗ್ಗೆ ಒಂದು ಪರ್ಯಾಯ ಕಣ್ಣೋಟವನ್ನು ಮಾತ್ರವಲ್ಲ, ಈಗ-ಇಂದು ಮತ್ತು ಆ ಸಮಾಜವಾದಿ ಭವಿಷ್ಯವನ್ನು ತಲುಪುವ ವರೆಗಿನ ಕಾಲಾವಧಿಯ ಕುರಿತೂ ಒಂದು ಪರ್ಯಾಯ ಕಣ್ಣೋಟವನ್ನು ರೂಪಿಸಬೇಕಾಗುತ್ತದೆ. ಇದನ್ನು ರೂಪಿಸದಿರುವುದೇ ಎಡಪಂಥದ ಸಮಸ್ಯೆ. ನಾವು ಇತರರು ಮಾಡಿದಂತೆ ಮಾಡಲಾಗದು. ನಾವೀಗ ದುರ್ಬಲರಾಗಿದ್ದೇವೆ, ಆದ್ದರಿಂದ ವ್ಯವಸ್ಥೆಯೊಳಗೆ ಸಾಧ್ಯವಾಗುವುದನ್ನಷ್ಟೇ ಮಾಡೋಣ ಎಂಬ ನಿಲುವು ತಳೆಯಬಾರದು. ನಾವು ಭಿನ್ನವಾಗಿರಬೇಕಾಗಿದೆ, ನಮ್ಮ ಈಗಿನ ಕಾರ್ಯನೀತಿ ಭವಿಷ್ಯದಲ್ಲಿ ಸಮಾಜವಾದದಲ್ಲಿನ ಕಾರ್ಯನೀತಿಗಿಂತ ಭಿನ್ನವಾಗಿರಲು ಸಾಧ್ಯವಿಲ್ಲ.

ಎಡಪಂಥೀಯ ಚಿಂತನೆಗಳನ್ನು ಉಚ್ಚಾಟಿಸಲು ಪ್ರಯತ್ನಿಸುತ್ತಿರುವ ಶಕ್ತಿಗಳನ್ನು ಗುರುತಿಸಬೇಕು– ನಟರಾಜ್ ಹುಳಿಯಾರ್

ಬೆಂಗಳೂರು ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಪ್ರೊ. ನಟರಾಜ್ ಹುಳಿಯಾರ್ ನಮ್ಮ ರಾಜ್ಯದಲ್ಲಿ, ದೇಶದಲ್ಲಿ ಎಡಪಂಥೀಯ ಚಿಂತನೆಗಳು ಹರಡದಂತೆ ಮಾಡುತ್ತಿರುವ, ಅದನ್ನು ಉಚ್ಚಾಟಿಸಲು ಪ್ರಯತ್ನಿಸುತ್ತಿರುವ ಶಕ್ತಿಗಳನ್ನು ಗುರುತಿಸುತ್ತ, ಎಡಪಂಥೀಯ ಚಿಂತನೆಗಳ ಹಿನ್ನಡೆ ನಮ್ಮ ವಿಶ್ವವಿದ್ಯಾಲಯಗಳ ಸಾವಿನೊಂದಿಗೆ ನಡೆದಿದೆ ಎಂದರು. ಸಾರ್ವಜನಿಕ ವಲಯದ ವಿರುದ್ಧ ನಿಂತಿರುವ ಖಾಸಗೀವಲಯ, ಕಾರ್ಪೋರೇಟ್ ಮಂದಿ ಮತ್ತು ಸಾಮೂಹಿಕ ಮಾಧ್ಯಮಗಳು ಬಂಡವಾಳ ಓದಬೇಡಿ ಎಂದು ನಮ್ಮ ಹೊಸ ತಲೆಮಾರಿನವರಿಗೆ ಹೇಳುತ್ತಿವೆ. ನಿಜ, ಇದನ್ನು ಅರಂಭಿಸಿದವರು ಮನಮೋಹನ್‌ಸಿಂಗ್.

ಎಡಪಂಥದ ಮರುಶೋಧನೆಯ ಕೆಲವು ವಲಯಗಳನ್ನು ಸೂಚಿಸುತ್ತ ಹುಳಿಯಾರ್ ರಾಜಕೀಯ ಪಕ್ಷಗಳು ಈಗ ಪರಿಭಾಷೆಗಳನ್ನೇ ಹೊಂದಿಲ್ಲ. ಅವು ಅದನ್ನು ಹೊಂದುವಂತೆ ಮಾಡಬೇಕಾಗಿದೆ, ಈಗ ದಿಲ್ಲಿಯಲ್ಲಿ ಆಳುವವರು ಟ್ರಿಲಿಯನ್ ಆರ್ಥಿಕದ ಬಗ್ಗೆ ಮಾತಾಡುತ್ತಿರುವಾಗ ಆರ್ಥಿಕ ಬಿಕ್ಕಟ್ಟಿನ ವಿಶ್ಲೇಷಣೆಗಳು ಎಡಪಂಥೀಯ ಚಿಂತಕರಿಂದ ಆಗಬೇಕಾಗಿದೆ; ಶಿಕ್ಷಣ ಮತ್ತು ಪತ್ರಿಕಾರಂಗದಲ್ಲಿ ಮರುಶೋಧನೆ ನಡೆಸಬೇಕಾಗಿದೆ, ಮತ್ತು ಎಡಚಿಂತನೆಗಳ ವಿವಿಧ ಆಂದೋಲನಗಳು ತಮ್ಮ ಪ್ರತ್ಯೇಕತೆಗಳನ್ನು ಬಿಟ್ಟು ಅನುಭವಗಳ ಪರಸ್ಪರ ವಿನಿಮಯ ಮಾಡಿಕೊಳ್ಳಬೇಕಾಗಿದೆ ಎಂದು ಸೂಚಿಸಿದರು.



ಭಾಷೆ	ಸಂಪುಟ 1	ಸಂಪುಟ 2	ಸಂಪುಟ 3	ಪ್ರಕಾಶಕರು
ಹಿಂದಿ	1961	1979	1983	ಪ್ರಗತಿ ಪ್ರಕಾಶನ-ಮಾಸ್ಕೊ, ಪಿ.ಪಿ.ಎಚ್.
ಉರ್ದು	1961	ಮಾಹಿತಿ ಸಿಕ್ಕಿಲ್ಲ	ಮಾಹಿತಿ ಸಿಕ್ಕಿಲ್ಲ	ದಾರ್-ಉಲ್ ಶೌರ್, ಲಾಹೋರ್
ಮಲಯಾಳಂ	1968	ಮಾಹಿತಿ ಸಿಕ್ಕಿಲ್ಲ	ಮಾಹಿತಿ ಸಿಕ್ಕಿಲ್ಲ	ಮಾಹಿತಿ ಸಿಕ್ಕಿಲ್ಲ
ಬಂಗಾಳಿ	1974/1988	1989	ಮಾಹಿತಿ ಸಿಕ್ಕಿಲ್ಲ	ಬಾನಿ, ಪ್ರಗತಿ ಪ್ರಕಾಶನ-ಮಾಸ್ಕೊ
ಪಂಜಾಬಿ	1975	ಮಾಹಿತಿ ಸಿಕ್ಕಿಲ್ಲ	ಮಾಹಿತಿ ಸಿಕ್ಕಿಲ್ಲ	ನವಯುಗ ಪ್ರಕಾಶನ, ದೆಹಲಿ
ತೆಲುಗು	1996	1998	2000	ವಿಶಾಲಾಂಧ್ರ ವಿಜ್ಞಾನ ಸಮಿತಿ
ತಮಿಳು	1998	ಮಾಹಿತಿ ಸಿಕ್ಕಿಲ್ಲ	ಮಾಹಿತಿ ಸಿಕ್ಕಿಲ್ಲ	ನ್ಯೂ ಸೆಂಚುರಿ ಬುಕ್ ಹೌಸ್
ಒಡಿಯಾ	2010	2011	ಮಾಹಿತಿ ಸಿಕ್ಕಿಲ್ಲ	ಒಡಿಶಾ ಲೋಕ ಶಿಕ್ಷಣ ಟ್ರಸ್ಟ್
ಕನ್ನಡ	2019	??	??	ಕ್ರಿಯಾ, ನವಕರ್ನಾಟಕ

ದಲಿತ, ಕರಿಯ ಮತ್ತು ಅಲ್ಪಸಂಖ್ಯಾತ ಮಹಿಳೆಯರನ್ನು ಮುಖಂಡತ್ವಕ್ಕೆ ತರಬೇಕು– ಡಾ.ಹೆಚ್.ಎಸ್.ಅನುಪಮ

ವ್ಯಕ್ತಿ ಸ್ವಾತಂತ್ರ್ಯ, ಸಮಾನತೆ ಮತ್ತು ವ್ಯಕ್ತಿ ಘನತೆಯನ್ನು ಎತ್ತಿ ಹಿಡಿಯುವ ಎಡಪಂಥ ಯಾರಿಗೆ ಬೇಡ? ಆದರೂ 'ನನ್ನ ಸ್ವಾತಂತ್ರ್ಯ, ನನ್ನ ಘನತೆ' ಎಂದು ಮಾತ್ರ ಹೇಳುತ್ತ ಎಲ್ಲರ ಸ್ವಾತಂತ್ರ್ಯ, ಎಲ್ಲರ ಘನತೆ, ಎಲ್ಲರ ಸಮಾನತೆಯ ಬಗ್ಗೆ ಮತಾಡುವವರನ್ನು ವೈರಿಗಳಂತೆ ಕಾಣುವ ಸಂದರ್ಭದಲ್ಲಿ ಎಡಪಂಥದ ಮರುಶೋಧನೆಯ ಬಗ್ಗೆ ಒಟ್ಟು ಸೇರಿರುವುದು ಅರ್ಥಪೂರ್ಣ ಎಂದು ಆರಂಭಿಸಿದ ನಾಡಿನ ಪ್ರಖ್ಯಾತ ಲೇಖಕಿ ಮತ್ತು ಚಿಂತಕಿ ಡಾ.ಹೆಚ್.ಎಸ್.ಅನುಪಮ ಎಡಚಿಂತನೆಯ ಮರುಶೋಧನೆಗೆ ಸಂಬಂಧಪಟ್ಟಂತೆ ತಮ್ಮ ಯೋಚನೆಗಳನ್ನು ಮುಂದಿಟ್ಟರು.

ಈಗ ಬುಡಮಟ್ಟದಲ್ಲಿ ಮಾದರಿಗಳನ್ನು ನಿರ್ಮಿಸುವ ಕೆಲಸ ಆಗಬೇಕಾಗಿದೆ, ವಿಶೇಷವಾಗಿ ಯುವ ತಲೆಮಾರಿನ ಮುಂದೆ. ಎರಡನೆಯದಾಗಿ ಶ್ರೇಣೀಕರಣ ಇರುವ ವ್ಯವಸ್ಥೆಯಲ್ಲಿ ಬಿಡುಗಡೆ ಎಂಬುದು ಸಾಧ್ಯವಿಲ್ಲ. ಆದರೆ ಎಡರಾಜಕಾರಣವೂ ಶ್ರೇಣೀಕರಣದಿಂದ ಹೊರಬಂದಿಲ್ಲ, ಆರ್ಥಿಕ ಪ್ರಶ್ನೆಗಳನ್ನು, ಸಾಮಾಜಿಕ ತಾರತಮ್ಯಗಳನ್ನು ವಿಶ್ಲೇಷಿಸಿದ ಮಾರ್ಕ್ಸ್‌ವಾದ ಅದನ್ನು ಕುಟುಂಬದ ಹಂತದಲ್ಲಿ ಮಾಡಿಲ್ಲ, ವೈಯಕ್ತಿಕ ಪ್ರಶ್ನೆಗಳನ್ನು ನಿಭಾಯಿಸಿಲ್ಲ ಎಂಬುದು ಸ್ತ್ರೀವಾದಿಗಳ ತಕರಾರು ಎನ್ನುತ್ತ, ದಲಿತ, ಕರಿಯ ಮತ್ತು ಅಲ್ಪಸಂಖ್ಯಾತ ಮಹಿಳೆಯರನ್ನು ಮುಖಂಡತ್ವಕ್ಕೆ ಹೇಗೆ ತರುವುದು ಎಂಬುದು ಈ ಮರುಶೋಧನೆಯ ಮೊದಲ ಹೆಜ್ಜೆಯಾಗಬೇಕು ಎಂದರು. ಮುಖ್ಯವಾಗಿ 1992ರ ನಂತರದ, ಅಂದರೆ ಜಾಗತೀಕರಣದ ಯುಗದಲ್ಲಿ ಜನಿಸಿದ ಯುವಜನಾಂಗವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಅವರ ಮುಂದೆ ಎಡಚಿಂತನೆಗಳನ್ನು ಪ್ರಸ್ತುತ ಪಡಿಸುವುದು ಹೇಗೆ ಎಂದು ಯೋಚಿಸಬೇಕಾಗಿದೆ.

ಹಕ್ಕುಗಳ ಆಂದೋಲನಗಳಿಗೆ ಬೆಂಬಲ ನೀಡುತ್ತಿರುವ ಎಡಪಕ್ಷಗಳತ್ತ ಯುವತಿಯರ ಒಲವು ಹೆಚ್ಚುತ್ತಿರುವ ಪ್ರವೃತ್ತಿ ಜಗತ್ತಿನಾದ್ಯಂತ ಕಂಡು ಬರುತ್ತಿರುವಾಗ ' ಭಾರತದಲ್ಲಿ ಮಾತ್ರ ಅದು ಯಾಕಿಲ್ಲ, ಇದಕ್ಕೆ ಕಾರಣವಾದ ಎಡ ಆಂದೋಲನಗಳನ್ನೂ ಬಾಧಿಸುತ್ತಿರುವ ಪಿತೃಪ್ರಾಧಾನ್ಯತೆ, ಪುರುಷ ಪ್ರಾಧಾನ್ಯತೆಯ ತೊಡಕುಗಳನ್ನು ಹೇಗೆ ನಿವಾರಿಸುವುದು ಎಂಬ ಬಗ್ಗೆ ಗಂಭೀರ ಚಿಂತನೆ ನಡೆಸಬೇಕಾಗಿದೆ ಎಂದು ಮುಂದುವರೆದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾರ್ಕ್ಸ್‌ವಾದಿಗಳು ಮಾನವನ ಅಲೌಕಿಕ ಅಗತ್ಯಗಳಿಂದ ದೂರ ನಿಂತಿದ್ದಾರೆ ಎಂದು ಆಪಾದಿಸಿದ ಅವರು ಸೂಫಿಗಳು, ಕಬೀರ, ಬಸವಣ್ಣ ಮುಂತಾದವರಿಂದ ಕಲಿಯಬೇಕಾಗಿದೆ, ಇದು ಎಡಚಿಂತನೆಗಳನ್ನು ಹೆಣ್ಣುಮಕ್ಕಳ ನಡುವೆ ಒಯ್ಯಲು ಅನುವು ಮಾಡಿಕೊಡುತ್ತದೆ ಎಂದು ಅಭಿಪ್ರಾಯ ಪಟ್ಟರು.

ಎಡಪಕ್ಷಗಳು ಎಲ್ಲರೊಡನೆಯೂ ಅನುಸಂಧಾನಕ್ಕೆ ಸದಾ ಸಿದ್ಧ – ಕೆ.ಎನ್.ಉಮೇಶ್

ಸಂಸತ್ತಿನಲ್ಲಿ ಎಡಪಕ್ಷಗಳ ಸಂಖ್ಯಾಬಲ 53ರಿಂದ 5 ಕ್ಕೆ ಇಳಿದಿರುವಾಗ ಎಡಪಕ್ಷಗಳು ಹಲವು ಸವಾಲುಗಳನ್ನು, ಟೀಕೆಗಳನ್ನು ಎದುರಿಸುತ್ತಿವೆ. ಅವುಗಳಲ್ಲಿ ನಿಜಸಂಗತಿಗಳು ಇಲ್ಲವೆಂದೇನಲ್ಲ, ಎಡಪಕ್ಷಗಳು, ಅದರಲ್ಲೂ ಕಮ್ಯೂನಿಸ್ಟ್ ಪಕ್ಷಗಳು ಸದಾ ಅನುಸಂಧಾನಕ್ಕೆ, ಸ್ವಯಂವಿಮರ್ಶೆಗಳಿಗೆ, ಮರುಶೋಧನೆಗೆ ಸಿದ್ಧ ಎಂದ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಸದಸ್ಯ ಹಾಗೂ ಕಾರ್ಮಿಕ ಮುಖಂಡರಾದ ಕೆ.ಎನ್‌ಉಮೇಶ್ ಕೆಲವು ಸಂಗತಿಗಳನ್ನು ಮುಂದಿಟ್ಟರು.

ನಾಲ್ಕು ದೇಶವ್ಯಾಪಿ ಮುಷ್ಕರಗಳನ್ನು ಸಂಘಟಿಸಿದರೂ, ಸಂಸತ್ತಿನ ಬಳಿ ಲಕ್ಷಾಂತರ ಜನಗಳನ್ನು ಅಣಿನೆರೆಸಲು ಸಾಧ್ಯವಾದರೂ ಸಂಸತ್ತಿನ ಒಳಗೆ ಸಾಕಷ್ಟು ಸಂಖ್ಯೆಯಲ್ಲಿ ಹೋಗಲು ಏಕೆ ಸಾಧ್ಯವಾಗಿಲ್ಲ ಎಂಬ ಪ್ರಶ್ನೆಗಳು ಎದ್ದಿವೆ. ಈ ಬಗ್ಗೆ ನಾವೂ ಸ್ವವಿಮರ್ಶೆ ಮಾಡಿಕೊಂಡಿದ್ದೇವೆ., ನಮ್ಮ ತೀರ್ಮಾನಗಳನ್ನು ಬಹಿರಂಗವಾಗಿಯೇ ಪ್ರಕಟಿಸಿದ್ದೇವೆ ಎಂದು ಮುಂದುವರೆದು ಅವರು ಹೇಳಿದರು.

2010ರಲ್ಲಿ ಕರ್ನಾಟಕದಲ್ಲಿ ಆದ ಒಟ್ಟು ಉತ್ಪತ್ತಿಯಲ್ಲಿ ಕಾರ್ಮಿಕರ ಸಂಬಳಗಳ ಪಾಲು 23% ಇತ್ತು, 2014-15ರಲ್ಲಿ ಅದು 19%ಕ್ಕೆ ಇಳಿಯಿತು. ಈ ಬಗ್ಗೆ ಮಾಲಕರನ್ನು ಕೇಳಿದಾಗ ಅದನ್ನು 9%ಕ್ಕೆ ಇಳಿಸುವುದು ತಮ್ಮ ಗುರಿ ಎಂದರು. ಅವರ ಈ ಗುರಿಸಾಧನೆಗೆ ಅಡ್ಡಿಯಾಗಿರುವವರು ಕಾರ್ಮಿಕರು, ಮತ್ತು ಅವರನ್ನು ಸಂಘಟಿಸುತ್ತಿರುವ ಕಾರ್ಮಿಕ ವರ್ಗದ ಪಕ್ಷಗಳು, ಕಮ್ಯುನಿಸ್ಟರು. ಇಂತವರನ್ನು ಸಂಸತ್ತಿನ ಒಳಗಲ್ಲ, ಬಳಿಗಾದರೂ ಬರಲು ಬಿಡುತ್ತಾರೆಯೇ ಎಂದು ಮಾರ್ಮಿಕವಾಗಿ ಅವರು ಪ್ರಶ್ನಿಸಿದರು.

ಎಡಪಕ್ಷಗಳ ಹೋರಾಟಗಳಿಂದಾಗಿ ಹಲವು ಹಕ್ಕು ಆಧಾರಿತ ಕಾಯ್ದೆಗಳು ಬಂದಿವೆ. ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ, ಅರಣ್ಯ ಹಕ್ಕುಗಳ ಕಾಯ್ದೆ, ಶಿಕ್ಷಣ ಹಕ್ಕು ಕಾಯ್ದೆ, ಮಾಹಿತಿ ಹಕ್ಕು ಕಾಯ್ದೆ, ಅಷ್ಟೇ ಏಕೆ, ಬಹಳಷ್ಟು ಪ್ರಚಾರ ಪಡೆಯದ ಹಿರಿಯ ನಾಗರಿಕರ ನಿರ್ವಹಣಾ ಕಾಯ್ದೆ ಮುಂತಾದವುಗಳು ಬಂದಿವೆ. ಇವು ಉತ್ಪತ್ತಿಯಲ್ಲಿ ಕಾರ್ಮಿಕರ, ದುಡಿಮೆಗಾರರ ಪಾಲನ್ನು 9%ಕ್ಕೆ ಇಳಿಸುವಲ್ಲಿ ತೊಡಕುಂಟು ಮಾಡಿದರೂ ಅವನ್ನು ತರುವಂತೆ ಮಾಡಲು ಸಾಧ್ಯವಾಗಿದೆ.

ಮಾನವ ವಿಮೋಚನೆಯ ಒಂದು ಸಾಧನವಾಗಿ ಎಡಪಂಥ ಸದಾ ಪ್ರಸ್ತುತವಾಗಿರುತ್ತದೆ, ಎಡಪಕ್ಷಗಳನ್ನು ಮುಗಿಸಿದರೆ ಅಂತಹ ಎಡಪಂಥ ಉಳಿಯಲು ಸಾಧ್ಯವಾಗುವುದಿಲ್ಲ. ಆಳುವ ಮಂದಿ ಈ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಲೇ ಇರುತ್ತಾರೆ. ಆದರೆ ಈ ದೇಶದ ದುಡಿಮೆಗಾರರು ಅದಕ್ಕೆ ಅವಕಾಶ ಕೊಡುವುದಿಲ್ಲ, ದುಡಿಮೆಗಾರರ ಚಳುವಳಿಗಳನ್ನು ವ್ಯಾಪಕಗೊಳಿಸುತ್ತೇವೆ, ನಮ್ಮನ್ನು ಸಮಕಾಲೀನ ಗೊಳಿಸಿಕೊಳ್ಳುತ್ತೇವೆ, ಈ ಸೋಲಿನಿಂದ ಎದ್ದು ಬರುತ್ತೇವೆ ಎಂದು ಅವರು ಆತ್ಮವಿಶ್ವಾಸದಿಂದ ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕ್ರಿಯಾ ಮಾಧ್ಯಮದ ಒಬ್ಬ ನಿರ್ದೇಶಕರು, ಮಾಜಿ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿ ಈ ಗೋಷ್ಠಿಯಲ್ಲಿ ಕೇಳಬಂದ ಕೆಲವು ಪ್ರಶ್ನೆಗಳನ್ನು ಪರಿಶೀಲಿಸುತ್ತ ಎಡಪಕ್ಷಗಳ ಬಲವನ್ನು ಲೆಕ್ಕ ಹಾಕುವುದು ಅವು ವಿಧಾನಸಭೆಯಲ್ಲಿ, ಸಂಸತ್ತಿನಲ್ಲಿ ಎಷ್ಟು ಸಂಖ್ಯಾಬಲ ಹೊಂದಿದೆ ಎಂಬುದರ ಮೇಲಲ್ಲ, ಅದಕ್ಕಿಂತ ಹೆಚ್ಚಾಗಿ ಹೋರಾಟಗಳು, ಚಳುವಳಿಗಳಿಂದ ಮತ್ತು ತಮ್ಮ ವಿಚಾರಗಳನ್ನು ಎಷ್ಟರ ಮಟ್ಟಿಗೆ ಜನರ ನಡುವೆ ಒಯ್ಯುವುದು ಸಾಧ್ಯವಾಗಿದೆ ಎಂಬುದರ ಮೇಲೆ. ಇವನ್ನು ಜನರಿಗೆ ಅರ್ಥವಾಗುವ ರೀತಿಗಳಲ್ಲಿ ಹೇಗೆ ಒಯ್ಯಬಹುದು ಎಂದು ಎಡಶಕ್ತಿಗಳು ಮರುಶೋಧನೆ ನಡೆಸಬೇಕು. ಈ ನಿಟ್ಟಿನಲ್ಲಿ 'ಬಂಡವಾಳ'ದ ಕನ್ನಡ ಅನುವಾದದ ಪ್ರಕಟಣೆಯ ಬಗ್ಗೆ ಹೇಳುತ್ತ ಇದು ನಿಜವಾಗಿಯೂ ಒಂದು ಚಾರಿತ್ರಿಕ ಸಂದರ್ಭ ಎಂದು ವರ್ಣಿಸಿದರು.

ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾಲಯದ ಡಾ.ಕಿರಣ್ ಗಾಜನೂರು ಈ ಮೊದಲ ಗೋಷ್ಠಿಯ ನಿರೂಪಣೆಯನ್ನು ಮಾಡಿದರು. ಆರಂಭದಲ್ಲಿ ಕ್ರಿಯಾ ಮಾಧ್ಯಮದ ನಿರ್ದೇಶಕರಲ್ಲೊಬ್ಬರಾದ ಸಿ.ಆರ್ ಶಾನಬಾಗ್ ಸ್ವಾಗತ ಕೋರಿದರು. ●

‘ಬಂಡವಾಳ’ ಶ್ರಮಜೀವಿಗಳ ಸೈದ್ಧಾಂತಿಕ ಅಸ್ತ್ರ ಆಗಬೇಕು

‘ಬಂಡವಾಳ’ ಅಥವಾ ಮಾರ್ಕ್ಸ್‌ವಾದ ಶ್ರಮಜೀವಿಗಳ ಸೈದ್ಧಾಂತಿಕ ಶಕ್ತಿ ಅಥವಾ ಅಸ್ತ್ರ. ದುಡಿಯುವ ಜನರು ಮಾರ್ಕ್ಸ್‌ವಾದದ ಭೌತಿಕ ಶಕ್ತಿ. ಇವೆರಡನ್ನೂ ವ್ಯವಸ್ಥಿತ ಪ್ರಯತ್ನಗಳ ಮೂಲಕ ಪ್ರತ್ಯೇಕಿಸಲಾಗಿದೆ. ತಪ್ಪು ಮತ್ತು ವಿರುದ್ಧ ಅಭಿಪ್ರಾಯ ಹರಡುವ ಮೂಲಕ ಶ್ರಮಜೀವಿಗಳಿಂದ (ಕಾರ್ಮಿಕರು, ರೈತರು, ಕೂಲಿಕಾರರು ಮತ್ತು ಇತರ ದುಡಿಯುವ ಜನರಿಂದ) ಅವರ ಶಕ್ತಿಯಾಗಬೇಕಾಗಿದ್ದ ಮಾರ್ಕ್ಸ್‌ವಾದದಿಂದ ವ್ಯವಸ್ಥಿತವಾಗಿ ದೂರವಿಡಲಾಗಿದೆ. ದಲಿತ ಹೋರಾಟಗಾರರು ಮತ್ತು ಬುದ್ಧಿಜೀವಿಗಳು ಮಾರ್ಕ್ಸ್‌ವಾದ ಓದದಂತೆ, ಕಮ್ಯುನಿಸ್ಟ್ ಹೋರಾಟಗಾರರು ಮತ್ತು ಬುದ್ಧಿಜೀವಿಗಳು ಅಂಬೇಡ್ಕರ್ ಅವರನ್ನು ಓದದಂತೆ ಮಾಡಲಾಗಿದೆ. ಈ ಪರಿಸ್ಥಿತಿ ನಿವಾರಣೆ ಮಾಡುವ ಮೊದಲ ಹೆಜ್ಜೆಯಾಗಿ ‘ಬಂಡವಾಳ ಸಂಪುಟ–1’ರ ಕನ್ನಡ ಅನುವಾದ ಪ್ರಕಟಣೆಯನ್ನು ನೋಡಬೇಕು. ಇದರ ದರ್ಶನವನ್ನು ಕಾರ್ಮಿಕರ ಯೂನಿಯನುಗಳಿಗೆ ಕೂಲಿಕಾರರ ದಲಿತರ ಓಣಿ ಕೇರಿಗಳಿಗೆ ಒಯ್ಯುವ ಸಾಧ್ಯತೆ ಇರುವವರು ಓದುವಂತೆ ಮಾಡಬೇಕು, ಎಂದು ಹಂಪಿ ವಿ.ವಿ.ದ ಪ್ರಾಧ್ಯಾಪಕ ಡಾ. ಬಿ.ಎಂ.ಪುಟ್ಟಯ್ಯ ಅಭಿಪ್ರಾಯ ಪಟ್ಟರು. ಅವರು ವಿಚಾರ ಸಂಕಿರಣದ ಎರಡನೆಯ ಗೋಷ್ಠಿಯ ವಿಷಯವಾದ ‘ಬಂಡವಾಳ ಇಂದು ಯಾಕೆ ಓದಬೇಕು?’ ಬಗ್ಗೆ ಮಾತನಾಡುತ್ತಿದ್ದರು. ‘ಬಂಡವಾಳ’ ಯಾರು ಮತ್ತು ಹೇಗೆ ಓದಬೇಕು ಎಂಬ ಪ್ರಶ್ನೆಗಳನ್ನು ಸೇರಿಸಿಕೊಂಡು ಅದಕ್ಕೆ ಉತ್ತರಿಸಲು ಪ್ರಯತ್ನಿಸಿದರು.

ಓದುವ ಪ್ರಕ್ರಿಯೆ ತಾತ್ವಿಕ ಮತ್ತು ವೈಚಾರಿಕ ಸಂಘರ್ಷದ ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ. ಮಾರ್ಕ್ಸ್ ಸ್ವತಃ ಫೂಯರಬಕ್ ಅಥವಾ ಹೆಗೆಲ್, ಆದಂ ಸ್ಮಿತ್ ಅಥವಾ ರಿಕಾರ್ಡೊ ಅವರುಗಳನ್ನು ಓದಿದ ಹಾಗೆ. ಅಂಬೇಡ್ಕರ್ ವರು ಬುದ್ಧ ಮತ್ತು ಮಾರ್ಕ್ಸ್‌ನ್ನು ಓದಿದ ಹಾಗೆ. ಬುದ್ಧನ ವಿಚಾರಗಳ ಬೆಳಕಿನಲ್ಲಿ ಮಾರ್ಕ್ಸ್‌ವಾದದ ಪುನರ್ ವ್ಯಾಖ್ಯಾನ ಮಾಡಿದ ಅಂಬೇಡ್ಕರ್ ಓದಿನ ಹಾಗೆ ಓದಬೇಕು. ಹೇಗೆ ಓದಬೇಕು ಎಂಬ ಪ್ರಶ್ನೆಗೆ ಇದು ಡಾ. ಪುಟ್ಟಯ್ಯ ಅವರ ಉತ್ತರವಾಗಿತ್ತು.

ಇದಕ್ಕಿಂತ ಮೊದಲು ‘ಬಂಡವಾಳ ಸಂಪುಟ–1’ರಲ್ಲಿ ಏನಿದೆ ಎಂಬ ಸ್ಥೂಲ ಪರಿಚಯ ಮಾಡುವ ಮೂಲಕ ‘ಬಂಡವಾಳ ಇಂದು ಯಾಕೆ ಓದಬೇಕು?’ ಎಂಬ ಪ್ರಶ್ನೆಗೆ ಉತ್ತರಿಸಲು ಪ್ರಯತ್ನಿಸಿದವರು, ‘ಬಂಡವಾಳ ಸಂಪುಟ–1 ಅನುವಾದ ಯೋಜನೆ’ಯ ಸಂಯೋಜಕ ವಸಂತರಾಜ ಎನ್.ಕೆ. ಬಂಡವಾಳಶಾಹಿ ಉತ್ಪಾದನಾ ಪ್ರಕ್ರಿಯೆಯನ್ನು ನಿರ್ವಚಿಸುವ ವಿವರಿಸುವ ಆರು ಸಿದ್ಧಾಂತಗಳು ‘ಬಂಡವಾಳ ಸಂಪುಟ–1’ರ ಹೂರಣ. ಶ್ರಮದ ಮೌಲ್ಯ ಸಿದ್ಧಾಂತ, ಮಿಗುತಾಯ ಮೌಲ್ಯದ ಸಿದ್ಧಾಂತ, ಬಂಡವಾಳದ ಸಿದ್ಧಾಂತ, ಬಂಡವಾಳ ಶೇಖರಣೆಯ ಸಿದ್ಧಾಂತ, ಹಣದ ಸಿದ್ಧಾಂತ, ಕೂಲಿಯ ಸಿದ್ಧಾಂತ – ಇವೇ ಆ ಆರು ಸಿದ್ಧಾಂತಗಳು. ಇವು 150 ವರ್ಷಗಳ ಬಂಡವಾಳಶಾಹಿಯ ದೀರ್ಘ ಮತ್ತು ಅಗಾಧ ಬೆಳವಣಿಗೆಯ ನಂತರವೂ, ಕೆಲವು ಅಪವಾದಗಳನ್ನು ಬಿಟ್ಟರೆ ಅನ್ವಯವಾಗುತ್ತವೆ. ಇದಲ್ಲದೆ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಉಗಮ ಮತ್ತು ವಿಕಾಸಗಳ ಚರಿತ್ರೆ ಇಲ್ಲಿದೆ. ಅದರ ಜತೆಗೆ ಹಾಸು ಹೊಕ್ಕಾಗಿರುವ ಕಾರ್ಮಿಕರ



ವರ್ಗಶೋಷಣೆ ಮತ್ತು ಅದರ ವಿರುದ್ಧ ಅವರ ವರ್ಗ ಹೋರಾಟಗಳ ಚಿತ್ರಣ ಇಲ್ಲಿದೆ. ಇವಲ್ಲದೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಯಂತ್ರ ಮತ್ತು ಮನುಷ್ಯನ ಕೆಲಸ, ಉತ್ಪಾದನೆಯಲ್ಲಿ ವಿಜ್ಞಾನ–ತಂತ್ರಜ್ಞಾನಗಳ ಪಾತ್ರ – ಇಂತಹ ಹಲವು ಶ್ರೀಮಂತ ಕಥನಗಳಿವೆ ಇಲ್ಲಿ. ಸಮಾಜಶಾಸ್ತ್ರಗಳಲ್ಲಿ ಇದು ಒಂದು ಕ್ಲಾಸಿಕ್ ಆಗಿರುವುದರಿಂದ ಅಕಾಡೆಮಿಕ್ ಲೋಕದ ವಿದ್ಯಾರ್ಥಿಗಳು, ಸಂಶೋಧಕರು, ಅಧ್ಯಾಪಕರು ಓದಬೇಕು. ಬಡತನ, ಅಸಮಾನತೆ, ಯುದ್ಧ–ಪರಿಸರ ನಾಶ ಮುಂತಾದ ಸಮಸ್ಯೆಗಳನ್ನು ಪರಿಹರಿಸಲು ತೊಡಕಾಗಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ಬದಲಿಸಬೇಕು ಎಂದು ಬಯಸುವವರೆಲ್ಲ ‘ಬಂಡವಾಳ’ ಓದಬೇಕು ಎಂದರು.

“ಅನುವಾದ ಪ್ರಕ್ರಿಯೆಯೇ ಒಂದು ತೀವ್ರ ಓದು. ಅದರ ಫಲವಾದ ಈ ಕೃತಿಯನ್ನು ಹಿಗ್ಗಾ ಮುಗ್ಗಾ ಓದಿ. ಓದಿ ಚಿಂದಿ ಚಿಂದಿ ಮಾಡಿ. ಭಾಷೆ–ಅರ್ಥಗಳಲ್ಲಿ ಅಸಮರ್ಪಕವಾದದ್ದನ್ನು ಎತ್ತಿ ತೋರಿಸಿ. ವಿಮರ್ಶಾತ್ಮಕವಾಗಿ ಓದಿ.” ಹೀಗೆಂದವರು ಈ ಪ್ರಶ್ನೆಯನ್ನು ತಮ್ಮದೇ ಆದ ರೀತಿಯಲ್ಲಿ ಉತ್ತರಿಸುತ್ತಾ, ಅಧ್ಯಕ್ಷೀಯ ಮಾತುಗಳನ್ನು ಆಡಿದ ‘ಬಂಡವಾಳ ಸಂಪುಟ–1’ ಅನುವಾದ ಯೋಜನೆಯ ಸಂಪಾದಕ ಮಂಡಳಿಯ ಸದಸ್ಯರಾದ ಪ್ರೊ.ವಿ.ಎನ್.ಲಕ್ಷ್ಮೀನಾರಾಯಣ ಅವರು. ಅನುಭಾವ–ಭಕ್ತಿ, ಭಾವನೆ–ವೈಚಾರಿಕತೆ, ನೆಮ್ಮದಿ–ಅಧ್ಯಾತ್ಮ ಮುಂತಾದ ವಿಚಾರ ಸಂಕಿರಣದ ಮೊದಲ ಗೋಷ್ಠಿಯಲ್ಲಿ ಚರ್ಚಿತವಾದ ಪರಿಕಲ್ಪನೆಗಳ ಬಗ್ಗೆ ಸ್ಪಷ್ಟತೆ ಪಡೆಯಲು ‘ಬಂಡವಾಳ’ ಓದಬೇಕು ಎಂದರು.

ಕಾರ್ಮಿಕ ಪ್ರತಿನಿಧಿಗಳಿಗೆ ಪ್ರತಿ ಪ್ರದಾನ

‘ಬಂಡವಾಳ’ ಕಾರ್ಮಿಕರನ್ನು ತಲುಪಿ ಅವರ ಸೈದ್ಧಾಂತಿಕ ಶಕ್ತಿಯಾಗಬೇಕು ಎಂಬ ಆಶಯವನ್ನು ಸಾಂಕೇತಿಕವಾಗಿ ಬಿಂಬಿಸಲು ವಿವಿಧ ವಿಭಾಗಗಳ ಕಾರ್ಮಿಕ ಪ್ರತಿನಿಧಿಗಳಿಗೆ ಬರಗೂರು ಅವರು ಗೌರವ ಪ್ರತಿಯನ್ನು ನೀಡಿದರು. ಇಂತಹ ಕಾರ್ಮಿಕ ಪ್ರತಿನಿಧಿಗಳು ಸ್ವತಃ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದು ಕಾರ್ಮಿಕ ಚಳುವಳಿಯಲ್ಲಿ ಸಕ್ರಿಯವಾಗಿದ್ದು ತಮ್ಮ ಅರಿವು ವಿಸ್ತರಿಸುವ ಹಂಬಲ ಹೊಂದಿದವರು. ಸ್ಕೀಂ ಕಾರ್ಮಿಕರ ಕ್ಷೇತ್ರದ ಬಿ.ಎನ್.ಯಶೋದ, ಗುತ್ತಿಗೆ ಕಾರ್ಮಿಕ ಕ್ಷೇತ್ರದ ಪಳನಿ, ಹಣಕಾಸು ರಂಗದ .. ..., ಖಾಸಗಿ ಉದ್ಯಮ ಕ್ಷೇತ್ರದ ಬಸವರಾಜ್ ಮತ್ತು .. .., ಸಾರ್ವಜನಿಕ ಕ್ಷೇತ್ರದ .. .. ಗೌರವ ಪ್ರತಿ ಪಡೆದ ಕಾರ್ಮಿಕ ಪ್ರತಿನಿಧಿಗಳು.

ತುಂಬಿ ತುಳುಕಿದ ಸಭಾಂಗಣ, ಭರ್ಜರಿ ಮಾರಾಟ, ಪೋಸ್ಟರ್ ಪ್ರದರ್ಶನ, ಇತ್ಯಾದಿ

ಸಮಾರಂಭದಲ್ಲಿ ನಿರೀಕ್ಷೆಗೆ ಮೀರಿದ ಭಾಗವಹಿಸುವಿಕೆ ಇತ್ತು. ನಿಗದಿತ ಆರಂಭ ಸಮಯದ ಅರ್ಧ ಗಂಟೆಯಲ್ಲೇ ಸಭಾಂಗಣ ತುಂಬಿ ಹೆಚ್ಚಿನ ಕುರ್ಚಿಗಳಿಗೆ ವ್ಯವಸ್ಥೆ ಮಾಡಿದರೂ ಹಲವರು ನಿಂತುಕೊಂಡೇ ಭಾಗವಹಿಸಬೇಕಾಯಿತು. ಇದು ಬೆಳಿಗ್ಗೆಯ ಮತ್ತು ಸಂಜೆಯ ‘ಸ್ಟಾರ್ ಆಕರ್ಷಣೆ’ಯಿದ್ದ ಪ್ರೊ. ಪ್ರಭಾತ್ ಪಟ್ನಾಯಕ್ ಮತ್ತು ಬರಗೂರು ರಾಮಚಂದ್ರಪ್ಪ ಅವರ ಭಾಷಣದ ಸಮಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಮಧ್ಯಾಹ್ನ ಊಟದ ನಂತರದ ಗೋಷ್ಠಿ–2ರ ಆರಂಭದಲ್ಲೇ ಹಲವರು ನಿಂತುಕೊಂಡೇ ಭಾಗವಹಿಸಬೇಕಾಯಿತು. ಸಂಜೆ 6 ಗಂಟೆಯ ವರೆಗೂ ಅದೇ ಪರಿಸ್ಥಿತಿಯಿತ್ತು.

ಪ್ರಕಟಣಾ–ಪೂರ್ವ ಮಾರಾಟವಲ್ಲದೆ ದಿನದ ಬಿಡಿ ಮಾರಾಟ ಸಹ ಬಿರುಸಾಗಿತ್ತು. ಕ್ಯಾಲಿಕೊ ಪ್ರತಿಗೆ 200 ರೂ ಹೆಚ್ಚು ಬೆಲೆ ಇದ್ದರೂ ಅನಿರೀಕ್ಷಿತವಾಗಿ ಅದಕ್ಕೆ ಹೆಚ್ಚಿನ ಬೇಡಿಕೆ ಇತ್ತು. ಪ್ರಕಟಣಾ–ಪೂರ್ವ ಕೂಪನು ಕೊಂಡವರಿಗೆ ಸಾದಾ ಪ್ರತಿ ನಿಗದಿಯಾಗಿದ್ದು ಹಲವರು 200 ರೂ ಹೆಚ್ಚು ತೆತ್ತು ಕ್ಯಾಲಿಕೊ ಪ್ರತಿ ಕೊಂಡರು.

ಬಂಡವಾಳದ ಎಂಟು ಭಾಗಗಳ ಪರಿಚಯ ಮಾಡುವ ಎಂಟು ಪೋಸ್ಟರುಗಳು: ಬಂಡವಾಳದ ಮಹತ್ವ ಸಾರುವ ಐದು ಪೋಸ್ಟರುಗಳು; ಬಂಡವಾಳ’ ಕೃತಿಯಲ್ಲಿರುವ ಮಹತ್ವದ ಉದ್ಧರಣೆಗಳ 8 ಪೋಸ್ಟರುಗಳು – ಸೇರಿದ್ದ ಪೋಸ್ಟರು ಪ್ರದರ್ಶನ ಸಹ ಇನ್ನೊಂದು ಆಕರ್ಷಣೆಯಾಗಿತ್ತು.



ನಮ್ಮ ಬಿಡುಗಡೆಗಾಗಿ ‘ಬಂಡವಾಳ’ ಓದಬೇಕು......

ಪುಟ 9 ರಿಂದ

ಒರೆಗಲ್ಲಿಗೆ ಹಚ್ಚಿದಾಗ ಮಾತ್ರ ಭಾರತದಲ್ಲಿ ಮಾರ್ಕ್ಸ್‌ವಾದ ಬೇರೂರಿ ಬೆಳೆಯಬಲ್ಲದು. ಪ್ರತಿಯೊಂದು ವಾದದ ಸಮರ್ಥಕರು ಇತರ ‘ವಾದ’ಗಳ ಜತೆ ಸೈದ್ಧಾಂತಿಕ ಅನುಸಂಧಾನ ಸಾಧಿಸಬೇಕು. ತಮ್ಮ ತಮ್ಮ ‘ಸೈದ್ಧಾಂತಿಕ ಶ್ರೇಷ್ಠತೆಯ ಸೊಕ್ಕು’ ಬಿಡಬೇಕು. ಯಾವುದೇ ಪ್ರಗತಿಪರ ಸಿದ್ಧಾಂತಕ್ಕೆ ಇಂತಹ ‘ಸೊಕ್ಕು’ ತಕ್ಕುದಲ್ಲ. ಇಂತಹ ‘ಸೊಕ್ಕು’ ಮನುವಾದದಂತಹ ಪ್ರತಿಗಾಮಿ ಸಿದ್ಧಾಂತಗಳಿಗೆ ಮಾತ್ರ ಸರಿ ಹೊಂದುವಂತಹದ್ದು. ಪ್ರಗತಿಪರ ಸಿದ್ಧಾಂತಗಳು ಮತ್ತು ಸಿದ್ಧಾಂತಿಗಳು ಇದನ್ನು ಬಿಡಲು ಸಾಧ್ಯವಾಗದಿದ್ದರೆ, ಅವು ಸಹ ಮನುವಾದದಂತೆ ಜಡವಾಗುವ ಅಪಾಯವಿದೆ, ಎಂದು ಬರಗೂರು ಅವರು ಅಭಿಪ್ರಾಯಪಟ್ಟರು.

ಇತ್ತೀಚಿನ ಚುನಾವಣೆಗಳಲ್ಲಿ ಎಡಪಕ್ಷಗಳ ಪ್ರತಿನಿಧಿಗಳ ಸಂಖ್ಯೆಯಲ್ಲಿ ಕುಸಿತದ ಬಗ್ಗೆ ಪ್ರಸ್ತಾಪಿಸುತ್ತಾ, ಇದರರ್ಥ ಎಡ ಸಿದ್ಧಾಂತ ಸೋತಿದೆ ಅಥವಾ ಅಪ್ರಸ್ತುತವಾಗಿದೆ ಎಂದಲ್ಲ. ಎಡಪಂಥೀಯತೆಗೆ ಸಾವಿಲ್ಲ, ಸೋಲಿಲ್ಲ. ಆದರೆ ಎಡಪಕ್ಷಗಳ ಸೋಲಿಗೆ ಕಾರಣವಾದ ಸೈದ್ಧಾಂತಿಕ ತಪ್ಪುಗಳು ಮತ್ತು ಕಾರ್ಯತಂತ್ರಗಳ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ‘ಬಂಡವಾಳ’ ಅನುವಾದದ ಕಾರ್ಯಯೋಜನೆಯಲ್ಲಿ ಮಾರ್ಕ್ಸ್‌ವಾದದ ಮತ್ತು ಕಮ್ಯುನಿಸ್ಟ್ ಚಳುವಳಿಗಳ ವಿವಿಧ ಧಾರೆಗಳ ಲೇಖಕರು–ಬುದ್ಧಿಜೀವಿಗಳು ಒಟ್ಟಾಗಿ ಕೆಲಸ ಮಾಡಿದಂತೆ, ರಾಜಕೀಯ ಕ್ಷೇತ್ರದಲ್ಲೂ ಇದು ಮಾಡುವುದು ಸಾಧ್ಯವಾಗಬೇಕು. ಮಾರ್ಕ್ಸ್‌ವಾದದ ಮತ್ತು ಕಮ್ಯುನಿಸ್ಟ್ ಚಳುವಳಿಗಳ ವಿವಿಧ ಧಾರೆಗಳು ತಮ್ಮ ಅಸ್ಮಿತೆ, ಆಶಯ ಮತ್ತು ಕಾರ್ಯಕ್ರಮಗಳನ್ನು ಬಿಟ್ಟುಕೊಡದೆ ‘ಸಂಯುಕ್ತ ಕಾರ್ಯಾಚರಣೆ’ ಮಾಡುತ್ತಾ ಐಕ್ಯವಾಗುವ ದಿನವನ್ನು ನಾವು ಎದುರು ನೋಡುತ್ತಿದ್ದೇವೆ. ಇದು ಇಂದಿನ ಅಗತ್ಯ ಕೂಡಾ. ಇದು ಆಗದಿದ್ದರೆ ಮುಂದೆ ಭೀಕರ ದಿನಗಳು ಕಾದಿವೆ ಎಂದು ಬರಗೂರು ಅವರು ಎಚ್ಚರಿಸಿದರು.

ಪುಸ್ತಕ ಬಿಡುಗಡೆ ಮತ್ತು ಬರಗೂರು ಅವರ ಭಾಷಣದ ಮೊದಲು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ‘ಬಂಡವಾಳ ಸಂಪುಟ–1 ಅನುವಾದ ಯೋಜನೆ’ಯ ಸಂಯೋಜಕ ಮತ್ತು ಕ್ರಿಯಾ ಮಾಧ್ಯಮ ದ ನಿರ್ದೇಶಕ ವಸಂತರಾಜ ಎನ್.ಕೆ. ಯೋಜನೆಯ ಅನುಭವದ ಬಗ್ಗೆ ಮಾತನಾಡಿದರು. 20 ಅನುವಾದಕರು, 6 ಸದಸ್ಯರ ಸಂಪಾದಕ ಮಂಡಳಿಯ 2 ವರ್ಷಗಳ ಸಾಮೂಹಿಕ ಪರಿಶ್ರಮದ ಫಲವಾಗಿ ‘ಬಂಡವಾಳ ಸಂಪುಟ–1’ ಹೊರಬಂದಿದೆ. ಇದು 2017ರಲ್ಲಿ ಹಮ್ಮಿಕೊಂಡಿದ್ದ ‘ಮಾರ್ಕ್ಸ್200–ಕ್ಯಾಪಿಟಲ್150’ ಯೋಜನೆಯ 7 ಪುಸ್ತಕಗಳ ಮಾಲಿಕೆಯಲ್ಲಿ ಕೊನೆಯದು. ನಾಡಿನ ಎರಡು ಪ್ರಮುಖ ಪ್ರಕಾಶನ ಸಂಸ್ಥೆಗಳು ಇಂತಹ ಒಂದು ಮಾಲಿಕೆ ತರುತ್ತಿರುವುದು ಮತ್ತು ಸುಮಾರು 500 ಪ್ರತಿಗಳು ಪ್ರಕಟಣೆಯ ಮೊದಲೇ ಮಾರಾಟವಾಗುವುದು ಈ ಯೋಜನೆಯ ವಿಶಿಷ್ಟತೆಗಳು. ಈ ಸಮಾರಂಭದಲ್ಲಿ ಸಭಾಂಗಣ ತುಂಬಿ ತುಳುಕುತ್ತಿದ್ದು ಬೆಳಿಗ್ಗೆಯಿಂದ ಸಂಜೆಯವರೆಗೆ ಭಾಗವಹಿಸಿದ ಸಭಿಕರ ಉತ್ಸಾಹ ಸಂಭ್ರಮಗಳು ನಮಗೆ ಧೈರ್ಯ ತುಂಬಿವೆ. ಈ ಪುಸ್ತಕವನ್ನು ಓದಿಸುವ ಸಲುವಾಗಿ ರಾಜ್ಯದ 6 ಕಡೆ ಕಾರ್ಯಾಗಾರಗಳನ್ನು ಯೋಜಿಸುತ್ತೇವೆ. ಮುಂಬರುವ ಎಂಗೆಲ್ಸ್ ದ್ವಿಶತಾಬ್ದಿಯ ಸಂದರ್ಭದಲ್ಲಿ ‘ಬಂಡವಾಳ’ದ ಸಂಪುಟ–2 ಮತ್ತು 3 ಪ್ರಕಟಣೆಯ ಯೋಜನೆ ಹಾಕಿಕೊಳ್ಳುತ್ತೇವೆ ಎಂದರು. ಈ ಯೋಜನೆಗೆ ಚಾಲನೆ ಕೊಡುವುದರಲ್ಲಿ ಮಹತ್ವದ ಪಾತ್ರ ವಹಿಸಿದ ಹಿರಿಯ ಚಿಂತಕ ಡಾ.ಜಿ.ರಾಮಕೃಷ್ಣ ಮತ್ತು ಸಿಪಿಐ(ಎಂ) ನಾಯಕ ಜಿ.ವಿ.ಶ್ರೀರಾಮರೆಡ್ಡಿ ಅವರನ್ನು ವಿಶೇಷವಾಗಿ ನೆನೆದರು. ಸಂಪಾದಕ ಮಂಡಳಿಯ ಸದಸ್ಯರು ಮತ್ತು ಎಲ್ಲಾ ಅನುವಾದಕರಿಗೆ ಎರಡೂ ಸಂಸ್ಥೆಗಳ ಮತ್ತು ಯೋಜನೆಯ ಪರವಾಗಿ ಕೃತಜ್ಞತೆ ಸಲ್ಲಿಸಿದರು.

‘ಬಂಡವಾಳ’ ಗ್ರಂಥದ ಮಹತ್ವ; ‘ಬಂಡವಾಳ’ವನ್ನು ದುಡಿಯುವ ಜನರ, ಅಕಾಡೆಮಿಕ್ ಜಗತ್ತಿಗೆ, ಎಡ–ಪ್ರಗತಿಪರ ಚಳುವಳಿಗಳ ಕಾರ್ಯಕರ್ತರ ಬಳಿ ಒಯ್ದು ಓದಿಸುವ ಮಹತ್ವದ ಮತ್ತು ಅದರ ಜಾರಿಯ ಬಗ್ಗೆ; ಎಡ ಮತ್ತು ಕಮ್ಯುನಿಸ್ಟ್ ಚಳುವಳಿಗಳ ಐಕ್ಯ ಕಾರ್ಯಾಚರಣೆ ಮತ್ತು ಐಕ್ಯತೆಯ ಮಹತ್ವ ಹಾಗೂ ಅದಕ್ಕಿರುವ ಸವಾಲುಗಳು – ಇವೆಲ್ಲದರ ಬಗ್ಗೆ ಕಾರ್ಮಿಕ ಮತ್ತು ಕಮ್ಯುನಿಸ್ಟ್ ಚಳುವಳಿಯ ನಾಯಕರು ಮಾತನಾಡಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು.ಬಸವರಾಜ್, ಸಿಪಿಐ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿಸುಂದರಂ, ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ವಿಜಯಭಾಸ್ಕರ್, ಸಾಹಿತಿ ಕೆ.ನೀಲಾ ಮಾತನಾಡಿದವರು. ‘ಹೊಸತು’ ಸಂಪಾದಕ ಡಾ. ಸಿದ್ದನಗೌಡ ಪಾಟೀಲ ಅವರು ಅಧ್ಯಕ್ಷತೆ ವಹಿಸಿದ್ದರು.

ಕೊನೆಯಲ್ಲಿ ಉಪಸ್ಥಿತರಿದ್ದ ‘ಬಂಡವಾಳ ಸಂಪುಟ–1’ದ ಎಲ್ಲಾ ಅನುವಾದಕರಿಗೆ ಕೃತಿಯ ಒಂದು ಪ್ರತಿ ಮತ್ತು ಸ್ಮರಣಿಕೆಯನ್ನು ಕೊಡುವ ಮೂಲಕ ಸನ್ಮಾನಿಸಲಾಯಿತು. ಅನುವಾದಕರಲ್ಲಿ ಒಬ್ಬರಾದ ಡಾ.ಎಚ್.ಜಿ.ಜಯಲಕ್ಷ್ಮಿ ಅವರು ಬಿಡುಗಡೆ ಗೋಷ್ಠಿಯ ನಿರೂಪಣೆ ಮತ್ತು ನಿರ್ವಹಣೆಯನ್ನು ನೆರವೇರಿಸಿದರು. ●

ಜಮ್ಮು ಮತ್ತು ಕಾಶ್ಮೀರವನ್ನು ಕಳಚಿ ಹಾಕಿರುವ ನಡೆ: ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಮೇಲೆ ಸರ್ವಾಧಿಕಾರಶಾಹಿ ಪ್ರಹಾರ



ಪುಟ 8 ರಿಂದ

ಸಂಘಟನೆಗಳು ಸೇರಿದಂತೆ ಪಾಕಿಸ್ತಾನ ಬೆಂಬಲಿತ ಇಸ್ಲಾಮ್‌ವಾದಿ ಶಕ್ತಿಗಳು ಈ ಅತೃಪ್ತಿಯನ್ನು ಬಳಸಿಕೊಂಡವು.

ನ್ಯಾಷನಲ್ ಕಾನ್ಫರೆನ್ಸ್ ನೇತೃತ್ವದಲ್ಲಿ ನಡೆಯುತ್ತಿದ್ದ ಪಾಳೇಗಾರಿ-ವಿರೋಧಿ ಹೋರಾಟವನ್ನು ಹಿಂದೂ ಕೋಮುವಾದಿ ಶಕ್ತಿಗಳು ಮೊದಲಿನಿಂದಲೂ ವಿರೋಧಿಸುತ್ತಿದ್ದವು. ವಾಸ್ತವವಾಗಿ ಜನಸಂಘದ ಪೂರ್ವಜವಾದ ಪ್ರಜಾ ಪರಿಷತ್ ಮಹಾರಾಜನಿಗೆ ಬೆಂಬಲ ನೀಡಿತ್ತು. ಜನ ಸಂಘ ಮತ್ತು ಹಿಂದೂ ಮಹಾಸಭಾ 370ನೇ ವಿಧಿ ಮತ್ತು ಜಮ್ಮು ಮತ್ತು ಕಾಶ್ಮೀರಕ್ಕೆ ಯಾವುದೇ ರೀತಿಯ ಸ್ವಾಯತ್ತತೆ ನೀಡುವುದನ್ನು ಸಂಪೂರ್ಣವಾಗಿ ವಿರೋಧಿಸಿದ್ದವು. ಹಿಂದುತ್ವ ಸಿದ್ಧಾಂತ ಹೊಂದಿರುವುದರಿಂದ ಆರ್‌ಎಸ್‌ಎಸ್ ಬೆಂಬಲಿತ ಜನಸಂಘ ಮತ್ತು ನಂತರದಲ್ಲಿ ಬಿಜೆಪಿ ಏಕಘಟಕ ಕೇಂದ್ರೀಕೃತ ಭಾರತದ ಕಲ್ಪನೆಯಿಂದ ಸತತವಾಗಿ 370ನೇ ವಿಧಿಯನ್ನು ವಿರೋಧಿಸುತ್ತಾ ಬಂದಿವೆ. ಎಲ್ಲಕ್ಕಿಂತ ಹೆಚ್ಚಾಗಿ, ಕಾಶ್ಮೀರ ಕಣಿವೆಯು ಮುಸ್ಲಿಂ ಬಾಹುಳ್ಯದ ಪ್ರದೇಶ ಎಂಬುದು ಅವರ ಶತೃತ್ವಕ್ಕೆ ಕಾರಣವಾಗಿತ್ತು.

ಜಮ್ಮು ಮತ್ತು ಕಾಶ್ಮೀರವನ್ನು ಕಳಚಿ ಹಾಕುವುದು ಹಿಂದುತ್ವದ ಹುನ್ನಾರ

ಗಡಿಯಾಚೆಗಿನ ಇಸ್ಲಾಮ್‌ವಾದಿಗಳ ರೀತಿಯಲ್ಲಿ ಹಿಂದುತ್ವವಾದಿಗಳು ಮತ್ತು ಆರ್‌ಎಸ್‌ಎಸ್‌ನವರು ಜಮ್ಮು ಮತ್ತು ಕಾಶ್ಮೀರವನ್ನು ಮೂರು ಭಾಗಳನ್ನಾಗಿ ಮಾಡಬೇಕೆಂದು ಬಯಸುತ್ತಾರೆ; ಹಿಂದೂ ಬಹುಸಂಖ್ಯಾಕರನ್ನು ಹೊಂದಿರುವ ಪ್ರತ್ಯೇಕ ಜಮ್ಮು, ಮುಸ್ಲಿಂ ಬಾಹುಳ್ಯದ ಕಾಶ್ಮೀರ ಕಣಿವೆ ಮತ್ತು ಬೌದ್ಧರು ಸಣ್ಣ ಬಹುಸಂಖ್ಯಾಕರಾಗಿರುವ ಲಡಾಖ್- ಇವೇ ಆ ಮೂರು ಭಾಗಗಳು. ಮುಸ್ಲಿಮರು ಬಹುಸಂಖ್ಯಾತರಾಗಿರುವ ಒಂದು ಸಮಗ್ರ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಅಸ್ತಿತ್ವವು ಅವರಿಗೆ ಅಪಥ್ಯವಾಗಿದೆ.

ಕಾಶ್ಮೀರ ಕಣಿವೆಯ ಧಾರ್ಮಿಕ ಸ್ವರೂಪದ ಕಾರಣದಿಂದಾಗಿ ಅದು ಪ್ರತ್ಯೇಕತಾವಾದ ಮತ್ತು ಭಯೋತ್ಪಾದನೆಯ ಆಗರವಾಗಿದೆ ಎಂಬುದು ಆರ್‌ಎಸ್‌ಎಸ್-ಬಿಜೆಪಿ ವಾದವಾಗಿದೆ. ಅವುಗಳ ಹುಟ್ಟಾ ಮುಸ್ಲಿಂ-ವಿರೋಧಿ ದ್ವೇಷದ ಭಾವನೆಯಿಂದಾಗಿ ಅವುಗಳು ಯಾವತ್ತೂ ಕಾಶ್ಮೀರಿ ಜನತೆಯ ಯಾವುದೇ ಪ್ರಜಾಸತ್ತಾತ್ಮಕ ಆಶೋತ್ತರಗಳಿಗೆ ವಿರುದ್ಧವಾಗಿರುತ್ತವೆ. 370ನೇ ವಿಧಿಯನ್ನು ರದ್ದುಪಡಿಸುವುದನ್ನು ಪ್ರತಿಪಾದಿಸುವುದೆಂದರೆ ಅವರ ದೃಷ್ಟಿಯಲ್ಲಿ ಒಂದು ಭದ್ರತಾ ಪ್ರಭುತ್ವದ ವ್ಯವಸ್ಥೆಯಡಿಯಲ್ಲಿ ಕಣಿವೆಯ ಜನರನ್ನು ದಮನಿಸುವುದು ಎಂದರ್ಥ.

ಆರ್‌ಎಸ್‌ಎಸ್ ಮತ್ತು ಮೋದಿ-ಷಾ ಜೋಡಿ ಪ್ರಕಾರ ಕಾಶ್ಮೀರವು ಒಂದು ಭೂಪ್ರದೇಶದ ತುಣುಕು, ಅದು ಅಖಂಡ ಭಾರತದ ಭಾಗವಾಗಿದೆ. ಆದರೆ ಅದರ ಜನರು ಮಸ್ಲಿಮರಾಗಿರುವುದರಿಂದ ಅವರನ್ನು ವಿದೇಶಿಯರೆಂದು ಪರಿಗಣಿಸಬೇಕು. ಜಮ್ಮು ಮತ್ತು ಕಣಿವೆಯ ನಡುವೆ ಕೋಮುವಾದಿ ವಿಭಜನೆ ಹೆಚ್ಚಿಸಲು ಆರ್‌ಎಸ್‌ಎಸ್ ಮತ್ತು ಬಿಜೆಪಿ ಅನವರತ ಶ್ರಮಿಸುತ್ತಿವೆ. 2014ರಲ್ಲಿ ಮೋದಿ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಈ ಪ್ರಯತ್ನಗಳು ಇನ್ನಷ್ಟು ಹೆಚ್ಚಿದವು. ನಾಗರಿಕರ ಪ್ರತಿಭಟನೆಗಳನ್ನು ಕೂಡ ಉಗ್ರಗಾಮಿ ಚಟುವಟಿಕೆಗಳಂತೆ ಬಲಪ್ರಯೋಗದಿಂದ ದಮನಿಸಬೇಕೆಂಬ ಕಠಿಣ ಧೋರಣೆ ಮತ್ತು ಎಲ್ಲಾ ರಾಜಕೀಯ ಮಾತುಕತೆಗಳನ್ನು ಕೈಬಿಟ್ಟಿದ್ದು ರಾಜ್ಯದಲ್ಲಿ ಪರಿಸ್ಥಿತಿಯನ್ನು ಹದಗೆಡಿಸಿತು. ಕಳೆದ ಕೆಲವು ವರ್ಷಗಳಲ್ಲಿ ಸ್ಥಳೀಯ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಉಗ್ರಗಾಮಿ ಸಂಘಟನೆಗಳನ್ನು ಸೇರಿದ್ದಾರೆ. ಭದ್ರತಾ ಪಡೆಗಳ ಸಿಬ್ಬಂದಿ ಮತ್ತು ಉಗ್ರಗಾಮಿಗಳ ಸಾವಿನ ಸಂಖ್ಯೆಯಲ್ಲಿ ಏಕಪ್ರಕಾರದ ಏರಿಕೆಯಾಗಿರುವುದನ್ನು ಅಂಕಿ ಸಂಖ್ಯೆಗಳು ಹೇಳುತ್ತವೆ.

ವಿಶಾಲ ಬಂದೀಖಾನೆ

ಜಮ್ಮು ಮತ್ತು ಕಾಶ್ಮೀರದ ಸ್ಥಾನಮಾನ ಬದಲಾಯಿಸುವುದಕ್ಕೆ ಸಂಬಂಧಿಸಿ ಸಂಸತ್ತಿನಲ್ಲಿ ಸಾಂವಿಧಾನಿಕ ಬದಲಾವಣೆಗಳನ್ನು ತರುವ ಮುನ್ನ ಕೇಂದ್ರ ಸರಕಾರ ರಾಜ್ಯದಲ್ಲಿ ಭಾರೀ ಭದ್ರತಾ ಕಾರ್ಯಾಚರಣೆ ನಡೆಸಿತು. ಇದು ಕಾಶ್ಮೀರ ಜನತೆಯ ಬಗ್ಗೆ ಬಿಜೆಪಿ ಆಡಳಿತಗಾರರಿಗಿರುವ ವೈರ ಭಾವದ ದ್ಯೋತಕವಾಗಿದೆ. ಕೇಂದ್ರೀಯ ಸಶಸ್ತ್ರ ಪಡೆಗಳು ಮತ್ತು ಸೈನ್ಯದ ಹತ್ತಾರು ಸಾವಿರ ಸಿಬ್ಬಂದಿ ಹಾಗೂ ಸೈನಿಕರನ್ನು ವಿಮಾನಗಳ ಮೂಲಕ ರಾಜ್ಯಕ್ಕೆ ಕಳಿಸಲಾಯಿತು. ಪ್ರಮುಖ ರಾಜಕೀಯ ಪಕ್ಷಗಳ ಮುಖಂಡರನ್ನು ಬಂಧಿಸಲಾಯಿತು. ಇಂಟರ್‌ನೆಟ್ ಮತ್ತು ಮೊಬೈಲ್ ಫೋನ್ ಸೇವೆಗಳನ್ನು ಸ್ಥಗಿತಗೊಳಿಸಿ ಮಾಹಿತಿ ಪ್ರಸಾರರವನ್ನು ನಿರ್ಬಂಧಿಸಲಾಯಿತು. ಅಮರನಾಥ ಯಾತ್ರೆಯನ್ನು ರದ್ದುಪಡಿಸಲಾಯಿತು. ಪ್ರವಾಸಿಗಳನ್ನು ವಾಪಸ್ ಕಳಿಸಲಾಯಿತು. ಕಾಶ್ಮೀರ ಒಂದು ವಿಶಾಲ ಬಂದೀಖಾನೆಯಾಯಿತು. ಜನತಾಂತ್ರಿಕವಾಗಿ ಚುನಾಯಿತವಾದ ಸರಕಾರವೊಂದು ಒಂದು ರಾಜ್ಯದ ನಾಗರಿಕರನ್ನು, ಯಾರ ಹೆಸರಲ್ಲಿ ಅವರ ಬದುಕುಗಳಲ್ಲಿ ತೀವ್ರ ಬದಲಾವಣೆಗಳನ್ನು ತರಲು ಹೊರಟಿತ್ತೋ ಆ ಜನಗಳನ್ನು ಈ ರೀತಿ ನಡೆಸಿಕೊಳ್ಳಲಾಯಿತು.

ಕಪಟ ತರ್ಕಗಳು

370ನೇ ವಿಧೀಯನ್ನು ರದ್ದುಪಡಿಸುವ ಸಂಬಂಧ ಗೃಹ ಸಚಿವ ಅಮಿತ್ ಷಾ ಸಂಸತ್ತಿನಲ್ಲಿ ಮಂಡಿಸಿದ ವಾದಗಳು ಹಳಸಲಾದ, ಹಿಂದುತ್ವ ಶಿಬಿರಕ್ಕೆ ಅನುಕೂಲವಾದ ವಾದಗಳೇ ಆಗಿವೆ. 370ನೇ ವಿಧಿಯು ಜಮ್ಮು ಮತ್ತು ಕಾಶ್ಮೀರವನ್ನು ಭಾರತದಲ್ಲಿ ಸಮಗ್ರಗೊಳಿಸುವುದನ್ನು ತಡೆಯುತ್ತದೆ ಎಂದು ಷಾ ಹೇಳಿದರು. ವಾಸ್ತವವಾಗಿ, ಕಾಶ್ಮೀರದ ಜನರು ಮನಃಪೂರ್ವಕವಾಗಿಯೇ ಭಾರತದ ಒಕ್ಕೂಟವನ್ನು ಸೇರಿದ್ದರು. 370ನೇ ವಿಧಿಯಲ್ಲಿ ಆನಂತರ ಅಡಕಗೊಳಿಸಲಾದ ಆಶ್ವಾಸನೆಗಳ ಆಧಾರದಲ್ಲಿ ಅವರು ಭಾರತ ಒಕ್ಕೂಟವನ್ನು ಸೇರಿದ್ದರು. ಸಾಂವಿಧಾನಿಕವಾದ ಈ ಭದ್ರತೆಯ ಖಾತರಿಯೇ ತಮ್ಮ ಭವಿಷ್ಯ ಭಾರತದಲ್ಲಿ ಅಡಗಿದೆ ಎಂಬ ಭರವಸೆಯನ್ನು ಭಾರತ ಕಾಶ್ಮೀರಿ ಜನತೆಗೆ ನೀಡಿತ್ತು.

370ನೇ ವಿಧಿಯು ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರತ್ಯೇಕತೆಯನ್ನು ಸೃಷ್ಟಿಸಿದೆ ಎಂದು ಷಾ ಹೇಳಿದ್ದಾರೆ. ನಿಜ ಹೇಳಬೇಕೆಂದರೆ, 370ನೇ ವಿಧಿಯಡಿ ನೀಡಲಾದ ಸ್ವಾಯತ್ತತೆಯನ್ನು ದುರ್ಬಲಗೊಳಿಸಿದ್ದು ಮತ್ತು ಅತೃಪ್ತಿ ಹಾಗೂ ಪರಕೀಯ ಭಾವ ಮೂಡಲು ಕಾರಣವಾದ ಪ್ರಜಾಪ್ರಭುತ್ವದ ಬರ್ಬರ ದಮನವೇ ಪಾಕಿಸ್ತಾನ ಪ್ರೇರಿತ ಪ್ರತ್ಯೇಕತೆ ಮತ್ತು ಭಯೋತ್ಪಾದನೆ ಹೆಚ್ಚಲು ಕಾರಣವಾಗಿದೆ. ಸ್ವಾಯತ್ತತೆ ಮತ್ತು ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವ ಮೂಲಕ ಮಾತ್ರವೇ ಜನರಲ್ಲಿನ ಪರಕೀಯತೆಯ ಭಾವನೆಯನ್ನು ನಿವಾರಿಸಬಹುದಿತ್ತು.

ರಾಜ್ಯದಲ್ಲಿನ ಬೆಳವಣಿಗೆ ಮತ್ತು ಆರ್ಥಿಕ ಪ್ರಗತಿಯ ಕುಂಠಿತಕ್ಕೆ 370ನೇ ವಿಧಿ ಹೊಣೆಯೆಂದು ಅಮಿತ್ ಷಾ ಆರೋಪಿಸಿದ್ದಾರೆ. ಕಳೆದ ಮೂರು ದಶಕಗಳಲ್ಲಿ ಹೆಚ್ಚಿದ ಉಗ್ರಗಾಮಿತ್ವ ಮತ್ತು ಹೆಚ್ಚಿದ ಪ್ರಕ್ಷುಬ್ಧ ಸ್ಥಿತಿಯೇ ಅಭಿವೃದ್ಧಿಗೆ ಮತ್ತು ಆರ್ಥಿಕ ಬೆಳವಣಿಗೆಯ ಅವಕಾಶಗಳಿಗೆ ಅಡ್ಡಿಯಾಗಿದೆ. ರಾಜ್ಯದಲ್ಲಿ ಅಭಿವೃದ್ಧಿ, ಉದ್ಯೋಗಾವಕಾಶ ಮತ್ತು ಖಾಸಗಿ ಬಂಡವಾಳ ಹೂಡಿಕೆಯ ಪರ್ವ ಸಾಧ್ಯ ಎಂಬ ಅಮಿತ್ ಷಾ ದಾವೆ ಒಂದು ರಾಜಕೀಯ ಪರಿಹಾರಕ್ಕೆ ಬಾರದೆ ಹಾಗೂ ಶಾಂತಿ ಮತ್ತು ಸಹಜತೆಯನ್ನು ಮರಳಿ ಸ್ಥಾಪಿಸದೆಯೇ ಕೇವಲ ಕಲ್ಪನಾ ಲಹರಿಯಷ್ಟೇ ಎನ್ನುವುದನ್ನು ಮರೆಯಬಾರದು.

ಅಂತಿಮವಾಗಿ, ರಾಜ್ಯದಲ್ಲಿ ವ್ಯಾಪಕ ಭ್ರಷ್ಟಾಚಾರ ಮತ್ತು ಸಾರ್ವಜನಿಕ ಹಣ ಲೂಟಿಗೆ 370ನೇ ವಿಧಿಯೇ ಕಾರಣ ಎಂದು ಷಾ ಹೇಳಿದ್ದಾರೆ. ಜಮ್ಮು ಮತ್ತು ಕಾಶ್ಮೀರ ಭ್ರಷ್ಟಾಚಾರ ಮತ್ತು ಲಂಚಕೋರ ಆಡಳಿತದಿಂದ ನಲುಗುತ್ತಿದೆ ಎನ್ನುವುದು ನಿಜ. ಆದರೆ ಇಂಥ ಪರಿಸ್ಥಿತಿಯು ವಿಶ್ವಾಸಾರ್ಹತೆ ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳ ಕೊರತೆಯ ಫಲ ಎಂಬುದನ್ನು ಮರೆಯಬಾರದು. ಜಮ್ಮು ಮತ್ತು ಕಾಶ್ಮೀರ ಹೆಚ್ಚು ಕಮ್ಮಿ ಒಂದು ಪೊಲೀಸ್ ಪ್ರಭುತ್ವವಾಗಿದೆ ಮತ್ತು ಹತ್ತು ವರ್ಷಗಳಷ್ಟು ದೀರ್ಘ ಕಾಲ ಕೇಂದ್ರದ ಆಡಳಿತಕ್ಕೆ ಒಳಪಟ್ಟಿದೆ. ಕೇಂದ್ರೀಕೃತ ಆಡಳಿತಶಾಹಿ-ಭದ್ರತಾ ವ್ಯವಸ್ಥೆ ಮತ್ತು ಅವುಗಳ ರಾಜಕೀಯ ಸಹಚರರು ರಾಜ್ಯದಲ್ಲಿ ಭ್ರಷ್ಟಾಚಾರದ ಪ್ರಮುಖ ಮೂಲಗಳು.

ಸಂವಿಧಾನಿಕ ವಂಚನೆ

ಸಂವಿಧಾನದ ವಿರುದ್ಧ ಮೋದಿ ಸರಕಾರ ಮಾಡಿದ ಈ ಕ್ಷಿಪ್ರಕ್ರಾಂತಿಯ ರೀತಿಯು ಈಗ ದೇಶದಲ್ಲಿ ಪ್ರತಿಷ್ಠಾಪನೆಯಾಗಿರುವ ಸರ್ವಾಧಿಕಾರಶಾಹಿ ಆಳ್ವಿಕೆಯ ಸಂಕೇತವಾಗಿದೆ. 370ನೇ ವಿಧಿಯನ್ವಯ ಒಂದು ರಾಷ್ಟ್ರಪತಿ ಆದೇಶದ ಮೂಲಕ ಸಂವಿಧಾನದ ಇನ್ನೊಂದು ವಿಧಿಯನ್ನು ಅಂದರೆ 367ನೇ ವಿಧಿಯನ್ನು ಬದಲಾಯಿಸಲು ಬಳಸಲಾಯಿತು. 370ನೇ ವಿಧಿಯ ಸಾರವನ್ನೇ ಹಿಂಪಡೆಯಲು ಅದನ್ನು ಬಳಸಲಾಯಿತು. ಈ ಕುತಂತ್ರದ ಮೂಲಕವಾಗಿ, ರಾಜ್ಯವು ರಾಷ್ಟ್ರಪತಿ ಶಾಸನದಲ್ಲಿರುವುದರಿಂದ ರಾಜ್ಯ ಶಾಸಕಾಂಗದ ಅಧಿಕಾರವನ್ನು ಕಸಿಯಲಾಯಿತು.

ಆಳುವ ಪಕ್ಷದ ಕಾರ್ಯತಂತ್ರಗಳು ಮತ್ತು ಮೋದಿ ಸರಕಾರದ ಬಲವಂತದ ಅಧಿಕಾರಗಳು ಪ್ರತಿಪಕ್ಷಗಳ ಮೇಲೆ ಹೇಗೆ ಪರಿಣಾಮ ಉಂಟುಮಾಡುತ್ತಿವೆ ಎನ್ನುವುದನ್ನೂ ಈ ಸಂದರ್ಭದಲ್ಲಿ ಗಮನಿಸಬೇಕು. ಪ್ರಾದೇಶಿಕ ಪಕ್ಷಗಳಾದ ಬಿಜೆಡಿ, ವೈಎಸ್‌ಆರ್‌ಸಿಪಿ, ಟಿಡಿಪಿ, ಟಿಆರ್‌ಎಸ್ ಮತ್ತು ಇತರ ಪಕ್ಷಗಳು ಒಕ್ಕೂಟತ್ವ-ವಿರೋಧಿ ಕ್ರಮಗಳಿಗೆ ಬೆಂಬಲ ನೀಡಿದವು ಎನ್ನುವುದರಿಂದ ಇದು ಗೊತ್ತಾಗುತ್ತದೆ. ಇದು ತಮ್ಮ ಕಾಲ ಮೇಲೆ ತಾವೇ ಕೊಡಲಿ ಹಾಕಿಕೊಂಡ ಗಾದೆಯಂತಾಗಿದೆ.

370ನೇ ವಿಧಿಯನ್ವಯ ನೀಡಲಾದ ಸ್ವಾಯತ್ತತೆಯನ್ನು ದುರ್ಬಲಗೊಳಿಸುವಲ್ಲಿ ಮೂಲ ಅಪರಾಧಿಯಾದ ಕಾಂಗ್ರೆಸ್ ಪಕ್ಷವು ಸದನದಲ್ಲಿ ಒಡೆದ ಮನೆಯಂತೆ ಕಂಡಿತು ಹಾಗೂ ಪ್ರತಿರೋಧ ಒಡ್ಡುವಲ್ಲಿ ಪರಿಣಾಮಕಾರಿಯಾಗಿರಲಿಲ್ಲ.

ದೀರ್ಘ ಹೋರಾಟ ಮುಂದಿದೆ

ರಾಷ್ಟ್ರಪತಿ ಆದೇಶ ಮತ್ತು ಅಂಗೀಕರಿಸಲಾದ ಮಸೂದೆಗಳ ವಿರುದ್ಧ ನ್ಯಾಯಾಲಯದಲ್ಲಿ ಪ್ರಶ್ನಿಸುವ ಅವಕಾಶ ಇದ್ದೇ ಇದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಕಾಶ್ಮೀರ ಜನತೆಗೆ ನೀಡಲಾದ ಆಶ್ವಾಸನೆಗೆ ವಿಶ್ವಾಸದ್ರೋಹ ಬಗೆದದ್ದರ ವಿರುದ್ಧ ದೀರ್ಘ ಹೋರಾಟ ನಡೆಯಲಿದೆ. ಇದು ಕೇವಲ ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ್ದಲ್ಲ, ಇದು ಭಾರತದಲ್ಲಿ ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವವನ್ನು ರಕ್ಷಿಸುವ ಹೋರಾಟವಾಗಿದೆ.

ಸಂವಿಧಾನದ 370ನೇ ವಿಧಿಯನ್ವಯ ಜಮ್ಮು ಮತ್ತು ಕಾಶ್ಮೀರಕ್ಕೆ ಕೊಡಮಾಡಲಾದ ಸ್ವಾಯತ್ತತೆಯನ್ನು ರಕ್ಷಿಸಲು ಸಿಪಿಐ (ಎಂ) ಸತತವಾಗಿ ಹೋರಾಡುತ್ತಾ ಬಂದಿದೆ. ಆ ಸ್ವಾಯತ್ತತೆ ಮತ್ತು 370ನೇ ವಿಧಿಯಡಿಯ ಅಧಿಕಾರಗಳನ್ನು ದುರ್ಬಲಗೊಳಿಸುವುದನ್ನು ಸಿಪಿಐ (ಎಂ) ವಿರೋಧಿಸಿದೆ. ಬಿಜೆಪಿ ತಳೆದಿರುವ ನಿಲುವಿಗೆ ತದ್ವಿರುದ್ಧವಾಗಿ, ರಾಜ್ಯಕ್ಕೆ ಗರಿಷ್ಠ ಸ್ವಾಯತ್ತತೆ ಮತ್ತು ಅದರಡಿ ಬರುವ ಜಮ್ಮು, ಕಣಿವೆ ಮತ್ತು ಲಡಾಖ್ ಪ್ರದೇಶಗಳಿಗೆ ಪ್ರಾದೇಶಿಕ ಸ್ವಾಯತ್ತತೆ ಒದಗಿಸಬೇಕೆಂದು ಸಿಪಿಐ(ಎಂ) ಪ್ರತಿಪಾದಿಸುತ್ತಾ ಬಂದಿದೆ. ಉಗ್ರಗಾಮಿಗಳ ಸಶಸ್ತ್ರ ಹಿಂಸಾಚಾರವನ್ನು ವಿರೋಧಿಸುತ್ತಲೇ ಗಡಿಯಾಚೆಗಿನ ಭಯೋತ್ಪಾದನೆ ತಡೆಯಲು ದೃಢ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವಾಗಲೇ ಒಂದು ರಾಜಕೀಯ ಇತ್ಯರ್ಥಕ್ಕಾಗಿ ರಾಜ್ಯದೊಳಗಿನ ಎಲ್ಲಾ ಬಗೆಯ ರಾಜಕೀಯ ಅಭಿಪ್ರಾಯ ಹೊಂದಿರುವವರೊಂದಿಗೆ ರಾಜಕೀಯ ಸಂವಾದವನ್ನು ನಡೆಸಬೇಕೆಂದು ಪಕ್ಷ ಕರೆ ನೀಡುತ್ತಾ ಬಂದಿದೆ.

ಸಂವಿಧಾನದ 370ನೇ ವಿಧಿಯನ್ನು ರದ್ದುಪಡಿಸಿ ಜಮ್ಮು ಮತ್ತು ಕಾಶ್ಮೀರವನ್ನು ವಿಲೀನಗೊಳಿಸುವ ಬಿಜೆಪಿ ಸರಕಾರದ ಕ್ರಮಕ್ಕೆ ವಿವಿಧ ಜನ ವಿಭಾಗಗಳಿಂದ ಬೆಂಬಲ ವ್ಯಕ್ತವಾಗಿದೆ. ಇದು, ಪ್ರತ್ಯೇಕತಾವಾದ ಮತ್ತು ಭಯೋತ್ಪಾದನೆಯನ್ನು ತೊಡೆದುಹಾಕಲು ನಿರ್ಣಾಯಕವಾದ ಮಾರ್ಗವೆಂದು ಕಾಣಲಾಗುತ್ತಿದೆ. ಮೋದಿ ಸರಕಾರ ಪ್ರಚುರಪಡಿಸುತ್ತಿರುವ ಈ ಅಧಿಕೃತ ಕಥನಕ್ಕೆ ಹಲವರು ಮಾರುಹೋಗಿದ್ದಾರೆ. ಆದರೆ ಇದರಿಂದ ಜಮ್ಮು ಮತ್ತು ಕಾಶ್ಮೀರ ಮತ್ತು ಇಡಿಯಾಗಿ ದೇಶದ ಮೇಲೆ ದೀರ್ಘಕಾಲದಲ್ಲಾಗುವ ಅಪಾಯಕಾರಿ ಪರಿಣಾಮ ಏನೆಂಬುದು ಜನರ ಮುಂದೆ ಬಂದಿಲ್ಲ.

ಜಮ್ಮು ಮತ್ತು ಕಾಶ್ಮೀರದ ಜಾತ್ಯತೀತ ಮತ್ತು ಸಮ್ಮಿಶ್ರತೆಯ ಪರಂಪರೆಯನ್ನು ರಕ್ಷಿಸುವ ಹೋರಾಟವನ್ನು ಇಡಿಯಾಗಿ ಹಿಂದುತ್ವ ಸರ್ವಾಧಿಕಾರಶಾಹಿಯ ವಿರುದ್ಧದ ಮತ್ತು ಭಾರತದಲ್ಲಿ ಪ್ರಜಾಪ್ರಭುತ್ವ, ಜಾತ್ಯತೀತತೆ ಹಾಗೂ ಒಕ್ಕೂಟ ತತ್ವವನ್ನು ರಕ್ಷಿಸುವ ಹೋರಾಟದೊಂದಿಗೆ ಬೆಸೆಯುವ ಈ ಕೆಲಸವನ್ನು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಕೈಗೆತ್ತಿಕೊಳ್ಳಬೇಕಾಗಿದೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್

ಭಾರತೀಯ ಪ್ರಭುತ್ವ ಮತ್ತು ಕಾಶ್ಮೀರಿ ಜನರ ಪ್ರತಿನಿಧಿಗಳ ನಡುವೆ ಆದ ಒಪ್ಪಂದವನ್ನು 370ನೇ ವಿಧಿ ಪ್ರತಿನಿಧಿಸುತ್ತದೆ. ತಮ್ಮ ಅಸ್ಮಿತೆ ಮತ್ತು ಕಶ್ಮೀರಿಯತ್ ಎಂದು ಹೇಳಲಾಗುವ ಅವರದೇ ಆದ ಜೀವನಶೈಲಿಯನ್ನು ಉಳಿಸಿಕೊಳ್ಳುವ ಕಾಶ್ಮೀರಿ ಜನತೆಯ ಆಶೋತ್ತರಗಳನ್ನು ಅದು ಒಳಗೊಂಡಿತ್ತು. ಈ ಬದ್ಧತೆಯಿಂದ ಹಿಂದೆ ಸರಿದಿದ್ದೇ ಕಾಶ್ಮೀರ ಸಮಸ್ಯೆಗೆ ಮೂಲ ಕಾರಣವಾಗಿದೆ. 1953ರ ನಂತರ ಸತತವಾಗಿ ಕೇಂದ್ರದಲ್ಲಿನ ಕಾಂಗ್ರೆಸ್ ಸರಕಾರಗಳು 370ನೇ ವಿಧಿಯನ್ವಯ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ಸ್ವಾಯತ್ತತೆಯನ್ನು ದುರ್ಬಲಗೊಳಿಸಲು ಕ್ರಮಗಳನ್ನು ಕೈಗೊಳ್ಳತೊಡಗಿದವು. ಕಾನೂನು ತಜ್ಞ ಎ.ಜಿ. ನೂರಾನಿ ಅವರು ಸಮರ್ಥವಾಗಿ ದಾಖಲೀಕರಿಸಿರುವಂತೆ, ಕೇಂದ್ರೀಕರಣ ಪ್ರಕ್ರಿಯೆ ಮೂಲಕ 370ನೇ ವಿಧಿಯ ಮೂಲ ಆಶಯವನ್ನು ದುರ್ಬಲಗೊಳಿಸಲಾಯಿತು.

ನವ ಉದಾರವಾದದ ಅಡಿಯಲ್ಲಿ ರಾಜಕೀಯವೂ ಸರಕಾಗುತ್ತಿದೆ



ಶಿಕ್ಷಣವು ಸರಕೀಕರಣಗೊಂಡ ರೀತಿಯಲ್ಲಿಯೇ, ಭಾರತದಲ್ಲಿ ರಾಜಕೀಯ ಜಗತ್ತಿನ ಸರಕೀಕರಣವು ಮುಂದುವರೆದ ಬಂಡವಾಳಶಾಹಿ ದೇಶಗಳಿಗಿಂತಲೂ ಹೆಚ್ಚು ಮುಂದೆ ಹೋಗಿದೆ, ಅದೂ ಬಹಳ ಕಡಿಮೆ ಅವಧಿಯಲ್ಲಿ. ಬದುಕಿನ ಸಮಸ್ತ ಆಯಾಮಗಳ ಮೇಲೆ ನವ ಉದಾರ ಬಂಡವಾಳಶಾಹಿಯ ಹಿಡಿತವೇ ಇದಕ್ಕೆ ಪ್ರಧಾನ ಹೊಣೆಗಾರನಾಗುತ್ತದೆ. ಆದರೆ, ಇಂತಹ ಒಂದು ಸಾಮಾನ್ಯ ಪರಿಸರದಲ್ಲಿ, ಕಾರ್ಪೋರೇಟ್ ಮತ್ತು ಪ್ರಭುತ್ವ ಇವುಗಳ ಶಕ್ತಿಗೆ ಬೆಸುಗೆ ಹಾಕಿರುವ ಬಿಜೆಪಿಯು ಅದನ್ನು ಹಿಂದೆಂದಿಗಿಂತಲೂ ಬಹಳ ದೊಡ್ಡ ಮಟ್ಟದಲ್ಲಿ ಮತ್ತು ಬಹಳ ದೂರಕ್ಕೆ ಕೊಂಡೊಯ್ದಿದೆ. ಯುದ್ಧ ವಿಮಾನ ರಫೇಲ್ ಖರೀದಿ ಪ್ರಕರಣವು ಈ ಬೆಸುಗೆಯ ಒಂದು ಆಯಾಮವಾದರೆ, ರಾಜಕೀಯ ಪಕ್ಷಗಳಿಗೆ ಕಾರ್ಪೋರೇಟ್‌ಗಳು ಕೊಟ್ಟ ದೇಣಿಗೆಯಲ್ಲಿ ಶೇ.92ರಷ್ಟನ್ನು ಬಿಜೆಪಿ ಒಂದೇ ಪಡೆದಿರುವುದು ಈ ಬೆಸುಗೆಯ ಇನ್ನೊಂದು ಆಯಾಮ. ಇದಕ್ಕೆ ಮುಖಾ ಮುಖಿಯಾಗಿ ಒಂದು ಗಮನಾರ್ಹ ವ್ಯತ್ಯಾಸವುಳ್ಳ ದೃಶ್ಯವನ್ನು ವೆನಿಜುವೆಲಾದಲ್ಲಿ ಕಾಣಬಹುದು. ಅಮೇರಿಕನ್ ಸಾಮ್ರಾಜ್ಯಶಾಹಿಯ ಸತತ ಪ್ರಯತ್ನಗಳ ಬಳಿಕವೂ ವೆನಿಜುವೆಲಾದಲ್ಲಿ ರಾಜಕೀಯದ ಸರಕೀಕರಣವು ಮುನ್ನಡೆ ಸಾಧಿಸಲಾಗಿಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್


ಬದುಕಿನ ಸಮಸ್ತ ಆಯಾಮಗಳನ್ನು ಒಂದು ಸರಕಿನ ಮಟ್ಟಕ್ಕೆ ಇಳಿಸುವಂತಹ ಒಂದು ಪ್ರವೃತ್ತಿಯೂ ಬಂಡವಾಳದಲ್ಲಿ ಅಂತರ್ಗತವಾಗಿದೆ. ನವ ಉದಾರ ಬಂಡವಾಳಶಾಹಿಯ ಅಡಿಯಲ್ಲಿ ಸರಕೀಕರಣಗೊಳಿಸುವ ಬಂಡವಾಳದ ಈ ಪ್ರವೃತ್ತಿಗೆ ಸಂಪೂರ್ಣ ಅವಕಾಶ ಕಲ್ಪಿಸಲಾಗಿದೆ. ಬದುಕಿನ ಒಂದೊಂದೇ ಆಯಾಮವನ್ನೂ ಈ ಸರಕೀಕರಣವು ಹೊಸ ಹೊಸದಾಗಿ ಆವರಿಸಿ ಅದರ ಮೇಲೆ ಹಿಡಿತ ಸಾಧಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಬಹಳ ವೇಗವಾಗಿ ಶಿಕ್ಷಣ ಸರಕೀಕರಣಗೊಂಡಿರುವುದು ಇತ್ತೀಚಿನ ಒಂದು ಉದಾಹರಣೆ. ಈಗ, ರಾಜಕೀಯ ಜಗತ್ತು ಹಿಂದೆಂದಿಗಿಂತಲೂ ಹೆಚ್ಚಿನ ಮಟ್ಟದ ಸರಕೀಕರಣಕ್ಕೆ ಒಳಗಾಗಿರುವುದನ್ನು ನಾವು ಕಾಣುತ್ತಿದ್ದೇವೆ.

ರಾಜಕೀಯದ ಸರಕೀಕರಣ ಕೆಲವು ಸಮಯದಿಮದ ನಡೆಯುತ್ತಲೇ ಇದೆ. ಆದರೆ ಸುಮಾರಾಗಿ ಎಲ್ಲ ರಾಜ್ಯಗಳಲ್ಲೂ ನಡೆದಿರುವ ಶಾಸಕರ ಖರೀದಿ ಅದನನು ಒಂದು ಉತ್ತುಂಗವನ್ನೇ ತಲುಪಿಸಿದೆ. ಕರ್ನಾಟಕ ಅದರ ಇತ್ತೀಚಿನ ಉದಾಹರಣೆ. ಜನ ಯಾವ ಪಕ್ಷದ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಿರಲಿ, ಕೊನೆಯಲ್ಲಿ, ಅಪಾರ ಹಣ ಬಲವುಳ್ಳ ಪಕ್ಷವೇ ಸರ್ಕಾರ ರಚಿಸುತ್ತದೆ; ಮತ್ತು, ಮೊದಲಿಗೆ ಜನ ಯಾರನ್ನು ಶಾಸಕನನ್ನಾಗಿ ಆಯ್ಕೆ ಮಾಡುತ್ತಾರೆ ಎಂಬುದೇ, ಬಹು ಮಟ್ಟಿಗೆ, ಚುನಾವಣೆಯಲ್ಲಿ ಯಾವ ಪಕ್ಷ ಅತಿ ಹೆಚ್ಚು ಹಣ ಖರ್ಚು ಮಾಡಿದೆ ಎಂಬುದನ್ನು ಅವಲಂಬಿಸಿದೆ.

ಪಾರಂಪರಿಕ ಮಾರ್ಕ್ಸ್‌ವಾದಿ ತಿಳುವಳಿಕೆಯ ಪ್ರಕಾರ, ಒಂದು ಬೂರ್ಜ್ವಾ ಪ್ರಭುತ್ವವು ಪಾರ್ಲಿಮೆಂಟರಿ ಪದ್ಧತಿಯ ಸರ್ಕಾರವನ್ನು ಹೊಂದಿರಬಹುದು, ಏಕೆಂದರೆ, ಪ್ರಭುತ್ವದ ಅಂಗ ಸಂಸ್ಥೆಗಳಾದ ಸೇನೆ ಮತ್ತು ಅಧಿಕಾರ ವರ್ಗ ಇವು ಶ್ರಮಿಕರಿಗೆ ಸ್ಪಂದಿಸುವಂತಹ ಒಂದು ಸರ್ಕಾರವು ಆರಿಸಿ ಬಂದಾಗಲೂ ಮೊದಲಿನ ಹಾಗೆಯೇ ಇರುತ್ತವೆ. ಕಾರ್ಮಿಕ ವರ್ಗದ ಸರ್ಕಾರವೇ ಅಧಿಕಾರಕ್ಕೆ ಬಂದರೂ ಸಹ, ಅದು ತನ್ನ ಅಧಿಕಾರವನ್ನು ಬಳಸಿಕೊಂಡು ಬೂರ್ಜ್ವಾ ಪ್ರಭುತ್ವವನ್ನು ಪುಡಿ ಪಡಿ ಮಾಡದ ಹೊರತು, ಅದು ಬಂಡವಾಳಶಾಹಿ ಪದ್ಧತಿಯ ಮುಂದುವರಿಕೆಗೆ ಚ್ಯುತಿ ಉಂಟಾಗದಂತಹ ಒಂದು ಮಿತಿಯೊಳಗೆ ಕಾರ್ಯ ನಿರ್ವಹಿಸಬೇಕಾಗುತ್ತದೆ – ಗತ್ಯಂತರವಿಲ್ಲದೆ. ಆದರೆ ಈಗ ರಾಜಕೀಯದ ಸರಕೀಕರಣವೂ ಪಾರ್ಲಿಮೆಂಟರಿ ಚುನಾವಣೆಗಳ ಮೂಲಕ ಕಾರ್ಮಿಕ ವರ್ಗದ ಪಕ್ಷ ಅಧಿಕಾರಕ್ಕೇ ಬಾರದಂತೆ ಖಾತ್ರಿ ಪಡಿಸಿಕೊಳ್ಳುತ್ತದೆ; ಅದರ ಬಳಿ ಚುನಾವಣೆ ಗೆಲ್ಲುವಷ್ಟು ಹಣವೇ ಇಲ್ಲ. ಹಾಗಾಗಿ, ಪಾರ್ಲಿಮೆಂಟರಿ ಪ್ರಜಾಪ್ರಭುತ್ವವು, ಕಾರ್ಪೊರೇಟ್ ಕುಳಗಳೇ ಹೆಕ್ಕಿ ತೆಗೆದ ರಾಜಕೀಯ ಪಡೆಗಳ ಮೂಲಕ ಕಾರ್ಪೊರೇಟ್–ಹಣಕಾಸು ಕುಳಗಳೇ ನಡೆಸುವ ನೇರ ಆಡಳಿತವಾಗಿಯೇ ಮಾರ್ಪಾಡಾಗುತ್ತದೆ.

ದಿಲ್ಲಿ ಮೂಲದ ಸೆಂಟರ್ ಫಾರ್ ಮೀಡಿಯಾ ಸ್ಟಡೀಸ್ ಎಂಬ ಒಂದು ಸರ್ಕಾರೇತರ ಸಂಸ್ಥೆಯ ಪ್ರಕಾರ, ಇತ್ತೀಚಿನ ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಬಿಜೆಪಿಯು 27,000 ಕೋಟಿ ರೂ.ಗಳಷ್ಟು ಭಾರಿ ಮೊತ್ತದ ಹಣ ಖರ್ಚು ಮಾಡಿದೆ, ಅಥವಾ ಒಂದು ಕ್ಷೇತ್ರದಲ್ಲಿ ಸುಮಾರು 50 ಕೋಟಿಯಷ್ಟು. ಇದು, ಎಲ್ಲಾ ಪಕ್ಷಗಳು ಖರ್ಚುಮಾಡಿದ ಒಟ್ಟು 60,000 ಕೋಟಿ ರೂಗಳ ಶೇ.45ರಷ್ಟಾಗುತ್ತದೆ. ಚುನಾವಣೆಯಲ್ಲಿ ಬೇರೆ ಬೇರೆ ಪಕ್ಷಗಳು ಖರ್ಚು ಮಾಡಿದ ಹಣ ಬಹುತೇಕ ದೊಡ್ಡ ದೊಡ್ಡ ಕಾರ್ಪೊರೇಟ್‌ಗಳ ಕೊಡುಗೆಯೇ. ಅದರಲ್ಲಿ ಬಿಜೆಪಿಯೇ ಸಿಂಹ ಪಾಲು ಪಡೆದಿದೆ. ದಿಲ್ಲಿ ಮೂಲದ ಅಸೋಸಿಏಷನ್ ಫಾರ್ ಡೆಮೊಕ್ರಾಟಿಕ್ ರಿಫಾರ್ಮ್ಸ್ ಎಂಬ ಇನ್ನೊಂದು ಸರ್ಕಾರೇತರ ಸಂಸ್ಥೆಯ ಪ್ರಕಾರ, 2017–18ರಲ್ಲಿ, 20,000 ರೂಗಳಿಗಿಂತಲೂ ಹೆಚ್ಚಿನ ಮೊತ್ತದ ರಾಜಕೀಯ ದೇಣಿಗಳಲ್ಲಿ ಬಿಜೆಪಿಯು ಶೇ.92ರಷ್ಟನ್ನು ಪಡೆದಿದೆ.

ಕಾನೂನಿನಲ್ಲಿನ ಎರಡು ತೂತುಗಳು ಇಂತಹ ಅಗಾಧ ಪ್ರಮಾಣದ ಚುನಾವಣಾ ವೆಚ್ಚವನ್ನುಸಾಧ್ಯಗೊಳಿಸುತ್ತವೆ. ಮೊದಲನೆಯದು ಚುನಾವಣಾ ಬಾಂಡ್‌ಗಳು. ಈ ಚುನಾವಣಾ ಬಾಂಡ್‌ಗಳ ಯೋಜನೆಯನ್ನು ಬಿಜೆಪಿ ತಂದದ್ದು ಆಶ್ಚರ್ಯವೇನಲ್ಲ. ಯಾರು ಎಷ್ಟು ಮೊತ್ತದ ಚುನಾವಣಾ ಬಾಂಡ್‌ಗಳನ್ನು ಯಾರಿಗೆ ಕೊಟ್ಟರು ಎಂಬುದನ್ನು ಬಹಿರಂಗಪಡಿಸುವಂತಿಲ್ಲ. ಎರಡನೆಯದು, ಯಾವುದೇ ಒಂದು ಪಕ್ಷದ ಅಭ್ಯರ್ಥಿಯು ಚುನಾವಣೆಯಲ್ಲಿ ಮಾಡುವ ಖರ್ಚಿಗೆ ಮಿತಿ ಇದೆಯಾದರೂ ಸಹ, ಆ ಅಭ್ಯರ್ಥಿಯ ಚುನಾವಣಾ ಖರ್ಚಿನಲ್ಲಿ, ಅಭ್ಯರ್ಥಿಯು ಸ್ವತಃ ಮಾಡಿದ ಖರ್ಚಿನೊಂದಿಗೆ ಅದೇ ಅಭ್ಯರ್ಥಿಯ ಪಕ್ಷವು ಖರ್ಚು ಮಾಡಿದ ಹಣವನ್ನು ಸೇರಿಸುವಂತಿಲ್ಲ. ಹಾಗಾಗಿ, ಅಪಾರ ಹಣ ಬಲವುಳ್ಳ ಪಕ್ಷವು ತನ್ನ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲು ಬೇಕಾದಷ್ಟು ಹಣ ಖರ್ಚುಮಾಡುತ್ತದೆ. ಅಂದರೆ, ಮೂಲತಃ ಕಾರ್ಪೊರೇಟ್‌ಗಳು ತಮ್ಮ ನಾಮಿನಿಗಳ ಮೂಲಕ ಚುನಾವಣೆಗಳಲ್ಲಿ ಸೆಣಸುತ್ತವೆ.



ಚಿತ್ರಕೃಪೆ: ನ್ಯೂಸ್‌ಕ್ಲಿಕ್

ಗಮನಾರ್ಹ ಸಂಗತಿಯೆಂದರೆ, ಶಿಕ್ಷಣವು ಸರಕೀಕರಣಗೊಂಡ ರೀತಿಯಲ್ಲಿಯೇ, ಭಾರತದಲ್ಲಿ ರಾಜಕೀಯ ಜಗತ್ತಿನ ಸರಕೀಕರಣವು ಮುಂದುವರೆದ ಬಂಡವಾಳಶಾಹಿ ದೇಶಗಳಿಗಿಂತಲೂ ಹೆಚ್ಚು ಮುಂದೆ ಹೋಗಿದೆ, ಅದೂ ಬಹಳ ಕಡಿಮೆ ಅವಧಿಯಲ್ಲಿ. ಬದುಕಿನ ಸಮಸ್ತ ಆಯಾಮಗಳ ಮೇಲೆ ನವ ಉದಾರ ಬಂಡವಾಳಶಾಹಿಯ ಹಿಡಿತವೇ ಇದಕ್ಕೆ ಪ್ರಧಾನ ಹೊಣೆಗಾರನಾಗುತ್ತದೆ. ಆದರೆ, ಇಂತಹ ಒಂದು ಸಾಮಾನ್ಯ ಪರಿಸರದಲ್ಲಿ, ಕಾರ್ಪೊರೇಟ್ ಮತ್ತು ಪ್ರಭುತ್ವ ಇವುಗಳ ಶಕ್ತಿಗೆ ಬೆಸುಗೆ ಹಾಕಿರುವ ಬಿಜೆಪಿಯು ಅದನ್ನು ಹಿಂದೆಂದಿಗಿಂತಲೂ ಬಹಳ ದೊಡ್ಡ ಮಟ್ಟದಲ್ಲಿ ಮತ್ತು ಬಹಳ ದೂರಕ್ಕೆ ಕೊಂಡೊಯ್ದಿದೆ. ಯುದ್ಧ ವಿಮಾನ ರಫೇಲ್ ಖರೀದಿ ಪ್ರಕರಣವು ಈ ಬೆಸುಗೆಯ ಒಂದು ಆಯಾಮವಾದರೆ, ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್‌ಗಳು ಕೊಟ್ಟ ದೇಣಿಗೆಯಲ್ಲಿ ಶೇ.92ರಷ್ಟನ್ನು ಬಿಜೆಪಿ ಒಂದೇ ಪಡೆದಿರುವುದು ಈ ಬೆಸುಗೆಯ ಇನ್ನೊಂದು ಆಯಾಮ.

ಭಾರತದ ರಾಜಕಾರಣದಲ್ಲಿ ಯಾವ ಸರಕೀಕರಣ ನಡೆಯುತ್ತಿದೆಯೋ ಅದಕ್ಕೆ ಮುಖಾ ಮುಖಿಯಾಗಿ ಒಂದು ಗಮನಾರ್ಹ ವ್ಯತ್ಯಾಸವುಳ್ಳ ದೃಶ್ಯವನ್ನು ವೆನಿಜುವೆಲಾದಲ್ಲಿ ಕಾಣಬಹುದು. "ಬೊಲಿವಾರಿಯನ್ ಕ್ರಾಂತಿ"ಯ ಮುಂಚೂಣಿ ನಾಯಕ ಹ್ಯೂಗೊ ಚವೇಜ್ ಅವರ ಉತ್ತರಾಧಿಕಾರಿ, ವೆನಿಜುವೆಲಾದ ಹಾಲಿ ಅಧ್ಯಕ್ಷ ನಿಕೊಲಾಸ್ ಮದುರೊ ಅವರನ್ನು ಅಧಿಕಾರದಿಂದ ಕೆಳಗಿಳಿಸಲು, ವೆನಿಜುವೆಲಾದ ಕುಲೀನರು ಎನಿಸಿಕೊಂಡವರ ಜೊತೆಗೂಡಿ ಅಮೇರಿಕನ್ ಸಾಮ್ರಾಜ್ಯಶಾಹಿಯು ಎದ್ದುಬಿದ್ದು ಪ್ರಯತ್ನಿಸುತ್ತಿದೆ. ಅದಕ್ಕೆ ಎಲ್ಲ ಮುಂದುವರೆದ ಬಂಡವಾಳಶಾಹಿ ದೇಶಗಳೂ ಕೈಜೋಡಿಸಿವೆ, ಬಂಡವಾಳಶಾಹಿ ಜಗತ್ತಿನ ಎಲ್ಲ "ಉದಾರವಾದಿ" ವರ್ತಮಾನ ಪತ್ರಿಕೆಗಳೂ ಕೈಜೋಡಿಸಿವೆ. ಇಡೀ ಲ್ಯಾಟಿನ್ ಅಮೇರಿಕಾ ದೇಶಗಳ ಎಲ್ಲ ಬಲ ಪಂಥೀಯರೂ ಕೈಜೋಡಿಸಿದ್ದಾರೆ. ಬ್ರೆಜಿಲ್ ಮತ್ತು ಲ್ಯಾಟಿನ್ ಅಮೇರಿಕಾದ ಕೆಲವು ದೇಶಗಳಗಲ್ಲಿ ಪಿತೂರಿಗಳ ಮೂಲಕ ಸಾಮ್ರಾಜ್ಯಶಾಹಿಗಳು ಜರುಗಿಸಿದ "ಪಾರ್ಲಿಮೆಂಟರಿ ಕ್ಷಿಪ್ರ ಕ್ರಾಂತಿ"ಗಳು ಕೊಬ್ಬಿಸಿರುವ ಲ್ಯಾಟಿನ್ ಅಮೇರಿಕಾದ ಈ ಬಲ ಪಂಥೀಯರು ಈಗ ವೆನಿಜುವೆಲಾದ ಮೇಲೆ ಎರಗಿದ್ದಾರೆ. ಆರ್ಥಿಕ ದಿಗ್ಬಂಧನಗಳಿಂದ ಹಿಡಿದು ವೆನಿಜುವೆಲಾದ ವಿದ್ಯುತ್‌ಶಕ್ತಿ ವ್ಯವಸ್ಥೆಯನ್ನು ನಾಶಗೊಳಿಸುವ ವರೆಗೂ ತಮ್ಮ ಬತ್ತಳಿಕೆಯಲ್ಲಿರುವ ಎಲ್ಲ ಅಸ್ತ್ರಗಳನ್ನೂ ಪ್ರಯೋಗಿಸಿದ್ದಾರೆ. ವೆನಿಜುವೆಲಾದ ಈ ಕುಲೀನರು ಅಮೇರಿಕಾದ ಬೆಂಬಲದಿಂದ ತಾನೇ ವೆನಿಜುವೆಲಾದ "ಅಧ್ಯಕ್ಷ" ಎಂದು ಸ್ವಯಂ ಘೋಷಣೆ ಮಾಡಿಕೊಂಡ ಯುಆನ್ ಗುಐಡೊ ಎಂಬಾತನ್ನು ಅಧಿಕಾರಕ್ಕೆ ತರಲು ಶತ ಪ್ರಯತ್ನ ಮಾಡಿದ್ದಾರೆ. ಅಷ್ಟಾಗಿಯೂ, ಈ ಎಲ್ಲ ಪ್ರಯತ್ನಗಳೂ ಶೋಚನೀಯವಾಗಿ ಸೋತಿವೆ.

ವೆನಿಜುವೆಲಾವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳುವ ಹುಚ್ಚು ಸಾಹಸದ ಭಾಗವಾಗಿ ಅಮೇರಿಕಾವು ಆರ್ಥಿಕ ದಿಗ್ಬಂಧನವೂ ಸೇರಿದಂತೆ ಅನೇಕ ಕುಟಿಲ ಕಾರ್ಯ ತಂತ್ರಗಳ ಮೂಲಕ ವೆನಿಜುವೆಲಾದ ಕತ್ತು ಹಿಚುಕುತ್ತಿದೆ. ಪರಿಣಾಮವಾಗಿ, ಆ ದೇಶದ ಜನತೆಗೆ ಉಂಟಾಗಿರುವ ಅನಾನುಕೂಲ ಮತ್ತು ಅವರು ಅನುಭವಿಸುತ್ತಿರುವ ತೊಂದರೆಯ ದೃಶ್ಯಗಳು ಮತ್ತು ಅದಕ್ಕೆ ಮದುರೊ ಸರ್ಕಾರವೇ ಹೊಣೆ ಎಂಬಂತೆ ಬಿಂಬಿಸುವ ವರದಿಗಳು ನಮ್ಮ ದೇಶವೂ ಸೇರಿದಂತೆ ಜಗತ್ತಿನ ಎಲ್ಲೆಡೆ ಟಿ.ವಿ.ಗಳಲ್ಲಿ ಪ್ರಸಾರವಾಗುತ್ತಿವೆ. ಆದಾಗ್ಯೂ ವೆನಿಜುವೆಲಾದ ಜನತೆ ತಮ್ಮ ಅಧ್ಯಕ್ಷ ಮದುರೊ ಅವರನ್ನು ಧೃಢವಾಗಿ ಬೆಂಬಲಿಸುತ್ತಿದ್ದಾರೆ. ವೆನಿಜುವೆಲಾದ ಮಿಲಿಟರಿಯೂ ಮದುರೊ ಸರ್ಕಾರವನ್ನು ಬೆಂಬಲಿಸುತ್ತಿದೆ. ಲ್ಯಾಟಿನ್ ಅಮೇರಿಕಾದ ಕೆಲವು ದೇಶಗಳಲ್ಲಿ ಮಿಲಿಟರಿ ಸೇವೆ ಸಲ್ಲಿಸುವವರ ಚಾರಿತ್ರ್ಯವು ಅವರ ಚಾರಿತ್ರ್ಯ ಏನೆಂದು ಪಾರಂಪರಿಕ ಮಾರ್ಕ್ಸ್‌ವಾದಿ ಸಿದ್ಧಾಂತವು ಆರೋಪಿಸುತ್ತದೆಯೊ ಅದಕ್ಕಿಂತ ಭಿನ್ನವಾಗಿದೆ. ಜನಸಾಮಾನ್ಯರ ನಡುವಿನಿಂದ ಬಂದಿರುವ ಸೈನಿಕರು ರಾಜಕೀಯಕರಣಗೊಂಡಿರುವುದು, ಪ್ರಗತಿಪರ ಆಡಳಿತಗಳ ಬಗ್ಗೆ ಸಹಾನುಭೂತಿ ಹೊಂದಿರುವುದು ಅಪರೂಪವೇನಲ್ಲ. ಪ್ರಗತಿ ವಿರೋಧಿ ಅಥವಾ ಬಲಪಂಥೀಯ ರಾಜಕೀಯ ಸಿದ್ಧಾಂತವನ್ನು ತುಂಬಲಾಗಿರುವವರೂ ಇದ್ದಾರೆ ಎಂಬುದೂ ನಿಜವೇ. ವಾಸ್ತವವಾಗಿ, "ಬೊಲಿವಾರಿಯನ್ ಕ್ರಾಂತಿ"ಯ ಮುಂಚೂಣಿ ನಾಯಕ ಹ್ಯೂಗೊ ಚವೇಜ್ ಕೂಡ ರಾಜಕೀಯಕ್ಕೆ ಬಂದದ್ದು ಮಿಲಿಟರಿಯಿಂದಲೇ. ಮಿಲಿಟರಿ ಸೇವೆ ಸಲ್ಲಿಸುವವರ ನಡುವೆ ಚವೇಜ್ ಅಪಾರ ಬೆಂಬಲ ಹೊಂದಿದ್ದರು. ಒಟ್ಟಿನಲ್ಲಿ, ಮದುರೊ ಸರ್ಕಾರಕ್ಕೆ ಮಿಲಿಟರಿಯ ಬೆಂಬಲ ಮುಂದುವರಿಯುತ್ತಿದೆ.

ಅಧ್ಯಕ್ಷ ಮದುರೊ ಅವರನ್ನು ಕೆಳಗಿಳಿಸುವ ಪಿತೂರಿಯ ಭಾಗವಾಗಿ ತಾನು ರೂಪಿಸಿದ "ಕ್ಷಿಪ್ರ–ಕ್ರಾಂತಿ"ಯನ್ನು ಬೆಂಬಲಿಸುವಂತೆ ವೆನಿಜುವೆಲಾ ಸೇನೆಯ ಮನ ಒಲಿಸುವಲ್ಲಿ ಅಮೇರಿಕಾದ ಆಡಳಿತವು ಹೀನಾಯವಾಗಿ ಸೋತಿದೆ. ಈ ವಿದ್ಯಮಾನವು, ವೆನಿಜುವೆಲಾದಲ್ಲಿ ರಾಜಕೀಯವು ಇನ್ನೂ ಸರಕೀಕರಣಗೊಂಡಿಲ್ಲ ಎಂಬುದರ ಒಂದು ಸ್ಪಷ್ಟ ಲಕ್ಷಣ. ಈ ಸಂದರ್ಭದಲ್ಲಿ, ಭಾರತ ಮತ್ತು ವೆನಿಜುವೆಲಾ ದೇಶಗಳ ನಡುವೆ ಇರುವ ಒಂದು ಗಮನಾರ್ಹವಾದ ಭಿನ್ನತೆಯನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು: ಭಾರತದಲ್ಲಿ ರಾಜಕೀಯವು ಹೆಚ್ಚು ಹೆಚ್ಚು ಸರಕೀಕರಣಗೊಳ್ಳುತ್ತಿದೆ; ಅಮೇರಿಕನ್ ಸಾಮ್ರಾಜ್ಯಶಾಹಿಯ ಸತತ ಪ್ರಯತ್ನಗಳ ಬಳಿಕವೂ ವೆನಿಜುವೆಲಾದಲ್ಲಿ ರಾಜಕೀಯದ ಸರಕೀಕರಣವು ಮುನ್ನಡೆ ಸಾಧಿಸಲಾಗಿಲ್ಲ.

ವೆನಿಜುವೆಲಾದ ಸೇನೆಯು ಕ್ರಾಂತಿಕಾರಿಯಾದ ಒಂದು ಕೆಂಪು ಸೇನೆಯಲ್ಲ; ಕಾರ್ಮಿಕರ ಪ್ರಭುತ್ವವನ್ನು ಸ್ಥಾಪಿಸುವ ಒಂದು ಸಮಾಜವಾದಿ ಕ್ರಾಂತಿಯೂ

ಪುಟ 14 ಕ್ಕೆ

ರಾಜಕೀಯದ ಸರಕೀಕರಣವನ್ನು ಪ್ರತಿರೋಧಿಸಬೇಕು ಎಂದಾದರೆ ಚುನಾವಣಾ ಕ್ರಮದಲ್ಲಿ ಹಲವು ಹತ್ತು ಸುಧಾರಣೆಗಳನ್ನು ಜಾರಿಗೊಳಿಸುವುದು ಅಗತ್ಯವಾಗುತ್ತದೆ ಮತ್ತು ಈ ನಿಟ್ಟಿನಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ಚುನಾವಣಾ ಖರ್ಚುಗಳನ್ನು ಸರ್ಕಾರವೇ ಭರಿಸಬೇಕು. ಆದರೆ, ಜನಸಾಮಾನ್ಯರ ಒತ್ತಡ ಸೃಷ್ಟಿಯಾಗದ ಹೊರತು ಇಂತಹ ಸುಧಾರಣೆಗಳು ಜಾರಿಯಾಗುವುದಿಲ್ಲ; ಮತ್ತು, ಅದಕ್ಕಾಗಿ ಜನರನ್ನು ಅಣಿ ನೆರಸಲು ಒಂದು ಪರ್ಯಾಯ ಧೋರಣೆಯ ರಾಜಕೀಯವೇ ಬೇಕಾಗುತ್ತದೆ.

ದಲಿತ್ ಶೋಷಣ್ ಮುಕ್ತಿ ಮಂಚ್– (ಡಿಎಸ್ಎಮ್ಎಮ್)– ರಾಷ್ಟ್ರೀಯ ಕಾರ್ಯಕಾರಿ ಸಮಿತಿ ತೀರ್ಮಾನಗಳು

ವರದಿ : **ನಾಗರಾಜ ನಂಜುಂಡಯ್ಯ**

ದಿನಾಂಕ 29–30 ನೇ ಜುಲೈ 2019 ರಂದು, ನವ ದೆಹಲಿಯಲ್ಲಿ ಡಿಎಸ್ಎಂಎಂ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಭೆ ನಡೆಯಿತು. 16 ರಾಜ್ಯಗಳ 23 ಸದಸ್ಯರು ಮತ್ತು ಅಖಿಲ ಭಾರತ ಕೇಂದ್ರದಿಂದ ಮೂವರು ಸದಸ್ಯರು ಭಾಗವಹಿಸಿದ್ದರು. ಕೆ ರಾಧಾ ಕೃಷ್ಣನ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಡೋಮ್ ಕಾರ್ಯಸೂಚಿ ಕುರಿತಂತೆ ಪ್ರಾಸ್ತಾವಿಕ ವಾಗಿ ಸಭೆಗೆ ತಿಳಿಸಿ ಕೊಟ್ಟರು. ಅನಂತರ, ರಾಜ್ಯ ಮಟ್ಟದಲ್ಲಿರುವ ದಲಿತ ಹಕ್ಕುಗಳ ಸಂಘಟನೆಗಳು ನೀಡಿದ ವರದಿಯ ಹಿನ್ನೆಲೆಯಲ್ಲಿ, ಅಖಿಲ ಭಾರತ ಮಟ್ಟದ ಒಂದು ಚಟುವಟಿಕೆಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಲಾಯಿತು.

ಕಳೆದ ಸಭೆಯ ನಂತರ ನಡೆಸಿದ ಚಟುವಟಿಕೆಗಳ ಬಗ್ಗೆ ಸದಸ್ಯರನ್ನು ಚರ್ಚೆಗೆ ಆಹ್ವಾನಿಸಲಾಯಿತು. ಅವರೆಲ್ಲರೂ ನೀಡಿದ ವರದಿಗಳನ್ನು ಸಮಿತಿ ಕೇಳಿತು. ಈ ಅವಧಿಯಲ್ಲಿ ದಲಿತರು ಮತ್ತು ಇತರೆ ದುರ್ಬಲ ವರ್ಗಗಳ ವಿರುದ್ಧದ ದಾಳಿಗಳು ಮತ್ತು ಅಪರಾಧಗಳು ತೀವ್ರವಾಗಿ ಹೆಚ್ಚಿವೆ ಎಂದು ಮಾತನಾಡಿದ ಎಲ್ಲ ಸದಸ್ಯರು, ಹೆಚ್ಚುತ್ತಿರುವ ದಾಳಿಯ ವಿರುದ್ಧ, ವಿವಿಧ ರಾಜ್ಯಗಳಲ್ಲಿ ದಲಿತರ ನಡುವೆ ಕೆಲಸ ಮಾಡುವ ನಮ್ಮ ಘಟಕಗಳು ಸ್ವತಂತ್ರವಾಗಿ ಮತ್ತು ಒಗ್ಗಟ್ಟಿನಿಂದ ಅಭಿಯಾನಗಳನ್ನು ಸಕ್ರೀಯವಾಗಿ ನಡೆಸಿರುವುದರ ಬಗ್ಗೆ ಸಮಿತಿ ಮೆಚ್ಚುಗೆ ವ್ಯಕ್ತ ಪಡಿಸಿತು. ಎಂದಿನಂತೆ, ತಮಿಳುನಾಡು, ಆಂಧ್ರಪ್ರದೇಶ, ತೆಲಾಂಗಣ ಮತ್ತು ಕೇರಳ, ತ್ರಿಪುರ, ಕರ್ನಾಟಕ ರಾಜ್ಯದ ಘಟಕಗಳು ಹೆಚ್ಚಾಗಿ ಚಟುವಟಿಕೆಗಳನ್ನು ನಡೆಸಿರುವುದು ಹಾಗೂ ಉಳಿದಂತೆ, ಹಿಂದಿ ರಾಜ್ಯಗಳಲ್ಲಿಯೂ ಈ ವಿಷಯದಲ್ಲಿ ಸುಧಾರಣೆ ಯಾಗುತ್ತಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿತು.



ಅಂತಿಮವಾಗಿ ಸಮಿತಿಯು "ಒಂದು ಚಟುವಟಿಕೆಗಳ ಪಟ್ಟಿ" ಯನ್ನು ಅನುಮೋದಿಸಿತು. (ಪ್ರತ್ಯೇಕವಾಗಿ ನೀಡಲಾಗಿದೆ). ಇದನ್ನು ದಲಿತರ ಹಕ್ಕುಗಳಿಗಾಗಿ ಕೆಲಸ ಮಾಡುವ ಸಂಘಟನೆಗಳು, ಸಂಸ್ಥೆಗಳು ಮತ್ತು ಪಡೆಗಳು ಆಧಾರವಾಗಿ ಬಳಸಿ ಕೊಳ್ಳಲು ಸಲಹೆ ನೀಡಲಾಯಿತು.

ನಮ್ಮ ರಾಜ್ಯದ ಪರವಾಗಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ಮತ್ತು ಡಿಎಸ್ಎಮ್ಎಮ್ ನ ಸದಸ್ಯರಾದ, ನಾಗರಾಜ ನಂಜುಂಡಯ್ಯ ನವರು ಭಾಗವಹಿಸಿದ್ದರು.

ಸುದೀರ್ಘ ಚರ್ಚೆಯ ನಂತರ ಅಂತಿಮವಾಗಿ ಮುಂದಿನ ಕರ್ತವ್ಯ ಗಳನ್ನು ತೀರ್ಮಾನಿಸಲಾಯಿತು. ಅವುಗಳನ್ನು ಈ ಕೆಳಗೆ ನಮೂದಿಸಲಾಗಿದೆ.

1. ದೇಶಾದ್ಯಂತ ದಲಿತರ ಮೇಲೆ ನಡೆಯುತ್ತಿರುವ ಅಸ್ಪೃಶ್ಯತಾ ದೌರ್ಜನ್ಯಗಳು ಮತ್ತು ಜಾತಿ ತಾರತಮ್ಯಗಳ ಕುರಿತಂತೆ, ವಿವಿಧ ಸಂಘಟನೆಗಳನ್ನು ಅಣಿನೆರೆಸಿ ಭಾರತದ ರಾಷ್ಟ್ರಪತಿಗಳಿಗೆ "ಜ್ಞಾಪಕ ಪತ್ರ" ಸಲ್ಲಿಸಲು ನಿರ್ಧರಿಸಲಾಯಿತು.
2. ಸಮಾನ ಮನಸ್ಕರನ್ನು ಹಾಗೂ ಸಂಸ್ಥೆಗಳನ್ನು/ ಸಂಘಟನೆಗಳನ್ನು ರಾಜ್ಯ ಮಟ್ಟದಲ್ಲಿ ಒಗ್ಗೂಡಿಸಿ, ಸ್ಥಳಿಯವಾದ ವಿಷಯಗಳ ಆಧಾರದಲ್ಲಿ ಚರ್ಚಿಸ ಬೇಕು ಆ ನಂತರ, ರಾಜ್ಯಪಾಲರು/ಮುಖ್ಯಮಂತ್ರಿ ಗಳಿಗೆ ಜ್ಞಾಪಕ ಪತ್ರಗಳನ್ನು ಸಲ್ಲಿಸಬೇಕೆಂದು ಸಹ ನಿರ್ಧರಿಸಲಾಯಿತು.
3. ಅಂತರ್ಜಾತಿ ದಂಪತಿಗಳ ರಕ್ಷಣೆಗಾಗಿ ಮತ್ತು ಮರ್ಯಾದಾ ಹತ್ಯೆಗಳನ್ನು ತಡೆಗಟ್ಟಲು "ಕಾನೂನು ಜಾರಿಗೆ ತರಲು ರಾಜ್ಯ ಸರ್ಕಾರಗಳನ್ನು ಒತ್ತಾಯಿಸಲು" ಇನ್ನಿತರೆ ದಲಿತ ಸಂಘಟನೆಗಳು /ಸಂಸ್ಥೆಗಳು ಹಾಗೂ, ನ್ಯಾಯವಾದಿ ಗಳೊಂದಿಗೆ ಜಂಟೀ ಚಟುವಟಿಕೆಗಳನ್ನು ಆಯೋಜಿಸಿ ಈಗಾಗಲೇ ತಯಾರಿಸಿ, ಅಂತಿಮ ಘಟ್ಟದಲ್ಲಿ ಇರುವ ಮಸೂದೆಯ ಕರಡು ಪ್ರತಿಯನ್ನು ವಿಶಾಲವಾದ ತಳಹದಿಯಲ್ಲಿ ಸಾಧ್ಯವಾದಷ್ಟು ದೊಡ್ಡ ಪ್ರಮಾಣದಲ್ಲಿ, ಚರ್ಚಿಸಿದ ನಂತರ ಸ್ಥಳೀಯ ವಿಷಯಗಳನ್ನು ಒಳಗೊಂಡಂತೆ, ರಾಜ್ಯಗಳಲ್ಲೂ ಈ ಮಸೂದೆಯ ಅಂಗೀಕಾರಕ್ಕಾಗಿ ರಾಜ್ಯ ಪಾಲರಿಗೆ / ಮುಖ್ಯ ಮಂತ್ರಿಗಳಿಗೆ ಸಲ್ಲಿಸಿ, ಮಸೂದೆಯ ಜಾರಿಗಾಗಿ ಜಂಟಿಯಾಗಿ ಒತ್ತಾಯಿಸಲು ನಿರ್ಧರಿಸಲಾಯಿತು.
4. ಸಂಸತ್ತಿನ ಚಳಿಗಾಲದ ಅಧಿವೇಶನಕ್ಕೆ ಮುಂಚಿತವಾಗಿ ದಲಿತ ವಿಷಯಗಳ ಕುರಿತು ಅಖಿಲ ಭಾರತ ಅಭಿಯಾನದ ಪ್ರಸ್ತಾಪಗಳು ಚರ್ಚೆಗೆ ಬಂದಿತು. ಇತರ ದಲಿತ ಸಂಘ ಟನೆಗಳೊಂದಿಗೆ/ಸಂಸ್ಥೆಗಳೊಂದಿಗೆ ವ್ಯಾಪಕ ಸಮಾಲೋಚನೆಯ ನಂತರ, ಮುಂದಿನ ಸಭೆಯಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲು ನಿರ್ಧರಿಸಲಾಯಿತು.
5. ಅಖಿಲ ಭಾರತ ಮಟ್ಟದಲ್ಲಿ "ತರಭೇತಿ ಶಿಬಿರ" ವನ್ನು ನವೆಂಬರ್ ತಿಂಗಳಲ್ಲಿ ತಮಿಳುನಾಡಿನ, ಚೆನ್ನೈ ನಗರದಲ್ಲಿ ಏರ್ಪಡಿಸಲು ತೀರ್ಮಾನಿಸಲಾಯಿತು.
6. ದಲಿತರ ಮೇಲೆ ನಡೆಯುವ ಅಸ್ಪೃಶ್ಯತಾ ದೌರ್ಜನ್ಯಗಳ ಕುರಿತಂತೆ ಆಯಾ ರಾಜ್ಯಗಳು "ಸಮೀಕ್ಷೆ" ಕೈಗೊಳ್ಳಲು ಸಲಹೆ ನೀಡಲಾಯಿತು. ಈಗಾಗಲೇ ಸಮೀಕ್ಷೆ ನಡೆಸಿರುವ ರಾಜ್ಯಗಳು ಮತ್ತೆ ನಡೆಸುವ ಬಗ್ಗೆ, ಅವರ ತೀರ್ಮಾನಕ್ಕೆ ಬಿಟ್ಟಿದ್ದು. ಈ ಸಮೀಕ್ಷೆಯ ಆಧಾರದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ರೂಪಿಸುವಂತಾಗಬೇಕು.
7. ಸಂವಿಧಾನ ದ ಮೇಲೆ ದಾಳಿ ನಡೆಸುವ, ಆರ್.ಎಸ್.ಎಸ್ ಮತ್ತು ಸಂಘ ಪರಿವಾರದವರು, ಇತ್ತೀಚಿನ ದಿನಗಳಲ್ಲಿ, ಅಂಬೇಡ್ಕರ್ ರವರನ್ನು ಅವರ ಆಶಯಗಳನ್ನು ಅಪಹರಿಸುತ್ತಿದ್ದಾರೆ. ಇದರ ಅಪಾಯವನ್ನು ಸೂಕ್ಷ್ಮವಾಗಿ ಅರಿಯಬೇಕಾಗಿದೆ. ಈ ಹಿನ್ನೆಲೆಯಲ್ಲಿ, ಈ ಕೆಳಕಂಡ ದಿನಗಳ ಪ್ರಾಮುಖ್ಯತೆ ಕುರಿತಂತೆ ದಲಿತ ಸಮುದಾಯದಲ್ಲಿ ಜಾಗೃತಿಯನ್ನು ಮೂಡಿಸಬೇಕು.
   ನವೆಂಬರ್ 26– ಸಂವಿಧಾನದ ಸಂಸ್ಥಾಪನಾ ದಿನ.
   ಡಿಸೆಂಬರ್ 06 – ಅಂಬೇಡ್ಕರ್ ರ ಮಹಾ ಪರಿನಿರ್ವಹಣಾ ದಿನ.
   ಏಪ್ರಿಲ್ 14 – ಅಂಬೇಡ್ಕರ್ ಜನ್ಮ ದಿನಾಚರಣೆ.
   ಜನವರಿ 03– ಸಾವಿತ್ರಿ ಬಾಪುಲೆ ಜನ್ಮ ದಿನಾಚರಣೆ ಮಾರ್ಚ್ ಮತ್ತು ಏಪ್ರಿಲ್ – ಜ್ಯೋತಿ ಬಾಪುಲೆ ಮತ್ತು ಬಸವ ಜಯಂತಿ ಯಂತ ಪ್ರಮುಖ ದಿನಗಳ ಪ್ರಾಮುಖ್ಯತೆಯನ್ನು ದಲಿತರಿಗೆ ಮನವರಿಕೆ ಮಾಡಿಸುವಂತಾಗಬೇಕು.
8. ಮದ್ಯಮ ವರ್ಗದ ದಲಿತ ನೌಕರರ ಮಧ್ಯೆ, ಅವರ ಸಂಘಟನೆಗಳ ಮೂಲಕ, ಅವರನ್ನು ಮುಖ್ಯ ವಾಹಿನಿಯ– ಪ್ರಜಾಸತ್ತಾತ್ಮಕ ಚಳುವಳಿಗೆ ತರುವ ಪ್ರಯತ್ನವನ್ನು ನಿರಂತರವಾಗಿ ಮಾಡಬೇಕು.

ಮೇಲಿನ ನಿರ್ಧಾರಗಳನ್ನು ಜಾರಿಗೆ ತರಲು ಎಲ್ಲಾ ರಾಜ್ಯ ಘಟಕಗಳು ತುರ್ತಾಗಿ ಅಗತ್ಯ ಕ್ರಮಗಳನ್ನು ನಿರ್ವಹಿಸಲು ಸಭೆಯಲ್ಲಿ ಕೋರಲಾಯಿತು. ●



ನವ ಉದಾರವಾದದ ಅಡಿಯಲ್ಲಿ ರಾಜಕೀಯವೂ ಸರಕಾಗುತ್ತಿದೆ

ಪುಟ 13 ರಿಂದ

ವೆನಿಜುವೆಲಾದಲ್ಲಿ ಜರುಗಿಲ್ಲ; ಹಳೆಯ ಕಂದಾಚಾರ–ರೀತಿ–ನೀತಿಗಳನ್ನು ಧೀರೋದ್ದಾತವಾಗಿ ಕಿತ್ತೊಗೆದ ಆದರ್ಶದ ಕತೆಯೂ ವೆನಿಜುವೆಲಾದ್ದಲ್ಲ. ಜಗತ್ತೇ ಬೆರಗುಗಣ್ಣಿನಿಂದ ನೋಡುವಂತೆ ಮಾಡಿದ ಕ್ರಾಂತಿಕಾರಿ ಬದಲಾವಣೆಗಳಿಗೆ ಹೋಲಿಸಿದರೆ, ವೆನಿಜುವೆಲಾದಲ್ಲಿ ಈ ವರೆಗೆ ಏನು ಜರುಗಿದಿಯೊ ಅದು, ವಾಸ್ತವವಾಗಿ, ಒಂದು ಸಾಧಾರಣ ಬದಲಾವಣೆಯೇ. ಅದಕ್ಕಿಂತಲೂ ಮುಖ್ಯವಾಗಿ, ಈ ಸಾಧಾರಣ ಬದಲಾವಣೆ ಜರುಗಿದ ಬಳಿಕ ಅಧಿಕಾರದ ಚುಕ್ಕಾಣಿ ಹಿಡಿದಿರುವ ನಿಕೊಲಾಸ್ ಮದುರೊ, ಚವೇಜ್ ಅವರಂತಹ ಪ್ರಭಾವಶಾಲಿ ವ್ಯಕ್ತಿತ್ವವನ್ನೂ ಹೊಂದಿಲ್ಲ.

ಪರಿಸ್ಥಿತಿ ಹಾಗಿದ್ದರೂ ಸಹ, ವೆನಿಜುವೆಲಾದ ಸೇನೆಯು ಮದುರೊ ಸರ್ಕಾರವನ್ನು ಬೆಂಬಲಿಸುತ್ತಿದೆ. ಏಕೆಂದರೆ, ಮದುರೊ ಸರ್ಕಾರವು ನವ ಉದಾರವಾದದ ನೀತಿಗಳನ್ನು ಮೈಲು ದೂರ ಇಟ್ಟು ಆರ್ಥಿಕ ನೀತಿಗಳಲ್ಲಿ ಜನ ಪರ ಬದಲಾವಣೆಗಳನ್ನು ಜಾರಿಗೊಳಿಸಿರುವ ಅಂಶವು ಮಹತ್ವ ಪಡೆದಿದೆ. ಇದು ಏನನ್ನು ಸೂಚಿಸುತ್ತದೆ ಎಂದರೆ, ಸರಕೀಕರಣಕ್ಕೆ ಒಳಗಾದ ರಾಜಕೀಯ ಜಗತ್ತಿನಲ್ಲಿ ಯಾವ ಪ್ರಜೆಗಳು ಕೇವಲ ಒಂದು "ವಸ್ತು" ಆಗಿ ಉಳಿದರೋ, ಅದೇ ಪ್ರಜೆಗಳು, ಒಂದು ಅವಕಾಶ ಒದಗಿ ಬಂದಾಗ (ಅಂದರೆ, ನವ ಉದಾರವಾದದ ನೀತಿಗಳ ಮಾರ್ಗವನ್ನು ಬದಲಿಸಿದ ಸಂದರ್ಭದಲ್ಲಿ), ಚಿಂತಿಸುವ ಚೇತನದ "ವ್ಯಕ್ತಿ"ಯ ಪಾತ್ರವನ್ನೂ ನಿರ್ವಹಿಸುತ್ತಾರೆ. ಅವರು ಈ ರೀತಿಯಲ್ಲಿ ತಮ್ಮ ಹಕ್ಕುಗಳನ್ನು ಸಾಧಿಸಿದಾಗ ಅದರ ಪ್ರಭಾವವು ಸೇನೆ ಮತ್ತು ಇತರ ಘಟಕಗಳ ಮೇಲೆ ಒಂದು ರೀತಿಯ ಒತ್ತಡ ಸೃಷ್ಟಿಸುತ್ತದೆ. ಆಗ ಈ ಘಟಕಗಳು ಸಾಮ್ರಾಜ್ಯಶಾಹಿಯ ಪ್ರಲೋಭನೆಗಳಿಗೆ ಕಿವಿ ಇಳಿಬಿಡುವುದಿಲ್ಲ.

ರಾಜಕೀಯದ ಸರಕೀಕರಣವನ್ನು ಪ್ರತಿರೋಧಿಸಬೇಕು ಎಂದಾದರೆ ಚುನಾವಣಾ ಕ್ರಮದಲ್ಲಿ ಹಲವು ಹತ್ತು ಸುಧಾರಣೆಗಳನ್ನು ಜಾರಿಗೊಳಿಸುವುದು ಅಗತ್ಯವಾಗುತ್ತದೆ ಮತ್ತು ಈ ನಿಟ್ಟಿನಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ಚುನಾವಣಾ ಖರ್ಚುಗಳನ್ನು ಸರ್ಕಾರವೇ ಭರಿಸಬೇಕು. ಆದರೆ, ಜನಸಾಮಾನ್ಯರ ಒತ್ತಡ ಸೃಷ್ಟಿಯಾಗದ ಹೊರತು ಇಂತಹ ಸುಧಾರಣೆಗಳು ಜಾರಿಯಾಗುವುದಿಲ್ಲ; ಮತ್ತು, ಅದಕ್ಕಾಗಿ ಜನರನ್ನು ಅಣಿ ನೆರಸಲು ಒಂದು ಪರ್ಯಾಯ ಧೋರಣೆಯ ರಾಜಕೀಯವೇ ಬೇಕಾಗುತ್ತದೆ. ಕೇವಲ ಒಂದು "ವಸ್ತು" ಎನ್ನುವ ಮಟ್ಟದಲ್ಲಿ ಉಳಿದಿರುವ ಜನರನ್ನು ಚಿಂತಿಸುವ ಚೇತನದ "ವ್ಯಕ್ತಿ"ಯ ಪಾತ್ರ ನಿರ್ವಹಿಸುವಂತೆ ಮಾರ್ಪಾಡುಗೊಳಿಸಲು ಬೇಕಾಗುವ ಪರ್ಯಾಯ ಧೋರಣೆಯ ರಾಜಕೀಯವು ಒಂದು ಪರ್ಯಾಯ ಅಜೆಂಡಾವನ್ನು ಜನರ ಮುಂದೆ ಇಡುತ್ತದೆ.

ಮಾರ್ಕ್ಸ್ ಅವರು 'ತತ್ವಶಾಸ್ತ್ರದ ದಾರಿದ್ರ್ಯ' ಎಂಬ ಕೃತಿಯಲ್ಲಿ ಬಂಡವಾಳದ ಅಂತರ್ಗತ ಪ್ರವೃತ್ತಿಗಳು ಮತ್ತು ಶ್ರಮಿಕರ ಕ್ರಿಯಾಶೀಲ ಮಧ್ಯಪ್ರವೇಶ ಇವುಗಳ ನಡುವಿನ ದ್ವಂದ್ವದ ಬಗ್ಗೆ ಅನ್ವೇಷಣೆ ಮಾಡಿದ್ದಾರೆ. ಕಾರ್ಮಿಕರ ಸಮೂಹವನ್ನು ಒಡೆದು ಚೂರು ಚೂರು ಮಾಡುವ ಪ್ರವೃತ್ತಿಯು ಬಂಡವಾಳದಲ್ಲಿ ಅಂತರ್ಗತವಾಗಿದೆ. ವಿವಿಧ ಹಿನ್ನೆಲೆಯಿಂದ ಬಂದ ಕಾರ್ಮಿಕರನ್ನು ವ್ಯಕ್ತಿಗಳಾಗಿ ನೇಮಿಸಿಕೊಂಡು ಒಬ್ಬನಿಂದ ಇನ್ನೊಬ್ಬನನ್ನು ದೂರ ಇಡುತ್ತದೆ. ಆದರೆ, ಅವರನ್ನು ಅದೇ ಕಾರ್ಖಾನೆಯ ಒಂದೇ ಸೂರಿನಡಿಯಲ್ಲೇ ಇಡುತ್ತದೆ. ತಮ್ಮ ಜುಜುಬಿ ಕೂಲಿಯನ್ನು ಹೆಚ್ಚಿಸಿಕೊಳ್ಳಲು ಕಾರ್ಮಿಕರು "ಸಂಘ" ಕಟ್ಟಿಕೊಳ್ಳುತ್ತಾರೆ. ಸಂಘಟನೆಯು ಕಾರ್ಮಿಕರ ಸ್ವ–ಹಿತದಿಂದ ಪ್ರಾರಂಭಗೊಂಡಿದ್ದರೂ ಸಹ, ಈ ಸಂಘಟನೆಯೇ ಕಾರ್ಮಿಕ ಸಮೂಹವನ್ನು ಒಡೆದು ಹಾಕುವ ಬಂಡವಾಳದ ಪ್ರವೃತ್ತಿಯಲ್ಲಿ ಕಾಣಿಸಿಕೊಂಡ ಮೊದಲ ಬಿರುಕು. ಈ ಸಂಘಟನೆಯೇ ತರುವಾಯ ಒಂದು ಹೊಸ "ಸಮುದಾಯ"ವಾಗಿ ಬೆಳೆಯುತ್ತದೆ.

ಅದೇ ರೀತಿಯಲ್ಲಿ, ನವ ಉದಾರವಾದವು ಇಂದು ಜನತೆಗೆ ಏನನ್ನು ಒದಗಿಸುತ್ತಿದೆಯೋ ಅದಕ್ಕಿಂತ ಭಿನ್ನವಾದ ಒಂದು ಹೊಸ ಕಾರ್ಯ ಸೂಚಿಯೊಂದಿಗೆ ಒಂದು ಹೊಸ ಸಂಯೋಜನೆಯ ಮೂಲಕ ದುಡಿಯುವ ಜನತೆಯನ್ನು ಅಣಿ ನೆರಸಿ ಸಮಕಾಲೀನ ಯುಗದ ಬಂಡವಾಳದ ಅಂತರ್ಗತ ಪ್ರವೃತ್ತಿಗಳು ರಾಜಕೀಯವನ್ನು ಸರಕೀಕರಣಗೊಳಿಸುವುದನ್ನು ನಿಲ್ಲಿಸಬಹುದು. ಅಂತಹ ಒಂದು ಹೊಸ ಕಾರ್ಯ ಸೂಚಿಗೆ ಪ್ರಾರಂಭದಲ್ಲಿ ದುಡಿಯುವ ಜನತೆ ತಮ್ಮ ಸ್ವ–ಹಿತದಿಂದಲೇ ಆಕರ್ಷಿತರಾದರೂ ಸಹ, ಅವರು ಒಟ್ಟಿಗೆ ಬರುವ ಕ್ರಿಯೆಯೇ ರಾಜಕೀಯ ಸರಕೀಕರಣಕ್ಕೆ ಪ್ರತಿಕೂಲವಾದ ಪ್ರವೃತ್ತಿಯನ್ನು ಹರಿಯ ಬಿಡುತ್ತದೆ. ಹಾಗಾಗಿ, ದುಡಿಯುವ ಜನತೆಯನ್ನು ಅಣಿ ನೆರೆಸಬಲ್ಲ ಮತ್ತು ಒಂದು ಪರ್ಯಾಯ ರಾಜಕೀಯವನ್ನು ಹುಟ್ಟು ಹಾಕುವ ಒಂದು ಪರ್ಯಾಯ ಕಾರ್ಯ ಸೂಚಿಯೇ ರಾಜಕೀಯವನ್ನು ಸರಕಾಗಿ ಮಾಡುವ ಪ್ರವೃತ್ತಿಯನ್ನು ನಿಲ್ಲಿಸಬಲ್ಲದು. ●

ಸಿಪಿಐ(ಎಂ) ಕಛೇರಿಗೆ ಕ್ಯೂಬನ್ ನಿಯೋಗ ಭೇಟಿ

ಕ್ಯೂಬನ್ ಇನ್ಸ್ಟಿಟ್ಯೂಟ್ ಫಾರ್ ಫ್ರೆಂಡ್‌ಶಿಪ್ ಅಮಾಂಗ್ ಪೀಪಲ್ (ಐಸಿಎಪಿ) ಸಂಸ್ಥೆ ಯ ನಿಯೋಗವು ಜುಲೈ 24 ರಂದು ನವದೆಹಲಿಯಲ್ಲಿರುವ ಸಿಪಿಐ(ಎಂ) ನ ಕೇಂದ್ರ ಕಚೇರಿ ಎಕೆಜಿ ಭವನಕ್ಕೆ ಭೇಟಿ ನೀಡಿತು.

ಈ ನಿಯೋಗದಲ್ಲಿ ಐಸಿಎಪಿ ಅಧ್ಯಕ್ಷ ಫರ್ನಾಂಡೊ ಗೊನ್ಜಾಲೆಜ್ ಲೊರ್ಟ್, ಐಸಿಎಪಿ ಅಧ್ಯಕ್ಷ, ಹಾಗೂ ಕ್ಯೂಬನ್ ಕ್ರಾಂತಿಕಾರಿ ಚೆ ಗುವೇರ ರ ಮಗಳಾದ ಅಲೀಡಾ ಚೆಗುವೇರಾ ಇದ್ದರು. ಕ್ಯೂಬಾದ ರಾಯಬಾರಿ ಅಸ್ಕರ್ ಮಾರ್ಟಿನೆಜ್ ಕಾರ್ಡೋವಾಸ್ ಮತ್ತು ಇತರ ಅಧಿಕಾರಿಗಳು ನಿಯೋಗದೊಂದಿಗೆ ಇದ್ದರು. ಸಿಪಿಐ(ಎಂ) ವತಿಯಿಂದ ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರತ್, ಎಂ.ಎ.ಬೇಬಿ, ಹಾಗೂ ಕೇಂದ್ರ ಸಮಿತಿ ಸದಸ್ಯ ರಾದ ಹರಿಸಿಂಗ್ ಕಾಂಗ್ ಮತ್ತು ಆರ್. ಅರುಣ್ ಕುಮಾರ್ ರವರು ಇದ್ದು, ಕ್ಯೂಬನ್ ನಿಯೋಗದೊಂದಿಗೆ ಮಾತುಕತೆ ನಡೆಸಿದರು.


ಪ್ರಕಾಶ್ ಕಾರತ್ ಕ್ಯೂಬನ್ ನಿಯೋಗವನ್ನು ಭಾರತಕ್ಕೆ ಹಾಗೂ ಸಿಪಿಐ(ಎಂ) ಕಛೇರಿ ಗೆ ಸ್ವಾಗತಿಸಿದರು. ಸಾಮ್ರಾಜ್ಯಶಾಹಿ ಅಮೆರಿಕಾದ ದಾಳಿಯ ವಿರುದ್ಧದ ಹೋರಾಟದಲ್ಲಿ ಸಮಾಜವಾದಿ ಕ್ಯೂಬಾ ದೊಂದಿಗೆ ಸಿಪಿಐ(ಎಂ), ಪಕ್ಷದ ಸೌಹಾರ್ದತೆಯನ್ನು ಪುನರುಚ್ಚರಿಸಿದರು.

ಫರ್ನಾಂಡೊ ಗೊನ್ಜಾಲೆಜ್ ಲೊರ್ಟ್ ರು ಸೆಪ್ಟೆಂಬರ್ 12, 1998 ರಂದು ಯುನೈಟೆಡ್ ಸ್ಟೇಟ್ಸ್ ನ ಮಿಯಾಮಿ ಯಲ್ಲಿ ಅನ್ಯಾಯವಾಗಿ ಜೈಲಿನಲ್ಲಿದ್ದ ಕ್ಯೂಬನ್ ಫೈವ್ ಗಳಲ್ಲಿ ಒಬ್ಬರಾಗಿದ್ದರು. 16 ವರ್ಷಗಳಿಗಿಂತ ಹೆಚ್ಚು ಕಾಲ ಹೆಚ್ಚಿನ ಭದ್ರತೆಯ ಕಾರಾಗೃಹದಲ್ಲಿ ಬಂಧಿಸಲ್ಪಟ್ಟ ನಂತರ ಫರ್ನಾಂಡೊ ರನ್ನು 2014 ರಲ್ಲಿ ಬಿಡುಗಡೆ ಮಾಡಲಾಯಿತು. ಅವರಿಗೆ "ಕ್ಯೂಬಾ ಗಣರಾಜ್ಯದ ಹೀರೋ" ಎಂಬ ಬಿರುದನ್ನು ನೀಡಲಾಗಿದೆ.

ಮಾಧ್ಯಮಗಳೊಂದಿಗೆ ಸಂವಹನ ನಡೆಸಿದ ಫರ್ನಾಂಡೊ, 1951 ರಲ್ಲಿ ಕ್ಯೂಬನ್ ಕ್ರಾಂತಿಯ ಮೊದಲ ದಿನದಿಂದಲೂ, ಅಮೇರಿಕ ➔

ಕ್ಯೂಬನ್ ಕ್ರಾಂತಿಗೆ 60ರ ಸಂಭ್ರಮ

ಒಗ್ಗಟ್ಟಾಗಿ ನಾವೆಲ್ಲಾ ಸಾಮ್ರಾಜ್ಯ ಶಾಹಿಯನ್ನು ಸೋಲಿಸಬಹುದು: ಅಲೀಡಾ ಗುವೇರಾ



ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಜುಲೈ 24 ರಂದು ನವದೆಹಲಿಯಲ್ಲಿ ಒಂದು ಅದ್ಭುತ ಹಾಗೂ ಅರ್ಥಪೂರ್ಣವಾದ ಸಾರ್ವಜನಿಕ ಸಭೆ ನಡೆಯಿತು. ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದ ಸಂಘಟನೆ (ಎ.ಐ.ಪಿ.ಎಸ್.ಒ.) ಮತ್ತು ಕ್ಯೂಬಾ ಸೌಹಾರ್ದ ರಾಷ್ಟ್ರೀಯ ಸಮಿತಿ ಜಂಟಿಯಾಗಿ ಈ ಸಭೆಯನ್ನು ಆಯೋಜಿಸಿದ್ದವು.

ಕ್ಯೂಬಾದ ಕ್ರಾಂತಿಗೆ 60 ತುಂಬಿದ ಸಂದರ್ಭದಲ್ಲಿ ಇದು ಆಯೋಜಿತವಾಗಿತ್ತು. ಕ್ಯೂಬನ್ ಕ್ರಾಂತಿಯ ಅಮರ ನಾಯಕ ಚೆ ಗುವೇರಾ ರ ಮಗಳು ಅಲೀಡಾ ಚೆಗುವೇರಾ, ಕ್ಯೂಬಾ ದ ಫೈವ್ ಎಂದೇ ಪ್ರಸಿದ್ದ ರಾಗಿದ್ದವರಲ್ಲಿ ಒಬ್ಬರಾದ ಫರ್ನಾಂಡೊ ಗೊನ್ಸಾಲೆಜ್, ಸಿಪಿಐ ನೂತನ ಪ್ರಧಾನ ಕಾರ್ಯದರ್ಶಿ ಯಾಗಿರುವ ಸಂಗಾತಿ ಡಿ.ರಾಜ, ಸಿಪಿಐ(ಎಂ) ನ ಪೊಲಿಟ್‌ಬ್ಯುರೋ ಸದಸ್ಯ ಎಂ.ಎ.ಬೇಬಿ ಯವರು, ಪ್ರಮುಖ ಭಾಷಣಕಾರರಾಗಿ ಭಾಗವಹಿಸಿದ್ದರು. ಕ್ಯೂಬನ್ ಶಾಂತಿ ಮತ್ತು ಸೌಹಾರ್ದ ಸಂಘಟನೆಯ ಆರ್.ಅರುಣ್ ಕುಮಾರ್ ಸಭೆಯ ಅಧ್ಯಕ್ಷತೆ ವಹಿಸಿದ್ದು ಭಾಷಣಕಾರರನ್ನು ಸಭೆಗೆ ಪರಿಚಯಿಸಿ, ಪ್ರಾಸ್ತಾವಿಕವಾಗಿ ಸಭೆಯ ಪ್ರಸ್ತುತ ರಾಜಕೀಯ ಸಂದರ್ಭದ ಉದ್ದೇಶಗಳ ಬಗ್ಗೆ ಮಾತನಾಡಿದರು. ಎ.ಐ.ಪಿ.ಎಸ್.ಒ. ನ ಪ್ರಧಾನ ಕಾರ್ಯದರ್ಶಿಯಾದ ಪಲ್ಲಬ್ ಸೇನ್‌ಗುಪ್ತಾ ರವರು ಈ ಸಭೆಯಲ್ಲಿ ಉಪಸ್ಥಿತರಿದ್ದರು.

ಅಲೀಡಾ ಗುವೇರಾ ಮಾತನಾಡುತ್ತಾ, ಕಳೆದ ಅರವತ್ತು ವರ್ಷಗಳಿಂದಲೂ, ಅಮೆರಿಕನ್ ಸಾಮ್ರಾಜ್ಯಶಾಹಿ ಕ್ಯೂಬಾದಲ್ಲಿನ ಸಮಾಜವಾದವನ್ನು ಸೋಲಿಸಲು ನಡೆಸಿದ ತನ್ನ ಎಲ್ಲಾ ರೀತಿಯ ಪ್ರಯತ್ನಗಳ ಹೊರತಾಗಿಯೂ, ಕ್ಯೂಬಾವನ್ನು ತನ್ನ ಮುಂದೆ ಮಂಡಿಯೂರುವಂತೆ ಮಾಡುವಲ್ಲಿ ಯಶಸ್ವಿಯಾಗಲಿಲ್ಲ. ಇನ್ನೂ ಮುಂದೆಯೂ ಯಶಸ್ವಿಯಾಗಲಾರದು ಎಂದು ದೃಢವಾಗಿ ಪ್ರತಿಪಾದಿಸಿದರು. ಕ್ಯೂಬಾ ಅಮೆರಿಕಾದಿಂದ ಕೇವಲ 90 ಮೈಲಿ ದೂರದಲ್ಲಿರುವ ಒಂದು ಸಣ್ಣ ದ್ವೀಪ ರಾಷ್ಟ್ರವಾಗಿದ್ದರೂ ಸಹಾ, ಅಮೆರಿಕಾದ ಜನಸಂಖ್ಯೆಗೆ (40 ಕೋಟಿ) ಹೋಲಿಸಿದರೆ, ಕ್ಯೂಬಾದ್ದು ಕೇವಲ 1.1 ಕೋಟಿ ಇದ್ದರು ಕೂಡ, ಸಾಮ್ರಾಜ್ಯಶಾಹಿ ಅಮೇರಿಕದ ಎಲ್ಲಾ ಪಿತೂರಿಯ ಕಾರ್ಯಚರಣೆಗಳನ್ನು ತೀವ್ರವಾಗಿ ಖಂಡಿಸುತ್ತಾ ಮತ್ತು ಎದುರಿಸುತ್ತಾ ಬಂದಿದ್ದೇವೆ ಎಂದರು. ಇದಕ್ಕೆ ಮೂಲ ಕಾರಣ ಕ್ಯೂಬನ್ ಜನರಲ್ಲಿ ಸಮಾಜವಾದದ ಬಗ್ಗೆ ಇರುವ ಅಚಲ ನಂಬಿಕೆ ಹಾಗೂ ಅದನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಇರುವ ಐಕ್ಯತೆಯ ಇಚ್ಛಾಶಕ್ತಿ ಎಂದು ತಿಳಿಸಿದರು. ಪ್ರಸ್ತುತ "ನಾವೊಬ್ಬರೇ ಜಗತ್ತನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬ ಅರಿವು ನಮಗಿದೆ. ಆದರೆ, ನಾವೆಲ್ಲರೂ ಒಗ್ಗಟ್ಟಾಗಿ ಸಾಮ್ರಾಜ್ಯಶಾಹಿಯನ್ನು ಸೋಲಿಸುವುದು ಅಸಾದ್ಯವೇನಲ್ಲ" ಎಂದು ಅಲೀಡಾ ಗುವೇರಾ ಹೇಳಿದರು.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಕ್ಯೂಬಾ ಸಾಧಿಸಿದ ಅಗಾದ ಪ್ರಗತಿದಾಯಕ ಕಾರ್ಯ ಸಾಧನೆಗಳು ಯುಎಸ್ ನ ಎಲ್ಲಾ ತರದ ಕುತಂತ್ರಗಳನ್ನು ಸೋಲಿಸಲು ಪ್ರಧಾನ ಪಾತ್ರ ನಿರ್ವಹಿಸಿದೆ. ಕ್ಯೂಬಾ ದ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರ ಮತ್ತು ಕವಿಯಾದ ಜೋಸ್ ಮಾರ್ಟಿ ಯನ್ನು ಒಮ್ಮೆ ಆಹ್ವಾನಿಸಿದ್ದ ಸಂದರ್ಭದಲ್ಲಿ "ಉತ್ತಮ ಮಾನವರಾಗಲು ನಾವೆಲ್ಲರೂ ಹೇಗೆ ಕೆಲಸ ಮಾಡಬೇಕು" ಎಂಬುದರ ಕುರಿತು ಮಾರ್ಟಿ ಅವರ ಹೇಳಿಕೆಯನ್ನು ಪುನರುಚ್ಚರಿಸುವ ಮೂಲಕ ಕ್ಯೂಬಾ ಮಾನವೀಯತೆಯ ಶ್ರೇಷ್ಠ ನಾಡೆಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ ಎಂದು ಭಾಷಣ ಮುಗಿಸಿದರು. ನಂತರ, ಚೆಗುವೆರಾ ಕುರಿತಂತೆ ವಿದ್ಯಾರ್ಥಿಗಳು ಕ್ರಾಂತಿಗೀತೆಗಳನ್ನು ಹಾಡುತ್ತಿದ್ದ ಗುಂಪಿನೊಂದಿಗೆ ಸೇರಿಕೊಂಡು, ಅವರು ಸಹಾ ಹಾಡುತ್ತಾ ಕುಣಿದರು.

ಕ್ಯೂಬಾ ದ ಫೈವ್ ಖ್ಯಾತಿಯ ಫರ್ನಾಂಡೊ ಗೊನ್ಸಾಲೆಜ್ ಅವರು ಮಾತನಾಡುತ್ತಾ, ಕಳೆದ 60 ವರ್ಷಗಳಿಂದಲೂ, ಸಾಮ್ರಾಜ್ಯಶಾಹಿ ಅಮೇರಿಕದ ವಿನಾಶಕಾರಿ ಕುತಂತ್ರಗಳನ್ನು ವಿರೋಧಿಸಿಕೊಂಡು ಬರುತ್ತಿದ್ದೇವೆ. ಟ್ರಂಪ್ ಆಡಳಿತದಲ್ಲಿ ಇದನ್ನು ಇನ್ನೂ ತೀವ್ರವಾಗಿ ಎದುರಿಸಲು ಕ್ಯೂಬಾ ಸಜ್ಜಾಗಿದೆ ಎಂದರು. ಸಾಮ್ರಾಜ್ಯಶಾಹಿಯನ್ನು ದೃಢತೆಯಿಂದ ಹೇಗೆ ಎದುರಿಸಬಹುದೆಂದು, ಇತ್ತೀಚಿನ ದಿನಗಳಲ್ಲಿ ವೆನೆಜುವೆಲಾ, ವಿಯೆಟ್ನಾಂ ಮತ್ತು ಪ್ಯಾಲೆಸ್ಟೈನ್ ಬೆಳವಣಿಗೆಗಳು ನಮಗೆ ತೋರಿಸಿಕೊಟ್ಟಿವೆ ಎಂದು ಒತ್ತಿ ಹೇಳಿದರು. ಕ್ಯೂಬನ್ ಜನರ ಚಳುವಳಿಗೆ ವಿಶ್ವದಾದ್ಯಂತ ವ್ಯಕ್ತ ವಾಗುತ್ತಿರುವ ಸೌಹಾರ್ದಯುತ ಐಕ್ಯತೆಗಾಗಿ ಎಲ್ಲರಿಗೂ ಕೃತಜ್ಞತೆ ಅರ್ಪಿಸಿದ ಫರ್ನಾಂಡೊ ರವರು, ಅದರಲ್ಲೂ, ಭಾರತದ ಜನರಿಗೆ, ಪ್ರಮುಖ ವಾಗಿ ಎಡ ಪಕ್ಷಗಳಿಗೆ ವಿಶೇಷವಾಗಿ ಕೃತಜ್ಞತೆ ಹೇಳಿದರು.

ಕ್ಯೂಬಾವನ್ನು ಉಸಿರು ಗಟ್ಟಿಸುವಂತಹ ಪರಿಸ್ಥಿತಿಗೆ ನೂಕಲು ಅಮೇರಿಕ ನಡೆಸಿದ ಎಲ್ಲಾ ಹೊಸ ಹೊಸ ವಿವಿಧ ಬಗೆಯ ನಿರ್ಬಂಧಗಳನ್ನು ಕ್ಯೂಬನ್ ಜನರು ಮತ್ತು ಅಲ್ಲಿನ ಸಮಾಜವಾದಿ ಸರಕಾರ ಹೇಗೆ ಎದುರಿಸಿತು ಎಂಬ ಹಲವಾರು ಅಂಶಗಳನ್ನು ಎಳೆ ಎಳೆಯಾಗಿ ಸಭೆಗೆ ಫರ್ನಾಂಡೊ ವಿವರಿಸಿದರು. ಪ್ರತಿರೋಧ ಮತ್ತು ಸೌಹಾರ್ದಯುತ ಚಳುವಳಿಗಳನ್ನು ಮುರಿಯಲು ಯುಎಸ್ ನಡೆಸಿದ ಕುತಂತ್ರದ ಪ್ರಯತ್ನಗಳನ್ನು ತಿಳಿಸಿತ್ತಾ, ಟ್ರಂಪ್ ಅಧ್ಯಕ್ಷ ರಾದ ನಂತರ ಇಂತಹ ಪ್ರಯತ್ನಗಳು ಹೆಚ್ಚು ಅಕ್ರಮಣಕಾರಿಯಾಗಿ ಪರಿಣಮಿಸಿವೆ ಎಂದರು. ಕ್ಯೂಬನ್ ಫೈವ್ (ಇದರಲ್ಲಿ ಫರ್ನಾಂಡೊ ರವರು ಒಬ್ಬರು) ಅಮೇರಿಕ ಜೈಲಿನಿಂದ ಬಿಡುಗಡೆಯಾಗಿದ್ದು, ಕ್ಯೂಬಾದೊಂದಿಗೆ ವಿಶ್ವ ಸೌಹಾರ್ದ ಚಳುವಳಿಗಳ ವಿಜಯದ ಸಂಕೇತ. ಇದು ಅಮೆರಿಕಾ ಕ್ಕೆ ಆತಂಕ ಉಂಟು ಮಾಡುವಂತಹ ಸಂದೇಶವೂ ಕೂಡ ಹೌದು ಎಂದರು. ಇದೇ ರೀತಿಯಾಗಿ ಪ್ಯಾಲೆಸ್ಟೈನ್, ವೆನೆಜುವೆಲಾ ಹಾಗೂ ಲ್ಯಾಟಿನ್ ಅಮೆರಿಕದ ಅನೇಕ ದೇಶಗಳ ಕುರಿತಂತೆ, ಸಾಮ್ರಾಜ್ಯ ಶಾಹಿ ಅಮೆರಿಕಾ ರೂಪಿಸಿರುವ ಅಡೆತಡೆಗಳನ್ನು ನಿವಾರಿಸಿಕೊಳ್ಳಲು ಇಂತಹ ಸೌಹಾರ್ದ ಚಳುವಳಿಗಳು ತಿರ್ಮಾನಿಸುತ್ತವೆ ಎಂದರು.

ಸಭೆಯನ್ನು ಉದ್ದೇಶಿಸಿ ಸಿಪಿಐ ನಿಂದ ಕಾ.ಡಿ. ರಾಜ ಮತ್ತು ಸಿಪಿಐ(ಎಂ);ನಿಂದ ಕಾ. ಎಂ.ಎ. ಬೇಬಿ ಯವರು ಮಾತನಾಡಿದರು. ಇವರಿಬ್ಬರೂ, ಭಾರತೀಯ ಜನರ ಪರವಾಗಿ ಕ್ಯೂಬಾದೊಂದಿಗೆ ಸೌಹಾರ್ದತೆಯನ್ನು ಪುನರುಚ್ಚರಿಸಿದರು. ಸಾಮ್ರಾಜ್ಯ ಶಾಹಿ ವಿರುದ್ಧದ ಹೋರಾಟದಲ್ಲಿ ಕ್ಯೂಬಾ ಒಂಟಿಯಾಗಿಲ್ಲ. ಇಡೀ ಜಗತ್ತೇ ನಿಮ್ಮೊಂದಿಗಿದೆ ಎಂದರು. ಅಮೇರಿಕ ಕ್ಯೂಬಾ ದ ಮೇಲೆ ನಿರ್ಬಂಧಗಳನ್ನು ಹೇರುವಾಗ, ಅಮೆರಿಕ ಮತ್ತು ಇಸ್ರೇಲ್ ಹೊರೆತು ಪಡಿಸಿ, ಉಳಿದ ಜಗತ್ತಿನ ರಾಷ್ಟ್ರಗಳು ವಿಶ್ವಸಂಸ್ಥೆಯಲ್ಲಿ ಕ್ಯೂಬಾದ ಮೇಲಿನ ನಿರ್ಬಂಧಗಳನ್ನು ವಿರೋಧಿಸಿ ಮತ ಚಲಾಯಿಸಿದ್ದು, ಅಂದು ಅಮೆರಿಕಾ ಕ್ಕೆ ಮುಖ ಭಂಗವಾಗಿತ್ತು ಎಂಬದನ್ನು ಡಿ. ರಾಜ ಸಭೆಗೆ ನೆನಪಿಸಿದರು.

ಕ್ಯೂಬಾ ದ ಕತ್ತು ಹಿಸುಕುವ ಉದ್ದೇಶ ದಿಂದ ಹೆಲ್ಮ್ಸ್–ಬರ್ಟನ್ ಕಾಯಿದೆಯ ಶೀರ್ಷಿಕೆ -III ಅನ್ನು ಸಕ್ರಿಯ ಗೊಳಿಸುವ ಅಮೇರಿಕ ನಿರ್ಧಾರವನ್ನು ಎಂ.ಎ.ಬೇಬಿ ಯವರು ಉಗ್ರವಾಗಿ ಟೀಕಿಸುತ್ತಾ. ಭಾರತೀಯರು ಸದಾ ಕ್ಯೂಬನ್ನರ ಚಳುವಳಿಯ ಭಾಗವಾಗಿ ಇರಲು ಬಯಸುತ್ತಾರೆ. ಏಕೆಂದರೆ, ಕ್ಯೂಬನ್ನರು ಅಮೆರಿಕದಿಂದ ಎದುರಿಸುತ್ತಿರುವ ದಾಳಿಗಳು ಬೇರೆ, ಭಾರತೀಯರು ಸಾಮ್ರಾಜ್ಯಶಾಹಿಗಳಿಂದ ಎದುರಿಸುತ್ತಿರುವ ಆಕ್ರಮಣಗಳು ಬೇರೆ ಎಂದೂ ಭಾವಿಸಿಲ್ಲ. ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟಗಳು ವಿಶ್ವದಲ್ಲಿ ಎಲ್ಲಿ ನಡೆದರೂ ಸಹಾ, ಭಾರತೀಯರು ಆ ಜನರೊಂದಿಗೆ ದೃಡವಾಗಿ ನಿಲ್ಲುತ್ತಾರೆ ಎಂದು ಬೇಬಿಯವರು ಪುನರುಚ್ಚಿಸಿದರು.

ಈ ಸಭೆಯಲ್ಲಿ ಕ್ಯೂಬಾ ದ ರಾಯಬಾರಿ ಆಸ್ಕರ್ ಮಾರ್ಟಿನೆಜ್ ಹಾಜರಿದ್ದು, ಪ್ರೊ.ಚಮನ್ ಲಾಲ್ ರವರು ಭಗತ್ ಸಿಂಗ್ ಬಗ್ಗೆ ಬರೆದಿದ್ದ ಹಲವಾರು ಪುಸ್ತಕಗಳನ್ನು ಅಲೀಡಾ ಗುವೇರಾ ರವರಿಗೆ ನೀಡಿದರು. ಈ ಸಭೆಯಲ್ಲಿ, ವೆನೆಜುವೆಲಾ, ಪ್ಯಾಲೆಸ್ಟೈನ್ ರಾಯಭಾರಿಗಳು. ವಿಯೆಟ್ನಾಂ, ಅಲ್ಜೇರಿಯಾ, ಅಂಗೋಲಾ, ಕಾಂಬೋಡಿಯಾ, ಮತ್ತು ಇರಾನ್ ನ ರಾಜತಾಂತ್ರಿಕರು ಉಪಸ್ಥಿತರಿದ್ದರು. ಜೆಎನ್ ಯು ವಿದ್ಯಾರ್ಥಿಗಳ ತಂಡವೊಂದು ಕ್ರಾಂತಿಕಾರಿ ಗೀತೆಗಳನ್ನು ಹಾಡಿತು. ●

➔ ಸರ್ಕಾರದಿಂದ ಹಗೆತನವನ್ನು ಹೇಗೆ ಎದುರಿಸಿದರು. ಕ್ಯೂಬಾ ವನ್ನು ಒಂದು ಸ್ವತಂತ್ರ ದೇಶವೆಂದು ಒಪ್ಪಿಕೊಳ್ಳಲು ಅಮೆರಿಕಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ, ಕಳೆದ 60 ವರ್ಷಗಳಿಂದಲೂ ನಿರಂತರವಾಗಿ ಸಮಾಜವಾದಿ ಕ್ಯೂಬಾ ವನ್ನು ಮತ್ತು ಅದರ ಕ್ರಾಂತಿಕಾರಿ ಯೋಜನೆಯನ್ನು ನಾಶಪಡಿಸಲು ಪ್ರಯತ್ನಿಸುತ್ತಿದೆ. ಇದಕ್ಕೆ, ಸಾಕ್ಷಿಯಾಗಿ 1960 ದಶಕದ, ಯುಎಸ್ ಸ್ಟೇಟ್ ಡಿಪಾರ್ಟ್‌ಮೆಂಟ್ ದಾಖಲೆಗಳು ಇದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಕ್ಯೂಬಾ ದ ಕತ್ತು ಹಿಸುಕಕುವುದು, ಕ್ಯೂಬನ್ ಜನರನ್ನು ತೊಂದರೆಗೆ ಸಿಕ್ಕಿಸುವುದರಿಂದ ಕ್ಯೂಬನ್ ಜನರು ಸರ್ಕಾರದ ವಿರುದ್ಧ ದಂಗೆ ಏಳುತ್ತಾರೆ ಎಂದು ಅಂದಾಜು ಮಾಡಲಾಗಿತ್ತು. ಆದರೆ, ಕ್ಯೂಬನ್ ಜನರಲ್ಲಿನ ಸಮಾಜವಾದದಲ್ಲಿ ಇದ್ದ ಅಚಲ ನಂಬಿಕೆ, ರಾಜಕೀಯ ಪ್ರಜ್ಞೆ ಹಾಗೂ ಸಾಮ್ರಾಜ್ಯ ಶಾಹಿಯ ವಿರುದ್ಧದ ಗಟ್ಟಿತನ ಗಳಿಂದಾಗಿ ಅಮೆರಿಕಾ ದ ಎಲ್ಲಾ ರೀತಿಯ ದಿಗ್ಬಂಧನದ ಸಂಚುಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಿದೆ ಎಂದು ವಿವರಿಸಿದರು.



ಕ್ಯೂಬಾದ ಕತ್ತು ಹಿಸುಕಿ ಹಾಕುವ ಒಳಸಂಚು ನಡೆಯುತ್ತಿದೆ. ಕ್ಯೂಬಾಕ್ಕೆ ಪೆಟ್ರೋಲಿಯಂ ಮಾರಾಟಕ್ಕೆ ನಿರ್ಬಂಧಗಳನ್ನು ವಿಧಿಸಲಾಗಿದೆ. ಕ್ಯೂಬಾಕ್ಕೆ ಬರುತ್ತಿದ್ದ ವೆನೆಜುವೆಲಾದ ತೈಲದ ಹಡಗುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಕ್ಯೂಬಾ ಕ್ಕೆ ಉಸಿರು ಗಟ್ಟಿಸುವ ಸಲುವಾಗಿ ಅಮೇರಿಕ ಸರ್ಕಾರ ಇದನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದಿದೆ. ಈ ಕ್ರಮಗಳ ಉತ್ತುಂಗವೆಂದರೆ ಹೆಲ್ಮ್ಸ್–ಬರ್ಟನ್ ಕಾಯಿದೆಯ ಶೀರ್ಷಿಕೆ–III ರ ಅನ್ವಯಿಕ. ಇದರಂತೆ, ಯುಎಸ್ ನ ನಾಗರೀಕರು ಕ್ಯೂಬಾ ದಲ್ಲಿ ಆಸ್ತಿ ಹಕ್ಕು ಪಡೆಯುವ ಕಾನೂನು ಮೊಕದ್ದಮೆ ಗಳನ್ನು ಸಲ್ಲಿಸಲು ಅನುವು ಮಾಡಿಕೊಡುತ್ತದೆ.

ಈ ಹಿನ್ನೆಲೆಯಲ್ಲಿ ಐಸಿಎಪಿ ಹೆಲ್ಮ್ಸ್–ಬರ್ಟನ್ ಕಾಯಿದೆಯ ಅನ್ವಯ ದ ವಿರುದ್ಧ ಕ್ಯೂಬಾ ವಿಶ್ವದ ಜನತೆಯ ಅಭಿಪ್ರಾಯವನ್ನು ಒಗ್ಗೂಡಿಸುತ್ತಿದೆ. ಈ ಕ್ರೂರ ಕಾನೂನು ನ್ನು ವಿರೋಧಿಸಲು ವಿಶ್ವ ಜನತೆಯ ಸೌಹಾರ್ದವನ್ನು ಬಯಸುತ್ತದೆ. ಆರ್ಥಿಕ ನಿರ್ಬಂಧಗಳಿಂದಾಗಿ ಕ್ಯೂಬಾಕ್ಕೆ ಸುಮಾರು 933 ಶತಕೋಟಿ ಡಾಲರ್ ಗಿಂತ ಹೆಚ್ಚು ನಷ್ಟ ಆಗಿದೆ. ಆರೋಗ್ಯ ಕ್ಷೇತ್ರದ ಮೇಲೆ ಹೆಚ್ಚಿನ ಪರಿಣಾಮ ಬೀರಿದೆ. ನಿರ್ಬಂಧಗಳಿಂದಾಗಿ ಕ್ಯೂಬಾಕ್ಕೆ ಅಗತ್ಯ ಇರುವ ಔಷಧಿಗಳ ತಯಾರಿಕೆಯ ಉಪಕರಣಗಳು ಮತ್ತು ಔಷಧಿಗಳನ್ನು ಆಮದು ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿಯೇ ಅನೇಕ ಜನರು ಕಾಯಿಲೆಗಳಿಗೆ ವೈದ್ಯಕೀಯ ಚಿಕಿತ್ಸೆ ಅಥವಾ ಔಷಧಿಗಳಿಂದ ವಂಚಿತರಾಗಿದ್ದಾರೆ ಎಂದು ವಿವರಣೆ ನೀಡಿದರು.

ಈ ವರ್ಷ ಏಪ್ರಿಲ್ 19;ರಂದು ಅಂಗೀಕರಿಸಲ್ಪಟ್ಟ ಹೊಸ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ಫರ್ನಾಂಡೊ ಮಾಧ್ಯಮಕ್ಕೆ ವಿವರಿಸಿದರು. ಪ್ರಪಂಚದ ಹಾಗೂ ಕ್ಯೂಬಾದ ಬದಲಾದ ವಾಸ್ತವತೆಗೆ ಸರಿಹೊಂದುವಂತೆ, ಹಳೆಯ ಸಂವಿಧಾನದ ಮೂಲಾಶಯಗಳನ್ನು ಉಳಿಸಿಕೊಂಡು, ಪ್ರಸ್ತುತ ಕ್ಯೂಬನ್ ಜನರ ಗುಣಲಕ್ಷಣಗಳನ್ನು ಪರಿಗಣನೆಗೆ ತೆಗೆದುಕೊಂಡು, ಸಂವಿಧಾನವನ್ನು ನವೀಕರಿಸಲಾಗಿದೆ. 1976ರಲ್ಲಿ ಆರ್ಥಿಕತೆಯು ಸಂಪೂರ್ಣವಾಗಿ ಪ್ರಭುತ್ವದ ನಿಯಂತ್ರಣ ದಲ್ಕಿತ್ತು. ಈಗ ಅದು, ಪ್ರಧಾನವಾಗಿ ಪ್ರಭುತ್ವದ ನಿಯಂತ್ರಣದಲ್ಲಿಯೇ ಮುಂದುವರಿದಿದ್ದರೂ ಸಹಾ, ಇದೀಗ ಬದಲಾದ ಸಂವಿಧಾನದಲ್ಲಿ ಸಹಕಾರಿ ಸಂಸ್ಥೆಗಳಿವೆ. ಹಾಗೆಯೇ ವಿದೇಶಿ ಹೂಡಿಕೆ ಒಳಗೊಂಡಿದೆ. ಆದರೆ, ಈ ಸ್ವರೂಪಗಳಿಗೆ ಸಾಂವಿಧಾನಿಕ ಕಾನೂನಿನ ಬದ್ಧತೆಯನ್ನು ಉಳಿಸಿಕೊಳ್ಳಲಾಗಿದೆ. ಎಂಬ ಹಲವಾರು ಅಂಶಗಳನ್ನು ಫರ್ನಾಂಡೊ ರವರು ತಿಳಿಸಿಕೊಟ್ಟರು. ●

JANASHAKTHI KANNADA VARA PATRIKE August 12-18, 2019 Price: Rs. 10/- Date of Publication: 9 August 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



ಕರ್ನಾಟಕದಲ್ಲಿ ರೈತ ಚಳುವಳಿಗಳು ಮಂಗಳೂರಿನಲ್ಲಿ ಕೆ.ಆರ್. ಶ್ರೀಯಾನ್ ಕೃತಿ ಲೋಕಾರ್ಪಣೆ



ಹಿರಿಯ ಕಮ್ಯುನಿಸ್ಟ್ ಮುಖಂಡರಾದ ಕೆ.ಆರ್. ಶ್ರೀಯಾನ್‌ರವರು ಬರೆದ ಪುಸ್ತಕದಲ್ಲಿ ಅಖಿಲ ಭಾರತ ಕಿಸಾನ್ ಸಭಾ ಚಳುವಳಿಗಳನ್ನು ವಿವರಿಸಿದ್ದಾರೆ. ದೇಶದಲ್ಲಿ ರೈತರು ತಮ್ಮ ಕಾಲ ಮೇಲೆ ನಿಲ್ಲುವ ಹಾಗೆ ಆಗುವಲ್ಲಿ ದೇಶದಲ್ಲಿ ನಡೆದ ರೈತ ಚಳುವಳಿಗಳ ಪಾತ್ರ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಇದು ಆದುದನ್ನು ನಾವು ಕಂಡಿದ್ದೇವೆ ಎಂಬುದಾಗಿ ಕರ್ನಾಟಕ ರಾಜ್ಯದ ಮಾಜಿ ಸಚಿವ ಬಿ. ರಮಾನಾಥ ರೈ ಹೇಳಿದರು.

ಅವರು ಆಗಸ್ಟ್ 4ರ ಭಾನುವಾರ ಮಂಗಳೂರಿನ ಸರಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಸಮಿತಿ ಏರ್ಪಡಿಸಿದ ಸಮಾರಂಭದಲ್ಲಿ ಕೆ.ಆರ್. ಶ್ರೀಯಾನ್ ಬರೆದ "ಕರ್ನಾಟಕದ ರೈತ ಚಳುವಳಿಗಳು" ಪುಸ್ತಕವನ್ನು ಲೋಕಾರ್ಪಣೆ ಮಾಡಿ ಮಾತನಾಡುತ್ತಿದ್ದರು.

ತಾನು ಭೂಮಾಲೀಕರ ಕುಟುಂಬದಿಂದ ಬಂದಿದ್ದರೂ, ರಾಜಕೀಯ ರಂಗಕ್ಕೆ ಬಂದುದರಿಂದ ಗೇಣಿದಾರ ರೈತರ, ಬಡ ಕೃಷಿಕೂಲಿಕಾರರ ನೋವನ್ನು ತಿಳಿದುಕೊಂಡಿದ್ದೇನೆ. ಇವತ್ತು ಪ್ರಗತಿಪರ ಜಿಲ್ಲೆ ಎಂದೆನಿಸಿರುವ ದ.ಕ. ಜಿಲ್ಲೆಯಲ್ಲಿ ಹಲವಾರು ವರ್ಷಗಳ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಆಲೋಚಿಸಿದಾಗ, ಕಮ್ಯುನಿಸ್ಟ್ ನೇತೃತ್ವದ ರೈತ ಚಳುವಳಿ ಹೋರಾಟಗಳು ಜಿಲ್ಲೆಯ ಬದಲಾವಣೆಯಲ್ಲಿ ಪಾತ್ರ ವಹಿಸಿದೆ ಎಂಬುದು ನಿಜ. ಈ ಚಳುವಳಿಗಳನ್ನು ಮುನ್ನಡೆಸಿದ ಎಂ.ಎಚ್. ಕೃಷ್ಣಪ್ಪ, ಬಿ.ವಿ. ಕಕ್ಕಿಲ್ಲಾಯ, ಎ. ಕೃಷ್ಣ ಶೆಟ್ಟಿ, ಕೆ.ಆರ್. ಶ್ರೀಯಾನ್ ಸ್ಮರಣೀಯರಾಗಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.


ಹಿರಿಯ ಲೇಖಕ ಹಾಗೂ ಚಿಂತಕ ರಾಜಶೇಖರ್ ಅವರು ಮಾತನಾಡಿ, ಕಿಸಾನ್‌ಸಭಾ ನೇತೃತ್ವದಲ್ಲಿ ದೇಶಾದ್ಯಂತ ರೈತ ಚಳುವಳಿಗಳು ಭೂಮಾಲಕವರ್ಗದ ವಿರುದ್ಧ ತೀವ್ರಗತಿಯಲ್ಲಿ ಎದ್ದು ಬಂದವು. ಎದುರಾಳಿಗಳಿಗೆ ಅವರ ತಂತ್ರಗಳಿಂದಲೇ ಎದುರೇಟು ನೀಡುವ ವಕ್ರಮಾರ್ಗವನ್ನು ಆಳುವ ಕಾಂಗ್ರೆಸ್ ಸರಕಾರಗಳು ಅನುಸರಿಸಿದವು. ಅದರ ಭಾಗವಾಗಿಯೇ ವಿನೋಭಾ ಭಾವೆಯಿಂದ ಭೂದಾನ ಚಳುವಳಿ ನಡೆಯಿತು. ಮೈಸೂರು ರಾಜ್ಯ ಹುಟ್ಟಿದ ಆರಂಭದಲ್ಲಿ ಅನುಷ್ಠಾನಗೊಂಡ ಬಿ.ಡಿ. ಜತ್ತಿ ವರದಿಯ ಅನುಷ್ಠಾನದಿಂದ ತೋರಿಕೆಯ ಭೂಸುಧಾರಣೆ ನಡೆಯಿತು. ಅನೇಕ ರಾಜ್ಯಗಳಲ್ಲಿ ನಡೆದಿರುವುದು ಭೂಸುಧಾರಣೆಯ ಅಣಕು ಮಾತ್ರ. ಇಂಥ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ 'ಉಳುವವನೇ ಹೊಲದೊಡೆಯ' ಘೋಷಣೆಯೊಂದಿಗೆ 5 ಲಕ್ಷ ಗೇಣಿದಾರ ರೈತರಿಗೆ ಭೂಮಿಗಾಗಿ ಹೋರಾಟ ನಡೆಸಿತು. ದ.ಕ., ಉತ್ತರಕನ್ನಡ, ಶಿವಮೊಗ್ಗ ಜಿಲ್ಲೆಯಿಂದ ಮೊದಲುಗೊಂಡ ಕರ್ನಾಟಕ ರೈತ ಹೋರಾಟಗಳ ದಾಖಲೀಕರಣವನ್ನು ಕೆ.ಆರ್. ಶ್ರೀಯಾನರು ತಮ್ಮ ಪುಸ್ತಕದಲ್ಲಿ ಮಾಡಿದ್ದಾರೆ ಎಂದು ವಿವರಿಸಿದರು.

ಇನ್ನೂರು ವರ್ಷಗಳ ಹಿಂದೆ ಟಿಪ್ಪುಸುಲ್ತಾನನು ಭೂಮಾಲಿಕರ ಭೂಮಿ ಕಡಿತಗೊಳಿಸಿ, ಬಡರೈತರಿಗೆ ಭೂಮಿ ಹಂಚಿಕೆ ಮಾಡಿದ್ದ. ಇದರಿಂದ ಆತ ಒಂದೆಡೆ ಭೂಮಾಲಿಕರ ವಿರೋಧ ಕಟ್ಟಿಕೊಂಡಿದ್ದ. ಬಡಜನರು ಅವನ ಬಗ್ಗೆ ಜನಪದ ಕಾವ್ಯ ಕಟ್ಟಿ ಹಾಡಿದರು. ಟಿಪ್ಪು ಬಗ್ಗೆ ಈ ಎರಡೂ ಬಗೆಯ ನಿರೂಪಣೆಗಳನ್ನು ನ್ ೋ ಡ್ ು ತ್ ್ ೀ ವ್'. ಇದ್ಯಾವುದನ್ನೂ ವಿಚಾರ ಮಾಡದೆ ಟಿಪ್ಪುವಿನ ಮೇಲೆ ಇವತ್ತಿಗೂ ದ್ವೇಷ ಕಾರಲಾಗುತ್ತದೆ ಎಂದು ಜಿ. ರಾಜಶೇಖರ ವಿಷಾದಿಸಿದರು.



ವರದಿ : ವಾಸುದೇವ ಉ.

ಇವತ್ತು ರೈತರಿಗೂ ಜನಸಾಮಾನ್ಯರಿಗೂ ಕಷ್ಟಜೀವನಕ್ಕೆ ಕಾರಣವಾಗಿರುವ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಆರಂಭವಾದುದು ಕಾಂಗ್ರೆಸ್ ಆಡಳಿತದ ಕಾಲದಲ್ಲೇ. ನರಸಿಂಹರಾವ್, ಮನಮೋಹನಸಿಂಗ್‌ರಿಂದ ಆರಂಭವಾದ ಜಾಗತೀಕರಣದ ಪ್ರಕ್ರಿಯೆಗೆ ಮೋದಿಯವರ ಕಾಲದಲ್ಲಿ ವೇದೋತ್ಕರ್ಷ ದೊರೆತಿದೆ. ರೈತರ ಜೊತೆ ದೇಶದ ಹಲವು ರಾಜ್ಯಗಳ ಆದಿವಾಸಿಗಳೂ ತಮ್ಮ ನೆಲೆ ಕಳೆದುಕೊಳ್ಳುವಂತಾಗಿದೆ ಎಂದು ಜಿ. ರಾಜಶೇಖರ ಆಕ್ರೋಶ ವ್ಯಕ್ತಪಡಿಸಿದರು.



ಸಭೆಯ ಅಧ್ಯಕ್ಷತೆ ವಹಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಮಾರುತಿ ಮಾನ್ಪಡೆ ಮಾತನಾಡಿ, ಭೂಮಿ ಹಂಚಿಕೆ ಪ್ರಶ್ನೆಯೊಂದಿಗೆ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ, ವಿದ್ಯುತ್, ನೀರಾವರಿ ಸೌಲಭ್ಯಗಳು ಹಾಗೂ ಕೃಷಿ ಬೀಜದ ಲಭ್ಯತೆಯ ಪ್ರಶ್ನೆಯನ್ನು ರೈತ ಚಳುವಳಿಗಳು ಇವತ್ತು ಎತ್ತಿಕೊಂಡಿವೆ. ಕೃಷಿ ಉತ್ಪನ್ನ ವೆಚ್ಚದ ಒಂದೂವರೆ ಪಟ್ಟು ಬೆಲೆ ನಿಗದಿಗೊಳಿಸಬೇಕೆಂಬ ವಿಜ್ಞಾನಿ ಎಂ.ಎಸ್. ಸ್ವಾಮಿನಾಥನ್ ವರದಿ ಯಾವ ಸರಕಾರಗಳೂ ಜಾರಿ ಮಾಡುತ್ತಿಲ್ಲ. ಅದನ್ನು ಜಾರಿ ಮಾಡಿಯೇ ಸಿದ್ಧ ಎಂದು ಮೋದಿಯವರು ಅಧಿಕಾರಕ್ಕೆ ಬಂದು 5 ವರ್ಷಗಳಾಗಿವೆ. ರೈತರ ಬಡತನ, ಆತ್ಮಹತ್ಯೆಗಳು ಮುಂದುವರಿದಿವೆ. ಪ್ರಧಾನಿ ಮೋದಿಯವರ ಆಪ್ತರಾದ ಅಂಬಾನಿ, ಅದಾನಿಗಳ ಸಂಪತ್ತು ಹೆಚ್ಚುತ್ತಲೇ ಹೋಗಿದೆ ಎಂದರು.

75 ಲಕ್ಷ ರೈತರು, 62 ಲಕ್ಷ ಕೃಷಿ ಕೂಲಿಕಾರರ ಹಿತರಕ್ಷಣೆ ಇವತ್ತು ರೈತ ಚಳುವಳಿಯ ಸವಾಲಾಗಿದೆ. ಅರಣ್ಯ ಪ್ರದೇಶದಲ್ಲಿ ಕೃಷಿ ಅಭಿವೃದ್ಧಿಗೊಳಿಸಿದವರಿಲ್ಲ. ಜಮೀನು ಹಕ್ಕು ಸಿಕ್ಕಿಲ್ಲ. ಗೋಮಾಳ ಭೂಮಿಯ ಬಗ್ಗೆ ಕಾಗೋಡು ತಿಮ್ಮಪ್ಪ ಉತ್ಸಾಹದಿಂದ ತಂದ ಕಾನೂನು ಅನುಷ್ಠಾನದಲ್ಲಿ ನೆನೆಗುದಿಗೆ ಬಿದ್ದಿದೆ. ರಾಷ್ಟ್ರಮಟ್ಟದಲ್ಲಿ ಬೀಜೋತ್ಪಾದನೆ ವಿತರಣೆಯನ್ನು ಬಹುರಾಷ್ಟ್ರೀಯ ಕಂಪೆನಿಗಳು ಹತೋಟಿಯಲ್ಲಿಡಲು ಪ್ರಯತ್ನಿಸುತ್ತಿವೆ. ಕೈಗಾರಿಕಾ ಸಂಸ್ಥೆಗಳು ರೈತರ ಭೂಮಿಯನ್ನು ಅಗ್ಗದ ಬೆಲೆಗೆ ಕೊಂಡುಕೊಳ್ಳುವುದಕ್ಕಾಗಿ ಸರಕಾರದ ಮೂಲಕವೇ ವಶಕ್ಕೆ ಪಡೆದುಕೊಳ್ಳುವುದಕ್ಕಾಗಿ ಭೂಸ್ವಾಧೀನ ಕಾಯಿದೆಗೆ ತಿದ್ದುಪಡಿ ತರಲು ಸರಕಾರಗಳ ಮೇಲೆ ಒತ್ತಡ ಹಾಕುತ್ತಿವೆ. ಸಾಮ್ರಾಜ್ಯವಾದಿಗಳು ರೈತರ ಮೇಲೆ ದಬ್ಬಾಳಿಕೆ ಈ ಮೂಲಕ ನಡೆಸುತ್ತಿದೆ.

ಸಾಮ್ರಾಜ್ಯಶಾಹಿ ದಮನದ ವಿರುದ್ಧ ಹಲವಾರು ರೈತ ಸಂಘಟನೆಗಳು ರಾಷ್ಟ್ರಮಟ್ಟದಲ್ಲಿ ಒಗ್ಗೂಡಿವೆ. ಕರ್ನಾಟಕದಲ್ಲೂ ಇದು ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ರೈತ ಹೋರಾಟಗಾರರು ರೈತ ಚಳುವಳಿಯ ಚರಿತ್ರೆಯನ್ನು ತಿಳಿಯಬೇಕಾಗಿದೆ. ಕೆ.ಆರ್. ಶ್ರೀಯಾನ್‌ರ ಪುಸ್ತಕವು ಹೋರಾಟಗಾರರಿಗೆ ಒಂದು ಕೈಪಿಡಿಯಾಗಿದೆ ಎಂದು ಮಾರುತಿ ಮಾನ್ಪಡೆ ತಿಳಿಸಿದರು.

ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ರಾಜ್ಯ ಕಾರ್ಯದರ್ಶಿ ರವಿಕಿರಣ ಪುಣಚ್ಚ ಅವರು ತೋಟಗಾರಿಕೆ ಬೆಳೆಗಾರರ ಸಮಸ್ಯೆಗಳು ಮತ್ತು ವಿದೇಶೀ ಒತ್ತಡಗಳ ಬಗ್ಗೆ ವಿಶ್ಲೇಷಣೆ ಮಾಡಿದರು.

ಪ್ರಕಾಶಕರ ವತಿಯಿಂದ ಕ್ರಿಯಾ ಮಾಧ್ಯಮ ಪ್ರೈ.ಲಿ. ನಿರ್ದೇಶಕರಾದ ಯಶವಂತ ಮರೋಳಿ ಲೇಖಕರಿಗೆ ಅಭಿನಂದನೆ ಸಲ್ಲಿಸಿದರು. ಲೇಖಕ ಕೆ.ಆರ್. ಶ್ರೀಯಾನ್ ತಾವು 60 ವರ್ಷಗಳಿಗೂ ಮೀರಿ ರೈತ ಚಳುವಳಿಯಲ್ಲಿ ಭಾಗಿಯಾಗಿದ್ದ ಕಾರಣ ಮಿತ್ರರ ಪ್ರೇರೇಪಣೆಯಿಂದ ಪುಸ್ತಕ ಬರೆದುದಾಗಿ ಹೇಳಿ ಕೃತಜ್ಞತೆ ಅರ್ಪಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ ಸ್ವಾಗತಿಸಿದರು. ಅಧ್ಯಕ್ಷರಾದ ಕೃಷ್ಣಪ್ಪ ಸಾಲ್ಯಾನ್ ವಂದಿಸಿದರು. ಸುನೀಲ್‌ಕುಮಾರ್ ಬಜಾಲ್ ಕಾರ್ಯಕ್ರಮ ನಿರ್ವಹಿಸಿದರು. ●



370ನೇ ವಿಧಿಯ ರದ್ದು ವಿರೋಧಿಸಿ ಬೆಂಗಳೂರಿನ ಟೌನ್‌ಹಾಲ್ ಎದುರು ಪ್ರತಿಭಟನೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**